ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1249

ವಿಧಾನ ಸಭೆ ಸದಸ್ಯರ ಹೆಸರು : ಶ್ರೀ ಸಿ.ಎಂ. ನಿಂಬಣ್ಣನವರ್ (ಕಲಘಟಗಿ)

ಉತ್ತರಿಸುವವರು : ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಕನ್ನಡ ಮತ್ತು ಸಂಸ್ಕೃತಿ ಸಚಿವರು

ಉತ್ತರಿಸಬೇಕಾದ ದಿನಾಂಕ : 18/12/2018

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದ ಅಂಗನವಾಡಿ ಕಾರ್ಯಕರ್ತೆಯರಿಗೆ ಹಾಗೂ ಸಹಾಯಕಿಯರಿಗೆ ಸರ್ಕಾರ ಹಲವಾರು ಇಲಾಖೆಗಳಿಂದ ಅವ್ಯೆಜ್ಞಾನಿಕ ಕೆಲಸದ ಒತ್ತಡವನ್ನು ಹೇರಿ ರಾಜ್ಯಾದ್ಯಂತ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯು ವಿಫಲವಾಗಿ ಶಾಲಾಪೂರ್ವ ಮಕ್ಕಳ ಶಿಕ್ಷಣ ಗುಣಮಟ್ಟ ಕುಸಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿಯರಿಗೆ ಅವ್ಯೆಜ್ಞಾನಿಕ ಕೆಲಸದ ಒತ್ತಡವನ್ನು ಹೇರಲಾಗುತ್ತಿಲ್ಲ. ಇತರೆ ಇಲಾಖೆಗಳ ಕಾರ್ಯಗಳಿಗೆ ಬಳಸಿಕೊಳ್ಳದಿರಲು ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಹಾಗೂ ಇತರೆ ಕೆಲಸಗಳಿಗೆ ನಿವೃತ್ತಿಯಾದ ಅಂಗನವಾಡಿ ಕಾರ್ಯಕರ್ತೆಯರನ್ನು ಬಳಸಿಕೊಳ್ಳುವಂತೆ ಸೂಚಿಸಲಾಗಿದೆ. ಪತ್ರದ ಪ್ರತಿಯನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ. ರಾಜ್ಯದಲ್ಲಿ 65911 ಅಂಗನವಾಡಿ ಕೇಂದ್ರಗಳು ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದ್ದು, 3 ರಿಂದ 6 ವರ್ಷದ 16,40,170 ಮಕ್ಕಳಿಗೆ ಅನೌಪಚಾರಿಕ ಶಾಲಾ ಪೂರ್ವ ಶಿಕ್ಷಣವನ್ನು ನೀಡಲಾಗುತ್ತಿದೆ.
ಆ)	ಅಂಗನವಾಡಿ ಕಾರ್ಯಕರ್ತೆಯರನ್ನು ವರ್ಷದಾದ್ಯಂತ ಕಂದಾಯ ಇಲಾಖೆ ಮತ್ತು ವಿವಿಧ ಆರೋಗ್ಯ ಕಾರ್ಯಕ್ರಮಗಳಿಗೆ ಚುಚ್ಚುಮದ್ದು ಮತ್ತು ಪೋಲೀಯೋ ಲಸಿಕೆ ಹಾಕಲು ಮತ್ತು ಪ್ರಚಾರ ಜಾಗೃತಿ ಮತ್ತು ಸರ್ವೆ ಮತ್ತು ಇನ್ನಿತರೆ ಕಾರ್ಯಗಳಿಗೆ ಇವರುಗಳನ್ನು ಬಳಸಿಕೊಳ್ಳುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಅಂಗನವಾಡಿ ಕಾರ್ಯಕರ್ತೆಯರನ್ನು ಇಲಾಖೆಯ ಕೆಲಸಕ್ಕೆ ಹೊರತುಪಡಿಸಿ ಇತರೆ ಕೆಲಸಗಳಿಗೆ ಬಳಸಲಾಗುತ್ತಿಲ್ಲ. ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ ಕೆಲಸ ನಿರ್ವಹಿಸುತ್ತಿದ್ದು, ಚುಚ್ಚುಮದ್ದು ಮತ್ತು ಪೋಲಿಯೋ ಲಸಿಕೆ ಕಾರ್ಯಕ್ರಮ ಯೋಜನೆಯ ಕೆಲಸವಾಗಿರುತ್ತದೆ. ಕಂದಾಯ ಇಲಾಖೆ, ಸರ್ವೆ ಮತ್ತು ಇನ್ನಿತರೆ ಕಾರ್ಯಗಳಿಗೆ ಅಂಗನವಾಡಿ ಕಾರ್ಯಕರ್ತೆಯರನ್ನು ನಿಯೋಜಿಸದಿರಲು ಹಾಗೂ ಅವರ ಬದಲಿಗೆ ನಿವೃತ್ತ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ಸೇವೆ ಪಡೆಯಲು ಜಿಲ್ಲಾಧಿಕಾರಿಗಳಿಗೆ ಈಗಾಗಲೇ ತಿಳಿಸಲಾಗಿದೆ.

ಇ)	ವರ್ಷದಾದ್ಯಂತ ಚುನಾವಣೆ ಗುರುತಿನ ಚೀಟಿ ಮಾಡಲು ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ ಮತ್ತು ತೆಗೆಯಲು ಅಂಗನವಾಡಿ ಕಾರ್ಯಕರ್ತೆಯರನ್ನು ಬಿ.ಎಲ್.ಓ ಕಾರ್ಯಕ್ಕೆ ಬಳಸಿಕೊಳ್ಳುವುದು ಅವೈಜ್ಞಾನಿಕವಾಗಿದ್ದು, ಈ ಕೆಲಸಕ್ಕೆ ರಾಜ್ಯಾದ್ಯಂತ ಎಷ್ಟು ಅಂಗನವಾಡಿ ಕಾರ್ಯಕರ್ತರನ್ನು ಬಳಸಿಕೊಳ್ಳಲಾಗಿದೆ; ಈ ಕೆಲಸದಿಂದ ಮುಕ್ತಗೊಳಿಸಲು ಸರ್ಕಾರ ಯಾವ ಕ್ರಮಗೊಳ್ಳಲಿದೆ (ಅಂಕಿ-ಅಂಶಗಳೊಂದಿಗೆ ಮಾಹಿತಿ ನೀಡುವುದು)	ಅಂಗನವಾಡಿ ಕಾರ್ಯಕರ್ತೆಯರನ್ನು ಬಿ.ಎಲ್.ಓ ಕಾರ್ಯಕ್ಕೆ ಬಳಸಿಕೊಂಡಿರುವವರ ಸಂಖ್ಯೆ: 22279 ಜಿಲ್ಲಾವಾರು ಅಂಕಿ-ಅಂಶಗಳ ಮಾಹಿತಿಯನ್ನು **ಅನುಬಂಧ-2** ರಲ್ಲಿ ಒದಗಿಸಲಾಗಿದೆ. ಅಂಗನವಾಡಿ ಕಾರ್ಯಕರ್ತೆಯರನ್ನು ಚುನಾವಣೆಗೆ ಸಂಬಂಧಿಸಿದ ಕೆಲಸಗಳಲ್ಲಿ ತೊಡಗಿಸದಿರಲು ಚುನಾವಣಾ ಆಯೋಗವನ್ನು ಕೋರುವ ಬಗ್ಗೆ ಪರಿಶೀಲಿಸಲಾಗುತ್ತಿದೆ.
ಈ)	ಗರ್ಭಿಣಿಯರಿಗೆ ಆಹಾರ ಪೂರೈಸುವ ಮಾತೃಪೂರ್ಣ ಯೋಜನೆಯಡಿ ಕಳೆದ 6 ತಿಂಗಳುಗಳಿಂದ ಎಷ್ಟು ಫಲಾನುಭವಿಗಳು ಈ ಸೌಲಭ್ಯ ಪಡೆದುಕೊಂಡಿದ್ದಾರೆ ಮತ್ತು ಎಷ್ಟು ಹಣ ಖರ್ಚು ಮಾಡಲಾಗಿದೆ (ಅಂಕಿ-ಅಂಶಗಳೊಂದಿಗೆ ಮಾಹಿತಿ ನೀಡುವುದು)	ಮಾತೃಪೂರ್ಣ ಯೋಜನೆಯಡಿ ಕಳೆದ 6 ತಿಂಗಳುಗಳಿಂದ ಪ್ರಯೋಜನ ಪಡೆದ ಗರ್ಭಿಣಿಯರು ಮತ್ತು ಖರ್ಚು ಮಾಡಲಾದ ಹಣದ ಮಾಹಿತಿಯನ್ನು **ಅನುಬಂಧ-3** ರಲ್ಲಿ ಒದಗಿಸಲಾಗಿದೆ.
ಉ)	ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಗೌರವಧನದ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿದ್ದು, ಇವರ ಸೇವೆಯನ್ನು ಖಾಯಂಗೊಳಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ.	ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರು ಕಾರ್ಯನಿರ್ವಹಿಸುತ್ತಿರುವ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯು ಕೇಂದ್ರ ಸರ್ಕಾರದ ಯೋಜನೆಯಾಗಿದ್ದು, ಇವರ ಸೇವೆಯನ್ನು ಖಾಯಂಗೊಳಿಸುವ ಬಗ್ಗೆ ಕೇಂದ್ರ ಸರ್ಕಾರವು ತೀರ್ಮಾನ ತೆಗೆದುಕೊಳ್ಳಬೇಕಾಗಿರುತ್ತದೆ.

ಸಂ:ಮಮಇ 344 ಐಸಿಡಿ 2018

(ಡಾ. ಜಯಮಾಲ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ
ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು.

(1)

ವಿಧಾನ ಸಭೆ ಸದಸ್ಯರಾದ ಶ್ರೀ ಸಿ.ಎಂ ನಿಂಬಣ್ಣನವರ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :1249ಕ್ಕೆ ಅನುಬಂಧ -1

ಕರ್ನಾಟಕಸರ್ಕಾರ

ಸಂ.ಡಿಡಬ್ಲ್ಯೂಸಿ:ಐಸಿಡಿ:ಎಎನ್‌ಜಿ-1:73:2009-10

ನಿರ್ದೇಶಕರ ಕಛೇರಿ,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
ಬೆಂಗಳೂರು, ದಿ:20.10.2018

ಜಿಲ್ಲಾಧಿಕಾರಿಗಳು,
30 ಜಿಲ್ಲೆಗಳು.

ಮಾನ್ಯರೆ,

ವಿಷಯ: ಅಂಗನವಾಡಿ ಕಾರ್ಯಕರ್ತೆಯರನ್ನು ಶಿಶುಅಭಿವೃದ್ಧಿಯೋಜನೇತರ ಕೆಲಸಗಳಿಗೆ ನಿಯೋಜಿಸದಿರುವ ಕುರಿತು.

ಉಲ್ಲೇಖ: 1) ಈ ಕಛೇರಿಯ ಅಸಪ ಪತ್ರ ಸಂ.ಡಿಡಬ್ಲ್ಯೂಸಿ:ಐಸಿಡಿ:ಎನ್‌ಜಿ-1:73/2010-11/16-17

2) ದಿ:9.8.2018ರಂದು ಮಾನ್ಯ ಇಲಾಖಾ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು

ಕೇಂದ್ರ ಪುರಸ್ಕೃತ ಸಮಗ್ರ ಶಿಶುಅಭಿವೃದ್ಧಿ ಯೋಜನೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿ ಕೇಂದ್ರಗಳಲ್ಲಿ ಐಸಿಡಿಎಸ್‌ನ ಆರು ಸೇವೆಗಳನ್ನು ಫಲಾನುಭವಿಗಳಿಗೆ ಒದಗಿಸುವುದು ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ಮುಖ್ಯ ಕರ್ತವ್ಯವಾಗಿರುತ್ತದೆ. ಇವರಿಗೆ ಶಿಶುಅಭಿವೃದ್ಧಿಯೋಜನೇತರ ಕೆಲಸ/ಇತರೆ ಕೆಲಸಗಳನ್ನು ವಹಿಸುವುದರಿಂದ ಕೆಲಸದ ಒತ್ತಡ ಹೆಚ್ಚಾಗಿದ್ದು ಅಂಗನವಾಡಿ ಕೇಂದ್ರಗಳಲ್ಲಿ ಶಿಶುಅಭಿವೃದ್ಧಿ ಯೋಜನೆಯ ಮೂಲ ಸೇವೆಗಳನ್ನು ಫಲಾನುಭವಿಗಳಿಗೆ ಒದಗಿಸಲು ಅಡಚಣೆ ಯಾಗುತ್ತಿರುವುದರಿಂದ ಅಂಗನಗವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರಿಗೆ ಶಿಶುಅಭಿವೃದ್ಧಿಯೋಜನೇತರ ಕೆಲಸಗಳನ್ನು ನಿಯೋಜಿಸದಿರಲು ಕೇಂದ್ರ ಸರ್ಕಾರವು ಸೂಚಿಸಿದ್ದು ಅದರನ್ವಯ ಅಗತ್ಯ ಕ್ರಮವಹಿಸಲು ಮಾನ್ಯ ಮುಖ್ಯ ಮಂತ್ರಿಗಳನ್ನು ಸೂಚಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರಿಗೆ ಶಿಶುಅಭಿವೃದ್ಧಿಯೋಜನೇತರ ಯಾವುದೇ ಇತರೆ ಕೆಲಸಗಳಿಗೆ ನಿಯೋಜಿಸಬಾರದೆಂದು ಉಲ್ಲೇಖ(1) ರಲ್ಲಿ ಅರೆಸರ್ಕಾರಿ ಪತ್ರದಲ್ಲಿ ಕೋರಲಾಗಿರುತ್ತದೆ.

ಆದರೂ ಸಹ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರಿಗೆ ವಿಧವೆಯರ ಸಮೀಕ್ಷೆಯನ್ನು ಕೈಗೊಳ್ಳಲು ಮತ್ತು ಕುಷ್ಟ ರೋಗ ಪತ್ತೆ ಆಂದೋಲನ ಕಾರ್ಯಕ್ರಮದಲ್ಲಿ ಭಾಗವಹಿಸಲು ಸೂಚಿಸಿರುವುದಾಗಿ ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಸಂಘದ ಪದಾಧಿಕಾರಿಗಳು ತಿಳಿಸಿರುತ್ತಾರೆ.

ಮಾನ್ಯ ಇಲಾಖಾ ಸಚಿವರು ಇಲಾಖಾ ಕಾರ್ಯಕ್ರಮಗಳಲ್ಲದೆ ಇತರೆ ಕೆಲಸಗಳನ್ನು ನೀಡದೆ ಇರುವಂತೆ ಜಿಲ್ಲಾಧಿಕಾರಿಗಳಿಗೆ ಪುನ: ಪತ್ರ ಬರೆಯಲು ಸೂಚಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಅಂಗನಗವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರಿಗೆ ಶಿಶುಅಭಿವೃದ್ಧಿಯೋಜನೇತರ ಇತರೆ ಇಲಾಖೆಯ/ ಇತರೆ ಯಾವುದೇ ಕೆಲಸಗಳನ್ನು ಕಡ್ಡಾಯವಾಗಿ ನಿಯೋಜಿಸಬಾರದೆಂದು ಈ ಮೂಲಕ ಮತ್ತೊಮ್ಮೆ ಕೋರಲಾಗಿದೆ. ಅವರ ಬದಲಿಗೆ ಆ ಪ್ರದೇಶದಲ್ಲಿಯೇ ವಾಸವಿರುವ ನಿವೃತ್ತ ಅಂಗನವಾಡಿ ಕಾರ್ಯಕರ್ತೆ ಹಾಗು ಸಹಾಯಕಿಯರ ಸೇವೆ ಪಡೆಯಬಹುದಾಗಿರುತ್ತದೆ.

ತಮ್ಮ ವಿಶ್ವಾಸಿ,
(signature) 20/10/18.
ನಿರ್ದೇಶಕರು,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
ಬೆಂಗಳೂರು.

<u>ಪ್ರತಿಯನ್ನು ಮಾಹಿತಿಗಾಗಿ :</u>

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕಣ ಇಲಾಖೆ, ಬೆಂಗಳೂರು ರವರಿಗೆ,
2) ಮಾನ್ಯ ಮಹಿಳಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಆಪ್ತ ಕಾರ್ಯದರ್ಶಿಗಳಿಗೆ

ವಿಧಾನ ಸಭೆ ಸದಸ್ಯರಾದ ಶ್ರೀ ಸಿ.ಎಂ ನಿಂಬಣ್ಣನವರ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :1249ಕ್ಕೆ ಅನುಬಂಧ –2

ಅಂಗನವಾಡಿ ಕಾರ್ಯಕರ್ತೆಯರನ್ನು ಬಿ.ಎಲ್.ಓ ಕಾರ್ಯಕ್ಕೆ ನಿಯೋಜಿಸಿರುವವರ ವಿವರ

ಕ್ರ ಸಂ	ಜಿಲ್ಲೆಯ ಹೆಸರು	ಅಂಗನವಾಡಿ ಕಾರ್ಯಕರ್ತೆಯರನ್ನು ಬಿ.ಎಲ್.ಓ ಕಾರ್ಯಕ್ಕೆ ನಿಯೋಜನೆಯಾಗಿರುವವರ ಸಂಖ್ಯೆ
1	ಬಾಗಲಕೋಟೆ	883
2	ಬೆಂಗಳೂರು (ನ)	2380
3	ಬೆಂಗಳೂರು (ಗ್ರಾ)	535
4	ಬೆಳಗಾವಿ	1388
5	ಬಳ್ಳಾರಿ	1074
6	ಬೀದರ್	303
7	ವಿಜಯಪುರ	0
8	ಚಾಮರಾಜನಗರ	585
9	ಚಿಕ್ಕಬಳ್ಳಾಪುರ	346
10	ಚಿಕ್ಕಮಗಳೂರು	239
11	ಚಿತ್ರದುರ್ಗ	15
12	ದಕ್ಷಿಣ ಕನ್ನಡ	665
13	ದಾವಣಗೆರೆ	539
14	ಧಾರವಾಡ	967
15	ಗದಗ್	735
16	ಕಲಬುರಗಿ	1782
17	ಯಾದಗಿರಿ	791
18	ಹಾಸನ	1240
19	ಹಾವೇರಿ	215
20	ಕೊಡಗು	280
21	ಕೋಲಾರ	903
22	ಕೊಪ್ಪಳ	853
23	ಮಂಡ್ಯ	816
24	ಮೈಸೂರು	880
25	ರಾಮನಗರ	1118
26	ರಾಯಚೂರು	387
27	ಶಿವಮೊಗ್ಗ	803
28	ತುಮಕೂರು	748
29	ಉಡುಪಿ	509
30	ಉತ್ತರ ಕನ್ನಡ	300
	ಜಿಲ್ಲೆಯ ಒಟ್ಟು	**22279**

(4)

ವಿಧಾನ ಸಭೆ ಸದಸ್ಯರಾದ ಶ್ರೀ ಸಿ.ಎಂ ನಿಂಬಣ್ಣವರ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :1249ಕ್ಕೆ ಅನುಬಂಧ -3

ಮಾತೃಪೂರ್ಣ ಯೋಜನೆಯಡಿ ಕಳೆದ 6 ತಿಂಗಳುಗಳಿಂದ ಪ್ರಯೋಜನ ಪಡೆದ ಫಲಾನುಭವಿಗಳು ಮತ್ತು ಖರ್ಚಾದ ಮೊತ್ತದ ವಿವರ

ಕ್ರ. ಸಂ.	ಜಿಲ್ಲೆಯ ಹೆಸರು	ತಿಂಗಳು	ಪ್ರಯೋಜನ ಪಡೆದ ಗರ್ಭಿಣಿಯರು	ಖರ್ಚಾದ ಮೊತ್ತ (ರೂ.ಲಕ್ಷಗಳಲ್ಲಿ)
1	ಬಾಗಲಕೋಟೆ	ಜೂನ್-2018	18440	96.81
		ಜುಲೈ-2018	18586	97.57
		ಆಗಸ್ಟ್-2018	18560	97.44
		ಸೆಪ್ಟಂಬರ್-2018	18355	96.36
		ಅಕ್ಟೋಬರ್-2018	18564	97.46
		ನವೆಂಬರ್-2018	18555	97.41
		ಒಟ್ಟು	111060	583.05
2	ಬೆಂಗಳೂರು (ನ)	ಜೂನ್-2018	9271	54.47
		ಜುಲೈ-2018	9927	58.32
		ಆಗಸ್ಟ್-2018	9708	57.03
		ಸೆಪ್ಟಂಬರ್-2018	9055	53.20
		ಅಕ್ಟೋಬರ್-2018	9443	55.48
		ನವೆಂಬರ್-2018	9641	56.64
		ಒಟ್ಟು	57045	335.14
3	ಬೆಂಗಳೂರು (ಗ್ರಾ)	ಜೂನ್-2018	4216	22.13
		ಜುಲೈ-2018	4236	22.2
		ಆಗಸ್ಟ್-2018	3949	20.73
		ಸೆಪ್ಟಂಬರ್-2018	3550	18.63
		ಅಕ್ಟೋಬರ್-2018	3758	19.72
		ನವೆಂಬರ್-2018	3535	18.55
		ಒಟ್ಟು	**23244**	**121.96**
4	ಬೆಳಗಾವಿ	ಜೂನ್-18	37827	198.59
		ಜುಲೈ-18	37924	199.10
		ಆಗಸ್ಟ್-18	36941	193.94

		ಸೆಪ್ಟೆಂಬರ್–18	37942	199.19
		ಅಕ್ಟೋಬರ್–18	37470	196.71
		ನವೆಂಬರ್–18	37506	196.90
		ಒಟ್ಟು	**225610**	**1184.43**
5	ಬಳ್ಳಾರಿ	ಜೂನ್–18	47046	246.99
		ಜುಲೈ–18	44545	233.86
		ಆಗಸ್ಟ್–18	43508	228.42
		ಸೆಪ್ಟೆಂಬರ್–18	43273	227.18
		ಅಕ್ಟೋಬರ್–18	43575	228.77
		ನವೆಂಬರ್–18	43425	227.98
		ಒಟ್ಟು	**265372**	1393.20
6	ಬೀದರ್	ಜೂನ್–18	16967	89.08
		ಜುಲೈ–18	15000	78.75
		ಆಗಸ್ಟ್–18	14883	78.14
		ಸೆಪ್ಟೆಂಬರ್–18	14991	78.70
		ಅಕ್ಟೋಬರ್–18	15095	79.25
		ನವೆಂಬರ್–18	15418	80.94
		ಒಟ್ಟು	92354	**484.86**
7	ವಿಜಯಪುರ	ಜೂನ್–18	23457	123.15
		ಜುಲೈ–18	23892	125.43
		ಆಗಸ್ಟ್–18	22339	117.28
		ಸೆಪ್ಟೆಂಬರ್–18	22166	116.37
		ಅಕ್ಟೋಬರ್–18	22276	116.95
		ನವೆಂಬರ್–18	22262	116.88
		ಒಟ್ಟು	**136392**	716.06
8	ಚಾಮರಾಜನಗರ	ಜೂನ್–18	3812	20.01
		ಜುಲೈ–18	4009	21.05
		ಆಗಸ್ಟ್–18	3856	20.24
		ಸೆಪ್ಟೆಂಬರ್–18	3729	19.58
		ಅಕ್ಟೋಬರ್–18	3715	19.50
		ನವೆಂಬರ್–18	3853	20.23

(6)

		ಒಟ್ಟು	22974	120.61
9	ಚಿಕ್ಕಬಳ್ಳಾಪುರ	ಜೂನ್-18	6446	33.84
		ಜುಲೈ-18	6512	34.19
		ಆಗಸ್ಟ್-18	6404	33.62
		ಸೆಪ್ಟೆಂಬರ್-18	6354	33.35
		ಅಕ್ಟೋಬರ್-18	6312	33.13
		ನವೆಂಬರ್-18	6190	32.5
		ಒಟ್ಟು	38218	200.63
10	ಚಿಕ್ಕಮಗಳೂರು	ಜೂನ್-18	11080	58.17
		ಜುಲೈ-18	7657	40.2
		ಆಗಸ್ಟ್-18	10996	57.73
		ಸೆಪ್ಟೆಂಬರ್-18	10984	57.66
		ಅಕ್ಟೋಬರ್-18	10821	56.81
		ನವೆಂಬರ್-18	10566	55.47
		ಒಟ್ಟು	**62104**	**326.04**
11	ಚಿತ್ರದುರ್ಗ	ಜೂನ್-18	11485	60.30
		ಜುಲೈ-18	11994	62.97
		ಆಗಸ್ಟ್-18	11984	62.92
		ಸೆಪ್ಟೆಂಬರ್-18	11965	62.82
		ಅಕ್ಟೋಬರ್-18	11669	61.26
		ನವೆಂಬರ್-18	11695	61.40
		ಒಟ್ಟು	70792	**371.66**
12	ದಕ್ಷಿಣ ಕನ್ನಡ	ಜೂನ್-18	6912	8.71
		ಜುಲೈ-18	6956	8.76
		ಆಗಸ್ಟ್-18	7169	9.03
		ಸೆಪ್ಟೆಂಬರ್-18	7374	9.29
		ಅಕ್ಟೋಬರ್-18	7728	9.74
		ನವೆಂಬರ್-18	7876	9.92
		ಒಟ್ಟು	**44015**	**55.45**
13	ದಾವಣಗೆರೆ	ಜೂನ್-18	14131	2.97

(7)

		ಜುಲೈ–18	14594	3.65
		ಆಗಸ್ಟ್–18	14262	2.99
		ಸೆಪ್ಟೆಂಬರ್–18	14369	3.01
		ಅಕ್ಟೋಬರ್–18	14170	2.97
		ನವೆಂಬರ್–18	13918	2.92
		ಒಟ್ಟು	**85444**	**18.51**
14	ಧಾರವಾಡ	ಜೂನ್–18	21968	4.61
		ಜುಲೈ–18	21510	4.52
		ಆಗಸ್ಟ್–18	20470	4.3
		ಸೆಪ್ಟೆಂಬರ್–18	20743	4.35
		ಅಕ್ಟೋಬರ್–18	19981	4.2
		ನವೆಂಬರ್–18	20903	4.39
		ಒಟ್ಟು	125575	26.37
15	ಗದಗ್	ಜೂನ್–18	9960	52.29
		ಜುಲೈ–18	8370	43.94
		ಆಗಸ್ಟ್–18	8920	46.83
		ಸೆಪ್ಟೆಂಬರ್–18	8831	46.36
		ಅಕ್ಟೋಬರ್–18	9302	48.84
		ನವೆಂಬರ್–18	9355	49.11
		ಒಟ್ಟು	**54738**	**287.37**
16	ಕಲಬುರಗಿ	ಜೂನ್–18	46843	253.3
		ಜುಲೈ–18	49299	269.17
		ಆಗಸ್ಟ್–18	50548	275.99
		ಸೆಪ್ಟೆಂಬರ್–18	49980	262.4
		ಅಕ್ಟೋಬರ್–18	50427	264.74
		ನವೆಂಬರ್–18	50499	265.12
		ಒಟ್ಟು	**297596**	**1590.72**
17	ಯಾದಗಿರಿ	ಜೂನ್–18	11937	62.67
		ಜುಲೈ–18	12557	65.92
		ಆಗಸ್ಟ್–18	12332	64.74

		ಸೆಪ್ಟೆಂಬರ್–18	12411	65.16
		ಅಕ್ಟೋಬರ್–18	12562	65.95
		ನವೆಂಬರ್–18	13117	68.86
		ಒಟ್ಟು	**74916**	**393.31**
18	ಹಾಸನ	ಜೂನ್–18	18511	97.18
		ಜುಲೈ–18	18767	98.53
		ಆಗಸ್ಟ್–18	18994	99.72
		ಸೆಪ್ಟೆಂಬರ್–18	18815	94.83
		ಅಕ್ಟೋಬರ್–18	18706	90.35
		ನವೆಂಬರ್–18	18634	93.91
		ಒಟ್ಟು	**112427**	**574.52**
19	ಹಾವೇರಿ	ಜೂನ್–18	10854	56.98
		ಜುಲೈ–18	11466	60.19
		ಆಗಸ್ಟ್–18	11104	58.29
		ಸೆಪ್ಟೆಂಬರ್–18	10917	57.31
		ಅಕ್ಟೋಬರ್–18	11593	60.86
		ನವೆಂಬರ್–18	11620	61.00
		ಒಟ್ಟು	67554	354.63
20	ಕೊಡಗು	ಜೂನ್ 2018	489	2.56725
		ಜುಲೈ 2018	590	3.0975
		ಆಗಸ್ಟ್ 2018	533	2.79825
		ಸೆಪ್ಟೆಂಬರ್ 2018	517	2.71425
		ಅಕ್ಟೋಬರ್ 2018	569	2.98725
		ನವೆಂಬರ್ 2018	536	2.814
		ಒಟ್ಟು	3234	**16.9785**
21	ಕೋಲಾರ	ಜೂನ್–18	6978	36.63
		ಜುಲೈ–18	7524	39.5
		ಆಗಸ್ಟ್–18	6952	36.5
		ಸೆಪ್ಟೆಂಬರ್–18	6904	36.24
		ಅಕ್ಟೋಬರ್–18	7586	39.83
		ನವೆಂಬರ್–18	7728	40.57

(9)

		ಒಟ್ಟು	43672	229.27
22	ಕೊಪ್ಪಳ	ಜೂನ್-18	15494	81.34
		ಜುಲೈ-18	15879	83.36
		ಆಗಸ್ಟ್-18	15486	81.30
		ಸೆಪ್ಟೆಂಬರ್-18	15471	81.22
		ಅಕ್ಟೋಬರ್-18	14812	77.76
		ನವೆಂಬರ್-18	14324	75.20
		ಒಟ್ಟು	**91466**	**480.18**
23	ಮಂಡ್ಯ	ಜೂನ್-18	6515	34.20
		ಜುಲೈ-18	6488	34.06
		ಆಗಸ್ಟ್-18	6540	34.34
		ಸೆಪ್ಟೆಂಬರ್-18	6343	33.30
		ಅಕ್ಟೋಬರ್-18	6329	33.23
		ನವೆಂಬರ್-18	6198	32.54
		ಒಟ್ಟು	38413	**201.67**
24	ಮೈಸೂರು	ಜೂನ್-18	11012	57.81
		ಜುಲೈ-18	11435	60.03
		ಆಗಸ್ಟ್-18	11208	58.84
		ಸೆಪ್ಟೆಂಬರ್-18	11301	59.33
		ಅಕ್ಟೋಬರ್-18	11320	59.43
		ನವೆಂಬರ್-18	11673	61.28
		ಒಟ್ಟು	**67949**	**356.72**
25	ರಾಮನಗರ	ಜೂನ್-18	2189	11.49
		ಜುಲೈ-18	1886	9.90
		ಆಗಸ್ಟ್-18	1737	9.12
		ಸೆಪ್ಟೆಂಬರ್-18	1442	7.57
		ಅಕ್ಟೋಬರ್-18	1881	9.88
		ನವೆಂಬರ್-18	1923	10.10
		ಒಟ್ಟು	**11058**	58.0545

26	ರಾಯಚೂರು	ಜೂನ್–18	32056	168.29
		ಜುಲೈ–18	37006	194.2815
		ಆಗಸ್ಟ್–18	38388	201.537
		ಸೆಪ್ಟೆಂಬರ್–18	41757	219.22425
		ಅಕ್ಟೋಬರ್–18	41659	218.70975
		ನವೆಂಬರ್–18	38306	201.1065
		ಒಟ್ಟು	**229172**	1203.153
27	ಶಿವಮೊಗ್ಗ	ಜೂನ್–18	18332	68.38
		ಜುಲೈ–18	18849	63.43
		ಆಗಸ್ಟ್–18	18051	79.45
		ಸೆಪ್ಟೆಂಬರ್–18	18873	78.17
		ಅಕ್ಟೋಬರ್–18	18524	78.41
		ನವೆಂಬರ್–18	18233	61.87
		ಒಟ್ಟು	110862	429.71
28	ತುಮಕೂರು	ಜೂನ್–18	9845	51.686
		ಜುಲೈ–18	10053	52.778
		ಆಗಸ್ಟ್–18	10341	54.290
		ಸೆಪ್ಟೆಂಬರ್–18	9791	51.403
		ಅಕ್ಟೋಬರ್–18	9877	51.854
		ನವೆಂಬರ್–18	9704	50.946
		ಒಟ್ಟು	**59611**	312.958
29	ಉಡುಪಿ	ಜೂನ್–18	2311	12.13
		ಜುಲೈ–18	2195	11.52
		ಆಗಸ್ಟ್–18	2094	10.99
		ಸೆಪ್ಟೆಂಬರ್–18	1862	9.78
		ಅಕ್ಟೋಬರ್–18	1695	8.90
		ನವೆಂಬರ್–18	1663	8.73
		ಒಟ್ಟು	**11820**	**62.055**

(11)

30	ಉತ್ತರ ಕನ್ನಡ	ಜೂನ್-18	5210	27.35
		ಜುಲೈ-18	5328	27.97
		ಆಗಸ್ಟ್-18	5308	27.87
		ಸೆಪ್ಟೆಂಬರ್-18	4705	24.70
		ಅಕ್ಟೋಬರ್-18	4863	25.53
		ನವೆಂಬರ್-18	4706	24.71
		ಒಟ್ಟು	30120	**158.13**

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:2078
ವಿಧಾನ ಸಭಾ ಸದಸ್ಯರ ಹೆಸರು	ಶ್ರೀ ಆರ್. ಅಶೋಕ
ಉತ್ತರಿಸುವವರು	ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು
ಉತ್ತರಿಸುವ ದಿನಾಂಕ	18/12/2018

ಕ್ರ ಸಂ.	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿ ಒಟ್ಟು ಎಷ್ಟು ಅಂಗನವಾಡಿ ಕೇಂದ್ರಗಳಿವೆ; ಈ ಕೇಂದ್ರಗಳಲ್ಲಿರುವ ಅಂಗನವಾಡಿ ಕಾರ್ಯಕರ್ತೆಯರ ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು;	ರಾಜ್ಯದಲ್ಲಿರುವ ಒಟ್ಟು ಅಂಗನವಾಡಿ ಕೇಂದ್ರಗಳ ಸಂಖ್ಯೆ:65911 ಈ ಕೇಂದ್ರಗಳಲ್ಲಿರುವ ಅಂಗನವಾಡಿ ಕಾರ್ಯಕರ್ತೆಯರ ಸಂಖ್ಯೆ:64356 (ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1ರಲ್ಲಿ ಒದಗಿಸಲಾಗಿದೆ)
ಆ	ಅಂಗನವಾಡಿ ಮಕ್ಕಳಿಗೆ ನೀಡುವ ಪೌಷ್ಟಿಕ ಆಹಾರದಲ್ಲಿ ಅವ್ಯವಹಾರಗಳು ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಸಂಪೂರ್ಣ ವಿವರ ನೀಡುವುದು)	ರಾಜ್ಯದಲ್ಲಿ 30 ಜಿಲ್ಲೆಗಳಲ್ಲಿ 65911 ಅಂಗನವಾಡಿ ಕೇಂದ್ರಗಳಿವೆ. 137 ಮಹಿಳಾ ಪೂರಕ ಪೌಷ್ಟಿಕ ತಯಾರಿಕ ಮತ್ತು ತರಬೇತಿ ಕೇಂದ್ರಗಳು ಇದ್ದು, ಇವುಗಳ ಮೂಲಕ ಅಂಗನವಾಡಿ ಕೇಂದ್ರಗಳಿಗೆ ಪೂರಕ ಪೌಷ್ಟಿಕ ಆಹಾರವನ್ನು ಸರಬರಾಜು ಮಾಡಲಾಗುತ್ತಿದೆ. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಸಮಿತಿಯನ್ನು ರಚಿಸಲಾಗಿದ್ದು, ಈ ಸಮಿತಿಯು ಅಂಗನವಾಡಿ ಕೇಂದ್ರಗಳಿಗೆ ಸರಬರಾಜು ಮಾಡುವ ಪೂರಕ ಪೌಷ್ಟಿಕ ಆಹಾರದ ಮೇಲ್ವಿಚಾರಣೆ ಮಾಡುತ್ತಿದೆ. ದೂರುಗಳು ಸ್ವೀಕರಿಸಿದಾಗ ವಿಚಾರಣೆ ಮಾಡಿ ಕ್ರಮಕೈಗೊಳ್ಳಲಾಗುತ್ತಿದೆ. ಪ್ರಸ್ತುತ ಕೆಲವು ದೂರುಗಳು ಸ್ವೀಕೃತವಾಗಿರುತ್ತದೆ. ಸದರಿ ಪ್ರಕರಣಗಳು ಪರಿಶೀಲನಾ ಹಂತದಲ್ಲಿರುತ್ತದೆ.
ಇ	ಅವ್ಯವಹಾರಗಳಿಗೆ ಸಂಬಂಧಪಟ್ಟಂತೆ ಎಷ್ಟು ಜನರ ವಿರುದ್ಧ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ (ವಿವರ ನೀಡುವುದು)?	ವಿವರವನ್ನು ಅನುಬಂಧ-2ರಲ್ಲಿ ಒದಗಿಸಲಾಗಿದೆ

ಸಂ:ಮಮಇ 350 ಐಸಿಡಿ 2018

(ಡಾ. ಜಯಮಾಲ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ
ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು

(-1)

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಆರ್. ಅಶೋಕ್ (ಪದ್ಮನಾಭನಗರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2078 ಕ್ಕೆ ಅನುಬಂಧ -1

ಕ್ರ.ಸಂ.	ಜಿಲ್ಲೆಯ ಹೆಸರು	ರಾಜ್ಯದಲ್ಲಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ	ರಾಜ್ಯದ ಅಂಗನವಾಡಿ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಯಕರ್ತೆಯರ ಸಂಖ್ಯೆ
1	ಬಾಗಲಕೋಟೆ	2221	2164
2	ಬೆಂಗಳೂರು ನಗರ	2420	1222
3	ಬೆಂಗಳೂರು ಗ್ರಾಮಾಂತರ	1229	1485
4	ಬೆಳಗಾವಿ	5294	2382
5	ಬಳ್ಳಾರಿ	2393	5149
6	ಬೀದರ್	1893	2352
7	ವಿಜಯಪುರ	2313	1770
8	ಚಾಮರಾಜನಗರ	1421	2242
9	ಚಿಕ್ಕಬಳ್ಳಾಪುರ	1961	1363
10	ಚಿಕ್ಕಮಗಳೂರು	1825	1780
11	ಚಿತ್ರದುರ್ಗ	2324	2288
12	ದಕ್ಷಿಣ ಕನ್ನಡ	2104	2079
13	ದಾವಣಗೆರೆ	2112	2070
14	ಧಾರವಾಡ	1505	1470
15	ಗದಗ	1166	1112
16	ಗುಲ್ಬರ್ಗಾ	3098	2997
17	ಯಾದಗಿರಿ	1386	1356
18	ಹಾಸನ	2523	2480
19	ಹಾವೇರಿ	1918	1872
20	ಕೊಡಗು	871	833
21	ಕೋಲಾರ	2061	1976
22	ಕೊಪ್ಪಳ	1850	1931
23	ಮಂಡ್ಯ	2546	1814
24	ಮೈಸೂರು	2860	2474
25	ರಾಮನಗರ	1543	2806
26	ರಾಯಚೂರು	2662	2606
27	ಶಿವಮೊಗ್ಗ	2439	2410
28	ತುಮಕೂರು	4095	4054
29	ಉಡುಪಿ	1191	1172
30	ಉತ್ತರ ಕನ್ನಡ	2687	2647
	ಒಟ್ಟು	**65911**	**64356**

(2)

ಶ್ರೀ ಆರ್ ಅಶೋಕ್(ಪದ್ಮನಾಭ ನಗರ) ಮಾನ್ಯ ವಿಧಾನ ಸಭೆಯ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2078 ಕ್ಕೆ ಅನುಬಂಧ-2

ಕ್ರ.ಸಂ	ಕ್ರಮವಹಿಸಿರುವ ವಿವರ	ಅಧಿಕಾರಿ/ ನೌಕರರ ಸಂಖ್ಯೆ	
1	2015-16 ನೇ ಸಾಲಿನಲ್ಲಿ ಮಂಡ್ಯ ಜಿಲ್ಲಾ ಅಂಗನವಾಡಿ ಕೇಂದ್ರಗಳ ಫಲಾನುಭವಿಗಳಿಗೆ ಕಳಪೆಗುಣಮಟ್ಟದ ಹೆಸರು ಬೇಳೆಯನ್ನು ಖರೀದಿಸಿ ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸದೇ ನೇರವಾಗಿ ಅಂಗನವಾಡಿ ಪಲಾನುಭವಿಗಳಿಗೆ ವಿತರಿಸಿ ಸರಬರಾಜುದಾರರಿಗೆ ಹಣ ಪಾವತಿಸಿರುವುದು ಹಾಗೂ ಮಕ್ಕಳ ಆಹಾರ ಗುಣಮಟ್ಟವನ್ನು ಪರೀಕ್ಷಿಸುವಲ್ಲಿ ನಿರ್ಲಕ್ಷ್ಯತನ ತೋರಿ ಕರ್ತವ್ಯಲೋಪವೆಸಗಿರುವ ಅಧಿಕಾರಿಗಳ ವಿರುದ್ಧ ಜಂಟಿ ಇಲಾಖಾ ವಿಚಾರಣೆಗೆ ವಹಿಸಲಾಗಿದೆ.	11	
2	2015-16 ನೇ ಸಾಲಿನಲ್ಲಿ ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕು ಶಿಶು ಅಭಿವೃದ್ಧಿ ಯೋಜನಾ ಕಛೇರಿಯಲ್ಲಿ ಅಂಗನವಾಡಿ ಕೇಂದ್ರಗಳಿಗೆ ಆಹಾರ ವಿತರಣೆ ಅವ್ಯವಹಾರ ಆರೋಪದಡಿ ಶಿಶು ಅಭಿವೃದ್ಧಿ ಯೋಜನಾಧಿಕಾರಿ, ಪ್ರಥಮ ದರ್ಜೆ ಸಹಾಯಕ ಮತ್ತು ಸಾಗಾಣಿಕೆ ಗುತ್ತಿಗೆದಾರ ಇವರುಗಳ ವಿರುದ್ಧ ಎಫ್.ಐ,.ಆರ್. ದಾಖಲಾಗಿರುತ್ತದೆ ಮತ್ತು ಉಪನಿರ್ದೇಶಕರು ನಿರೂಪಣಾಧಿಕಾರಿಗಳ ವಿರುದ್ಧವು ಇಲಾಖಾ ವಿಚಾರಣೆಗೆ ವಹಿಸುವ ವಿಷಯವು ಪ್ರಕ್ರಿಯೆಯಲ್ಲಿದೆ.	26	
3	2015-16 ನೇ ಸಾಲಿನಲ್ಲಿ ಕೋಲಾರ ಜಿಲ್ಲಾ ವ್ಯಾಪ್ತಿಯಲ್ಲಿನ ತಾಲ್ಲೂಕಿನ ಅಂಗನವಾಡಿ ಕೇಂದ್ರಗಳಿಗೆ ಆಹಾರ ಪದಾರ್ಥಗಳ ಖರೀದಿಯಲ್ಲಿ ಅವ್ಯವಹಾರ ಮಾಡಿರುವ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ವಿರುದ್ಧ ಸರ್ಕಾರದ ವತಿಯಿಂದ ದೋಷಾರೋಪಣಾ ಪಟ್ಟಿ ಜಾರಿಯಾಗಿದ್ದು, ಜಂಟಿ ಇಲಾಖಾ ವಿಚಾರಣೆಗೆ ವಹಿಸಲಾಗಿದೆ.	5	
4	2014-15 ನೇ ಸಾಲಿನಲ್ಲಿ ಕೋಲಾರ ಜಿಲ್ಲೆ ಅಂಗನವಾಡಿ ಕೇಂದ್ರಗಳ ಆಹಾರ ಪದಾರ್ಥಗಳನ್ನು ದುರುಪಯೋಗಪಡಿಸಿ ಕೊಂಡಿರುವ ಸಂಬಂಧ ವಿಚಾರಣಾಧಿಕಾರಿಗಳು ಅಂತಿಮ ವರದಿ ಸಲ್ಲಿಸಿದ್ದು, ಪರಿಶೀಲನೆಯಲ್ಲಿದೆ.	1	
5	2015-16 ನೇ ಸಾಲಿನಲ್ಲಿ ಬೀದರ್ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಅಂಗನವಾಡಿ ಕೇಂದ್ರದ ಫಲಾನುಭವಿಗಳಿಗೆ ಕೋಳಿಮೊಟ್ಟೆ ಖರೀದಿ ಪ್ರಕರಣದಲ್ಲಿ ಕರ್ತವ್ಯಲೋಪ ಎಸಗಿರುವ ಅಧಿಕಾರಿಗಳ ವಿರುದ್ಧ ಇಲಾಖಾ ವಿಚಾರಣೆ ನಡೆಸುವ ವಿಷಯ ಪ್ರಕ್ರಿಯದಲ್ಲಿದೆ.	11	
6	2016-17 ನೇ ಸಾಲಿನಲ್ಲಿ ಕಲಬುರಗಿ ನಗರ ಶಿಶು ಅಭಿವೃದ್ಧಿ ಯೋಜನಾ ಕಛೇರಿಯಲ್ಲಿ ಅಂಗನವಾಡಿ ಫಲಾನುಭವಿಗಳಿಗೆ ವಿತರಿಸಬೇಕಾಗಿದ್ದ ಹಾಲಿನ ಪುಡಿಯನ್ನು ಕಾಳಸಂತೆಯಲ್ಲಿ ಮಾರಾಟ ಮಾಡಿದ ಪ್ರಕರಣದಲ್ಲಿ ಅಧಿಕಾರಿ ಮತ್ತು ನೌಕರರ ವಿರುದ್ಧ ದೋಷಾರೋಪಣಾ ಪಟ್ಟಿ ಜಾರಿಗೊಳಿಸಲಾಗಿದೆ.	2	

7	2011-12 ನೇ ಸಾಲಿನಲ್ಲಿ ಗೌರಿಬಿದನೂರು ಶಿಶು ಅಭಿವೃದ್ಧಿ ಯೋಜನೆಯಲ್ಲಿ ಅವಧಿ ಮೀರಿದ ಆಹಾರ ಪದಾರ್ಥದ ಕುರಿತು ವಿಚಾರಣಾಧಿಕಾರಿಗಳಿಂದ ವರದಿ ಸ್ವೀಕೃತವಾಗಿದ್ದು, ಅದರಂತೆ ಸದರಿಯವರಿಗೆ 2ನೇ ಕಾರಣ ಕೇಳುವ ನೋಟೀಸ್ ಜಾರಿ ಮಾಡಲಾಗಿದ್ದು ಅದರಂತೆ ಸದರಿ ನೋಟೀಸ್‌ಗೆ ಸಮಜಾಯಿಷಿ ಬಂದಿದ್ದು ಪ್ರಕರಣ ಚಾಲ್ತಿಯಲ್ಲಿರುತ್ತದೆ.	1	
8	2013-14 ನೇ ಸಾಲಿನಲ್ಲಿ ಗಂಗಾವತಿ, ಕೊಪ್ಪಳ ಜಿಲ್ಲೆಯ ಶಿಶು ಅಭಿವೃದ್ಧಿ ಯೋಜನೆಯಲ್ಲಿ ಅಂಗನವಾಡಿ ಕೇಂದ್ರಗಳ ಆಹಾರ ಸಾಮಗ್ರಿ ಖರೀದಿಯಲ್ಲಿ ಅಕ್ರಮಕ್ಕೆ ಸಂಬಂಧಿಸಿದಂತೆ ದಿನಾಂಕ:11.10.2018ರ ಆದೇಶದನ್ವಯ ಜಂಟಿ ಇಲಾಖಾ ವಿಚಾರಣೆಗೆ ವಹಿಸಲಾಗಿದೆ.	3	
9	2009-10ನೇ ಸಾಲಿನಲ್ಲಿ ಮಂಗಳೂರು(ಗ್ರಾಮಾಂತರ) ಶಿಶು ಅಭಿವೃದ್ಧಿ ಯೋಜನೆಯಲ್ಲಿ ಅವಧಿ ಮೀರಿದ ಪೂರಕ ಪೌಷ್ಟಿಕ ಆಹಾರ ಲಭ್ಯವಾದ ಬಗ್ಗೆ ಜಂಟಿ ಇಲಾಖಾ ವಿಚಾರಣೆಗಾಗಿ ವಿಚಾರಣಾಧಿಕಾರಗಳು ಮತ್ತು ಮಂಡನಾಧಿಕಾರಿಗಳನ್ನು ಸರ್ಕಾರದ ಹಂತದಲ್ಲಿ ನೇಮಿಸಲಾಗಿದೆ ಪ್ರಕರಣ ಚಾಲ್ತಿಯಲ್ಲಿರುತ್ತದೆ.	3	
10	2017-18 ನೇ ಸಾಲಿನಲ್ಲಿ ಶಿಶು ಅಭಿವೃದ್ಧಿ ಯೋಜನಾ ಕಛೇರಿ, ಕುಣಿಗಲ್ ಇಲ್ಲಿ ಆಹಾರ ಪದಾರ್ಥಗಳ ದುರುಪಯೋಗದ ಬಗ್ಗೆ ಕಂಡುಬಂದಿದ್ದು, ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಸರ್ಕಾರದಿಂದ ದಿನಾಂಕ:27.09.2018ರಂದು ದೋಷಾರೋಪಣಾ ಪಟ್ಟಿ ಜಾರಿಗೊಳಿಸಲಾಗಿದೆ.	1	
11	2015-16 ನೇ ಸಾಲಿನಲ್ಲಿ ಶಿಶು ಅಭಿವೃದ್ಧಿ ಯೋಜನಾ ಕಛೇರಿ, ಕಲಬುರಗಿ ಇಲ್ಲಿ ಅಂಗನವಾಡಿಗಳಿಗೆ ಆಹಾರ ಪದಾರ್ಥಗಳನ್ನು ದುರುಪಯೋಗಪಡಿಸಿಕೊಂಡಿರುವ ಬಗ್ಗೆ ವಿಚಾರಣೆಯ ಅಂತಿಮ ವರದಿ ಸ್ವೀಕೃತವಾಗಿದ್ದು, ಮುಂದಿನ ಕ್ರಮವು ಚಾಲ್ತಿಯಲ್ಲಿರುತ್ತದೆ	2	
12	2014-15 ನೇ ಸಾಲಿನಲ್ಲಿ ಉಪ ನಿರ್ದೇಶಕರ ಕಛೇರಿ, ಕೋಲಾರ ಜಿಲ್ಲೆ ಅಂಗನವಾಡಿಗಳಿಗೆ ಆಹಾರ ಪದಾರ್ಥಗಳನ್ನು ದುರುಪಯೋಗಪಡಿಸಿಕೊಂಡಿರುವ ಬಗ್ಗೆ ವಿಚಾರಣೆಗಾಗಿ ವಿಚಾರಣಾಧಿಕಾರಿ ಮತ್ತು ಮಂಡನಾಧಿಕಾರಿಗಳನ್ನು ಸರ್ಕಾರದ ಹಂತದಲ್ಲಿ ನೇಮಕ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.	1	
13	2015-16 ನೇ ಸಾಲಿನಲ್ಲಿ ಶಿಶು ಅಭಿವೃದ್ಧಿ ಯೋಜನಾ ಕಛೇರಿ, ಮಾನ್ವಿ/ಸಿರವಾರ, ಇಲ್ಲಿ ಮೊಟ್ಟೆ ಖರೀದಿಯಲ್ಲಿ ಅವ್ಯವಹಾರದ ಬಗ್ಗೆ ವಿಚಾರಣಾಧಿಕಾರಿಗಳಿಂದ ವರದಿ ಬಂದಿದ್ದು ಪರಿಶೀಲನಾ ಹಂತದಲ್ಲಿದೆ,	3	
14	2016-17 ನೇ ಸಾಲಿನಲ್ಲಿ ಶಿಶು ಅಭಿವೃದ್ಧಿ ಯೋಜನಾ ಕಛೇರಿ, ಲಿಂಗಸಗೂರು ಇಲ್ಲಿ ಅಂಗನವಾಡಿ ಕೇಂದ್ರಗಳಿಗೆ ಸರಬರಾಜಾದ ಸಕ್ಕರೆಯನ್ನು ಅಕ್ರಮವಾಗಿ ಮಾರಾಟ ಮಾಡಿದ ಬಗ್ಗೆ ಜಿಲ್ಲಾ ಪಂಚಾಯತ್, ರಾಯಚೂರು ರವರು ಕ್ರಮ ಕೈಗೊಂಡಿರುತ್ತಾರೆ. ವಿಚಾರಣೆ ಚಾಲ್ತಿಯಲ್ಲಿರುತ್ತದೆ.	1	
15	2011-12 ನೇ ಸಾಲಿನಲ್ಲಿ ಶಿಶು ಅಭಿವೃದ್ಧಿ ಯೋಜನಾ ಕಛೇರಿ, ಚಿಂತಾಮಣಿ ಇಲ್ಲಿ ಅಂಗನವಾಡಿ ಕೇಂದ್ರಗಳಿಗೆ ಸರಬರಾಜಾದ ಆಹಾರ ಪದಾರ್ಥಗಳ ದುರುಪಯೋಗವಾದ ಬಗ್ಗೆ ದೋಷಾರೋಪಣಾ ಪಟ್ಟಿ ಜಾರಿಗೊಳಿಸಿದ್ದು, ತನಿಖೆ ಮಾಡಿ ವಿಚಾರಣೆ ನಡೆಸಲು ವಿಚಾರಣಾಧಿಕಾರಿಯನ್ನು ನೇಮಿಸಲಾಗಿದೆ. ವಿಚಾರಣಾ ವರದಿ ನಿರೀಕ್ಷಿಸಲಾಗಿದೆ.	1	

16	2016–17 ನೇ ಸಾಲಿನಲ್ಲಿ ಶಿಶು ಅಭಿವೃದ್ಧಿ ಯೋಜನಾ ಕಛೇರಿ, ಕಲಬುರಗಿ ಇಲ್ಲಿ ಅಂಗನವಾಡಿ ಕೇಂದ್ರಗಳ ಫಲಾನುಭವಿಗಳಿಗೆ ವಿತರಿಸಲು ಸರಬರಾಜಾದ ಹಾಲಿನ ಪುಡಿಯನ್ನು ಅಕ್ರಮವಾಗಿ ಮಾರಾಟ ಮಾಡಿದ ಬಗ್ಗೆ ಜಿಲ್ಲಾ ಪಂಚಾಯತ್, ಕಲಬುರಗಿ ರವರು ವಿಚಾರಣೆ ಬಗ್ಗೆ ಕ್ರಮ ಕೈಗೊಂಡಿರುತ್ತಾರೆ ಹಾಗೂ ಸಿಬ್ಬಂದಿ ವಿರುದ್ಧ ದೋಷಾರೋಪಣಾ ಪಟ್ಟಿ ಜಾರಿಗೊಳಿಸಿರುತ್ತಾರೆ. ಪ್ರಕರಣ ಚಾಲ್ತಿಯಲ್ಲಿರುತ್ತದೆ.	1	
17	2016–17 ನೇ ಸಾಲಿನಲ್ಲಿ ಶಿಶು ಅಭಿವೃದ್ಧಿ ಯೋಜನಾ ಕಛೇರಿ, ಬಸವಕಲ್ಯಾಣ ಇಲ್ಲಿನ ಅಂಗನವಾಡಿ ಕೇಂದ್ರಗಳಿಗೆ ಆಹಾರ ಪದಾರ್ಥಗಳನ್ನು ಖರೀದಿಸಲು ಅಗತ್ಯಕ್ಕಿಂತ ಹೆಚ್ಚಿನ ಪ್ರಮಾಣದ ಬೇಡಿಕೆ ಸಲ್ಲಿಸಿದ ಬಗ್ಗೆ ಜಿಲ್ಲಾ ಪಂಚಾಯತ್, ಬೀದರ್ ರವರು ವಿಚಾರಣೆ ಬಗ್ಗೆ ಕ್ರಮ ಕೈಗೊಂಡಿರುತ್ತಾರೆ ಹಾಗೂ ಸಿಬ್ಬಂದಿ ವಿರುದ್ಧ ದೋಷಾರೋಪಣಾ ಪಟ್ಟಿ ಜಾರಿಗೊಳಿಸಿರುತ್ತಾರೆ. ಪ್ರಕರಣ ಚಾಲ್ತಿಯಲ್ಲಿರುತ್ತದೆ.	2	
18	2016–17 ನೇ ಸಾಲಿನಲ್ಲಿ ರಾಯಚೂರು ಜಿಲ್ಲೆಯ ಅಂಗನವಾಡಿ ಕೇಂದ್ರಗಳಿಗೆ ವಿತರಿಸಿದ ಆಹಾರ ಪದಾರ್ಥಗಳಲ್ಲಿ ಮುಟ್ಟುಗೋಲು ಹಾಕಿಕೊಂಡ ಆಹಾರ ಸಾಮಗ್ರಿಗಳನ್ನು ಪೂರ್ವಾನುಮತಿ ಇಲ್ಲದೆ ವಿಲೇವಾರಿ ಮಾಡಿರುವ ಬಗ್ಗೆ ಸಂಬಂಧಿಸಿದ ಸಿಬ್ಬಂದಿ ವಿರುದ್ಧ ಜಿಲ್ಲಾ ಪಂಚಾಯತ್, ರಾಯಚೂರುರವರು ಅಮಾನತ್ತುಗೊಳಿಸಿರುತ್ತಾರೆ. ಪ್ರಕರಣ ಚಾಲ್ತಿಯಲ್ಲಿರುತ್ತದೆ.	1	
19	2017–18 ನೇ ಸಾಲಿನಲ್ಲಿ ಶಿಶು ಅಭಿವೃದ್ಧಿ ಯೋಜನೆ, ಕುಣಿಗಲ್ ಇಲ್ಲಿ ಅಂಗನವಾಡಿ ಕೇಂದ್ರಗಳಿಗೆ ಅವಧಿ ಮೀರಿದ ಆಹಾರ ಸಾಮಗ್ರಿಗಳನ್ನು ಪೂರೈಕೆ ಮಾಡಿದ ಬಗ್ಗೆ ಸಂಬಂಧಿಸಿದ ಸಿಬ್ಬಂದಿ ವಿರುದ್ಧ ಜಿಲ್ಲಾ ಪಂಚಾಯತ್, ತುಮಕೂರು ರವರು ಅಮಾನತ್ತುಗೊಳಿಸಿರುತ್ತಾರೆ. ವಿಚಾರಣೆ ಪ್ರಕ್ರಿಯೆಯಲ್ಲಿರುತ್ತದೆ.	1	
20	2017–18 ನೇ ಸಾಲಿನಲ್ಲಿ ಶಿಶು ಅಭಿವೃದ್ಧಿ ಯೋಜನೆ, ದೇವದುರ್ಗ ಇಲ್ಲಿ ಅಂಗನವಾಡಿ ಕೇಂದ್ರಗಳಿಗೆ ಗುಣಮಟ್ಟದ ಆಹಾರ ಸಾಮಗ್ರಿಗಳನ್ನು ವಿತರಣೆ ಮಾಡಿಲ್ಲದಿರುವ ಬಗ್ಗೆ ಸಂಬಂಧಿಸಿದ ಸಿಬ್ಬಂದಿಗಳನ್ನು ಜಿಲ್ಲಾಧಿಕಾರಿಗಳು, ರಾಯಚೂರು ರವರು ಅಮಾನತ್ತುಗೊಳಿಸಿರುತ್ತಾರೆ. ಪ್ರಕರಣ ಚಾಲ್ತಿಯಲ್ಲಿರುತ್ತದೆ.	5	
	ಒಟ್ಟು	82	

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1522
ಸದಸ್ಯರ ಹೆಸರು : ಶ್ರೀ ವಿ. ಸುನೀಲ್ ಕುಮಾರ್
ಉತ್ತರಿಸುವ ದಿನಾಂಕ : 18.12.2018
ಉತ್ತರಿಸುವ ಸಚಿವರು : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನಲ್ಲಿ ಬಾಲಭವನ ನಿರ್ಮಾಣದ ಬಗ್ಗೆ ಸರ್ಕಾರದ ನಿಲುವೇನು;	ಉಡುಪಿ ಜಿಲ್ಲೆಯ ಕಾರ್ಕಳ ನಗರದಲ್ಲಿ ಲಭ್ಯವಿರುವ ಜಾಗದಲ್ಲಿ ಸುಸಜ್ಜಿತವಾದ ಬಾಲಭವನ ನಿರ್ಮಿಸುವ ಪ್ರಸ್ತಾವನೆ ಸ್ವೀಕೃತವಾಗಿದ್ದು, ಸದರಿ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.
ಆ)	ರಾಜ್ಯದಲ್ಲಿ ಬಾಲಭವನಗಳನ್ನು ನಿರ್ಮಿಸುವಲ್ಲಿ ಇರುವ ಮಾರ್ಗಸೂಚಿಗಳೇನು; (ಸಂಪೂರ್ಣ ವಿವರಗಳನ್ನು ಒದಗಿಸುವುದು)	ಮಾರ್ಗಸೂಚಿಗಳ ವಿವರವನ್ನು ಅನುಬಂಧದಲ್ಲಿ ಒದಗಿಸಿದೆ.
ಇ)	ರಾಜ್ಯದಲ್ಲಿ ಯಾವ ಯಾವ ತಾಲ್ಲೂಕುಗಳಲ್ಲಿ ಬಾಲಭವನಗಳ ನಿರ್ಮಾಣದ ಬೇಡಿಕೆ ಇದೆ? (ತಾಲ್ಲೂವಾರು ಸಂಪೂರ್ಣ ವಿವರಗಳನ್ನು ಒದಗಿಸುವುದು)	ಪ್ರಸ್ತುತ ಬೀದರ್, ಕಾರ್ಕಳ ಮತ್ತು ಖಾನಾಪುರ ತಾಲ್ಲೂಕುಗಳಲ್ಲಿ ಬಾಲಭವನ ನಿರ್ಮಾಣ ಮಾಡಲು ಬಾಲಭವನ ಸೊಸೈಟಿ, ಬೆಂಗಳೂರು ಇವರಲ್ಲಿ ಪ್ರಸ್ತಾವನೆಯು ಸ್ವೀಕೃತವಾಗಿದ್ದು, ಪರಿಶೀಲನೆಯಲ್ಲಿದೆ.

ಸಂಖ್ಯೆ: ಮಮಇ 61 ರಾಮಅ 2018

(ಡಾ॥ ಜಯಮಾಲ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ,
ಹಿರಿಯ ನಾಗರೀಕರ ಸಬಲೀಕರಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು

(1)

ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ವಿ. ಸುನೀಲ್ ಕುಮಾರ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1522ಕ್ಕೆ ಅನುಬಂಧ

ಜಿಲ್ಲಾ/ತಾಲ್ಲೂಕು ಮಟ್ಟದಲ್ಲಿ ಬಾಲ ಭವನಗಳನ್ನು ನಿರ್ಮಾಣ ಮಾಡಲು ಅನುಸರಿಬೇಕಾದ ಮಾರ್ಗ ಸೂಚಿಗಳ ವಿವರ:

1. ಜಿಲ್ಲಾ/ತಾಲ್ಲೂಕು ಬಾಲ ಭವನವನ್ನು ಸ್ಥಾಪಿಸಲು ಸಣ್ಣ ಪ್ರಮಾಣದಲ್ಲಿ ನಿರ್ಮಾಣ ಮಾಡಬೇಕಾದಲ್ಲಿ ಕನಿಷ್ಠ ಒಂದು ಎಕರೆ ಜಮೀನನ್ನು ಕಾರ್ಯದರ್ಶಿಗಳು ಜಿಲ್ಲಾ ಬಾಲಭವನ ಸಮಿತಿ/ಕಾರ್ಯದರ್ಶಿಗಳು ತಾಲ್ಲೂಕು ಬಾಲ ಭವನ ಸಮಿತಿ ಇವರ ಹೆಸರಿನಲ್ಲಿ ಹೊಂದಿರಬೇಕು.
2. ಜಿಲ್ಲೆಯಲ್ಲಿ/ತಾಲ್ಲೂಕುಗಳಲ್ಲಿ ಬಾಲ ಭವನ ಕಟ್ಟಡವನ್ನು ನಿರ್ಮಿಸಲು ಜಾಗವು ಇತರೆ ಹೆಸರಿನಲ್ಲಿ ಇರುವುದು ಕಂಡು ಬಂದರೆ, ಆ ಜಮೀನಿನ ದಾಖಲೆಯನ್ನು ಕಾರ್ಯದರ್ಶಿಗಳು ಜಿಲ್ಲಾ ಬಾಲ ಭವನ ಸಮಿತಿ/ ತಾಲ್ಲೂಕು ಬಾಲ ಭವನ ಸಮಿತಿ ಇವರ ಹೆಸರಿಗೆ ಕಡ್ಡಾಯವಾಗಿ ವರ್ಗಾಯಿಸುವುದು ಮತ್ತು ವರ್ಗಾಯಿಸಿದ ದಾಖಲೆಗಳನ್ನು ಕೇಂದ್ರ ಬಾಲ ಭವನಕ್ಕೆ ಸಲ್ಲಿಸತಕ್ಕದ್ದು.
3. ಒಂದು ಮೂಲೆಯಲ್ಲಿ ಜಿಲ್ಲಾ ಬಾಲ ಭವನ/ತಾಲ್ಲೂಕು ಬಾಲಭವನ ಕಟ್ಟಡವನ್ನು ನಿಗದಿತ ನಕ್ಷೆಯಂತೆ ನಿರ್ಮಿಸಲು ಅಂದಾಜು ವೆಚ್ಚದ ಪಟ್ಟಿ ತಯಾರಿಸಿ, ವಿಷಯಗಳನ್ನು ಜಿಲ್ಲಾ ಬಾಲ ಭವನ/ತಾಲ್ಲೂಕು ಬಾಲ ಭವನ ಸಮಿತಿ ಸಭೆಯಲ್ಲಿ ಚರ್ಚಿಸಿ, ತಗಲುಬಹುದಾದ ವೆಚ್ಚವನ್ನು ಜಿಲ್ಲಾ ಪಂಚಾಯಿತಿ/ಪುರಸಭೆ ಹಾಗೂ ಇತರೆ ಮೂಲಗಳಿಂದ ಒದಗಿಸಬಹುದಾದ ಹಣವನ್ನು ಇತ್ಯರ್ಥ ಮಾಡಿಕೊಳ್ಳಬೇಕು.
4. ಕಟ್ಟಡ ನಿರ್ಮಾಣಕ್ಕಾಗಿ ಪೂರ್ತಿ ಜಮೀನಿಗೆ ಬೇಲಿ ಅಥವಾ ಇನ್ನಾವುದೇ ರೀತಿಯ ಬಂದೋಬಸ್ತು ಮಾಡುವುದು. ಸದರಿ ಜಾಗದ ಹಕ್ಕು ಪತ್ರ, ಖಾತೆ ಇನ್ನಿತರೆ ಅಗತ್ಯವಿರುವ ದಾಖಲೆಗಳನ್ನು ಕೇಂದ್ರ ಬಾಲ ಭವನಕ್ಕೆ ಸಲ್ಲಿಸತಕ್ಕದ್ದು.
5. ಮಕ್ಕಳಿಗೆ ಆಟಿಕೆಗಳಾದ ಜಾರುಬಂಡೆ, ಉಯ್ಯಾಲೆ ಮುಂತಾದವುಗಳನ್ನು ಅಳವಡಿಸುವ ಬಗ್ಗೆ ಅಂದರೆ ಅಂದಾಜು ಪಟ್ಟಿ, ನಕ್ಷೆ,ಮಕ್ಕಳ ಕಾರ್ಯಕ್ರಮ/ಚಟುವಟಿಕೆಗಳನ್ನು ಸುಗಮವಾಗಿ ನಡೆಸಲು ಕೈಗೊಳ್ಳಲಾಗುವ ಇತರೆ ಅಭಿವೃದ್ಧಿ ಕಾಮಗಾರಿ, ಇತ್ಯಾದಿಗಳ ಬಗ್ಗೆ ಪೂರ್ಣ ಪ್ರಮಾಣದ ಪ್ರಸ್ತಾವನೆಯನ್ನು ಸಲ್ಲಿಸುವುದು.
6. ಜಮೀನು/ನಿವೇಶನ ಲಭ್ಯವಿದ್ದಲ್ಲಿ ಕಟ್ಟಡ ನಿರ್ಮಾಣಕ್ಕಾಗಿ ಸರ್ಕಾರದಿಂದ ರಚಿಸಿರುವ ಜಿಲ್ಲಾ ಬಾಲಭವನದ ಸಮಿತಿಯ ಸಭೆಯಲ್ಲಿ ನಿರ್ಣಯಿಸಿ, ಜಿಲ್ಲಾ ಬಾಲಭವನದ ನಿರ್ಮಾಣಕ್ಕಾಗಿ ಅನುದಾನ ಅವಶ್ಯಕತೆಯಿದ್ದಲ್ಲಿ, ನಡವಳಿಯೊಂದಿಗೆ ಎಲ್ಲಾ ದಾಖಲೆಗಳನ್ನು ಸೂಕ್ತ ಪ್ರಸ್ತಾವನೆಗಳೊಂದಿಗೆ ಕೇಂದ್ರ ಬಾಲಭವನಕ್ಕೆ ಸಲ್ಲಿಸಿದಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

***

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2092
ಸದಸ್ಯರ ಹೆಸರು : ಯತೀಂದ್ರ ಎಸ್. (ವರುಣ)
ಉತ್ತರಿಸಬೇಕಾದ ದಿನಾಂಕ : 18.12.2018
ಉತ್ತರಿಸುವ ಸಚಿವರು : ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು.

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಅಪೌಷ್ಠಿಕಾಂಶದಿಂದ ಬಳಲುತ್ತಿರುವ ಮಕ್ಕಳುಗಳ ಸಂಖ್ಯೆ ಎಷ್ಟು;</td><td>ರಾಜ್ಯದಲ್ಲಿ ನವಂಬರ್-2018ಕ್ಕೆ ತೀವ್ರ ಅಪೌಷ್ಠಿಕತೆಯಿಂದ ಬಳಲುತ್ತಿರುವ ಮಕ್ಕಳ ಸಂಖ್ಯೆ: 13694.</td></tr>
<tr><td>ಆ)</td><td>ಕಳೆದ 3 ವರ್ಷಗಳಲ್ಲಿ ಎಷ್ಟು ಶೇಕಡವಾರು ಮಕ್ಕಳು ಅಪೌಷ್ಠಿಕಾಂಶದಿಂದ ಬಳಲುತ್ತಿದ್ದಾರೆ;</td><td>ಕಳೆದ 3 ವರ್ಷಗಳಲ್ಲಿ ತೀವ್ರ ಅಪೌಷ್ಠಿಕತೆಯಿಂದ ಬಳಲುತ್ತಿರುವ ಮಕ್ಕಳ ಶೇಕಡವಾರು ಮಾಹಿತಿ ಕೆಳಕಂಡಂತಿದೆ.
<table><tr><th>ಕ್ರ. ಸಂ.</th><th>ವರ್ಷ</th><th>ಅಪೌಷ್ಠಿಕ ಮಕ್ಕಳ ಶೇಕಡವಾರು</th></tr><tr><td>1</td><td>2015-16</td><td>0.51</td></tr><tr><td>2</td><td>2016-17</td><td>0.46</td></tr><tr><td>3</td><td>2017-18</td><td>0.40</td></tr></table></td></tr>
<tr><td>ಇ)</td><td>ಹಾಲಿ ಅಪೌಷ್ಠಿಕಾಂಶದಿಂದ ಬಳಲುತ್ತಿರುವ ಮಕ್ಕಳ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?</td><td>ಸರ್ಕಾರವು ಅಪೌಷ್ಠಿಕತೆಯನ್ನು ಹೋಗಲಾಡಿಸಲು ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ.
ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ ಸಾಮಾನ್ಯ ಮಕ್ಕಳಿಗೆ ಪ್ರತಿ ದಿನ ರೂ. 8.00 /-ರಂತೆ ಘಟಕ ವೆಚ್ಚ ಭರಿಸುತ್ತಿದ್ದು, ತೀವ್ರ ಅಪೌಷ್ಠಿಕತೆಯುಳ್ಳ ಮಕ್ಕಳಿಗೆ ರೂ. 12.00 /- ರ ಪೂರಕ ಪೌಷ್ಠಿಕ ಆಹಾರವನ್ನು ನೀಡಲಾಗುತ್ತಿದೆ.
3 ರಿಂದ 6 ವರ್ಷದ ಸಾಮಾನ್ಯ ಮಕ್ಕಳಿಗೆ ವಾರದಲ್ಲಿ 2 ದಿನ ಮೊಟ್ಟೆ ಹಾಗೂ 5 ದಿನ ಹಾಲು ನೀಡಲಾಗುವುದು.
6 ತಿಂಗಳಿನಿಂದ 3 ವರ್ಷದ ತೀವ್ರ ಅಪೌಷ್ಠಿಕ ಮಕ್ಕಳಿಗೆ ಹಾಗೂ ಹಿಂದುಳಿದ 5 ಜಿಲ್ಲೆಗಳಾದ ಬೀದರ್, ಕಲಬುರಗಿ, ಯಾದಗಿರಿ, ಕೊಪ್ಪಳ ಹಾಗೂ ರಾಯಚೂರಿನ ಸಾಧಾರಣ ಅಪೌಷ್ಠಿಕ ಮಕ್ಕಳಿಗೆ ವಾರದಲ್ಲಿ 3 ದಿನ ಮೊಟ್ಟೆ ಹಾಗೂ 3 ದಿನ 200 ಎಂ.ಎಲ್ ಕೆನೆಭರಿತ ಹಾಲನ್ನು, ಮೊಟ್ಟೆ ಸ್ವೀಕರಿಸದಿರುವ ಮಕ್ಕಳಿಗೆ ವಾರದಲ್ಲಿ 6 ದಿನ ಕೆನೆಭರಿತ ಹಾಲನ್ನು ನೀಡಲಾಗುತ್ತಿದೆ.
3 ರಿಂದ 6 ವರ್ಷದ ತೀವ್ರ ಅಪೌಷ್ಠಿಕ ಮಕ್ಕಳಿಗೆ ಹಾಗೂ ಹಿಂದುಳಿದ 5 ಜಿಲ್ಲೆಗಳಾದ ಬೀದರ್, ಕಲಬುರಗಿ, ಯಾದಗಿರಿ, ಕೊಪ್ಪಳ ಹಾಗೂ ರಾಯಚೂರಿನ ಸಾಧಾರಣ ಅಪೌಷ್ಠಿಕ ಮಕ್ಕಳಿಗೆ ವಾರದಲ್ಲಿ 5 ದಿನ ಮೊಟ್ಟೆ ಹಾಗೂ 5 ದಿನ 200 ಎಂ.ಎಲ್ ಕೆನೆಭರಿತ ಹಾಲನ್ನು ನೀಡಲಾಗುತ್ತಿದೆ.</td></tr>
</table>

		• ತೀವ್ರ ಅಪೌಷ್ಠಿಕ ಮಕ್ಕಳ ವೈದ್ಯಕೀಯ ವೆಚ್ಚ ಯೋಜನೆಯಡಿ ಔಷಧಿ ಹಾಗೂ ಚಿಕಿತ್ಸಾ ಆಹಾರಕ್ಕಾಗಿ (Therapeutic food) ಪ್ರತಿ ಮಗುವಿಗೆ ವಾರ್ಷಿಕ ರೂ.2000/-ಗಳಂತೆ ವೆಚ್ಚ ಭರಿಸಲಾಗುತ್ತಿದೆ. • ಆರೋಗ್ಯ ಇಲಾಖೆಯ ಸಹಯೋಗದೊಂದಿಗೆ ಪೌಷ್ಠಿಕ ಪುನರ್ವಸತಿ ಕೇಂದ್ರ (NRC) ಗಳಲ್ಲಿ ಅಪೌಷ್ಠಿಕ ಮಕ್ಕಳಿಗೆ ಚಿಕಿತ್ಸೆ ನೀಡಲಾಗುತ್ತಿದೆ.

ಸಂ:ಮಮಇ 349 ಐಸಿಡಿ 2018

(ಡಾ॥ ಜಯಮಾಲ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ವಿಕಲಚೇತನರ
ಹಾಗೂ ಹಿರಿಯ ನಾಗರೀಕರ ಸಬಲೀಕರಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1565
ಸದಸ್ಯರ ಹೆಸರು	:	ಶ್ರೀ ನಾರಾಯಣ ಗೌಡ (ಕೆ.ಆರ್. ಪೇಟೆ)
ಉತ್ತರಿಸಬೇಕಾದ ದಿನಾಂಕ	:	18-12-2018
ಉತ್ತರಿಸುವ ಸಚಿವರು	:	ಮುಖ್ಯಮಂತ್ರಿಯವರು

***

	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ವಿದ್ಯುತ್ ಅವಘಡದಿಂದ ಮೃತಪಟ್ಟ ಕುಟುಂಬ ಸದಸ್ಯರಿಗೆ ಸರ್ಕಾರ ನಿಗದಿಪಡಿಸಿರುವ ಪರಿಹಾರದ ಮೊತ್ತವೆಷ್ಟು? (ವಿವರ ನೀಡುವುದು)	ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಆದೇಶ ಸಂಖ್ಯೆ ಕವಿಪ್ರನಿನಿ/ಬಿ7/2476/1995-96/ಸಂ.1, ಬೆಂಗಳೂರು, ದಿನಾಂಕ: 9-11-2017 ರನ್ವಯ ದಿನಾಂಕ 7-8-2017 ರಿಂದ ಪೂರ್ವಾನ್ವಯವಾಗುವಂತೆ ಈ ಕೆಳಗಿನಂತೆ ಪರಿಹಾರವನ್ನು ನೀಡಲು ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ.

ಅಪಘಾತದ ಮಾದರಿ	ಪರಿಹಾರ ಮೊತ್ತ
ಮಾರಣಾಂತಿಕ-ಮನುಷ್ಯ	ವಿದ್ಯುತ್ ಅಪಘಾತದಿಂದ ವ್ಯಕ್ತಿ ಮೃತಪಟ್ಟಲ್ಲಿ - ಪ್ರತಿ ವ್ಯಕ್ತಿಗೆ 5 ಲಕ್ಷ ರೂ.ಗಳ ಪರಿಹಾರ.
ಮಾರಣಾಂತಿಕ - ಪ್ರಾಣಿ	ವಿದ್ಯುತ್ ಅಪಘಾತದಿಂದ ಪ್ರಾಣಿಗಳು ಮೃತಪಟ್ಟಲ್ಲಿ - ಪ್ರತಿ ಪ್ರಾಣಿಗೆ 50,000 ರೂ.ಗಳು ಮೀರದಂತೆ ಪರಿಹಾರ. (ಸಕ್ಷಮ ಪ್ರಾಧಿಕಾರದಿಂದ ಸಮಂಜಸವಾದ ಪರಿಹಾರ ನಿರ್ಣಯದ ಷರತ್ತಿಗೊಳಪಟ್ಟು)
ಪೂರ್ಣ ಶಾಶ್ವತ ಅಂಗವಿಕಲತೆ	ವಿದ್ಯುತ್ ಅಪಘಾತದಿಂದ ವ್ಯಕ್ತಿಯು ಒಟ್ಟು ಶಾಶ್ವತ ನಿಷ್ಕ್ರಿಯತೆಗೊಳಪಟ್ಟಲ್ಲಿ - 5 ಲಕ್ಷ ರೂ.ಗಳು ಪ್ರತಿ ವ್ಯಕ್ತಿಗೆ.
ಭಾಗಶಃ ಶಾಶ್ವತ ಅಂಗವಿಕಲತೆ	ವಿದ್ಯುತ್ ಅಪಘಾತದಿಂದ ವ್ಯಕ್ತಿಯು ಭಾಗಶಃ ಶಾಶ್ವತ ಅಶಕ್ತತೆ ಉಂಟಾದಲ್ಲಿ - ಶೇಕಡವಾರು ನಿಷ್ಕ್ರಿಯತೆಗೊಳಪಟ್ಟು ಕನಿಷ್ಠ 1 ಲಕ್ಷ ರೂ.ಗಳು ಗರಿಷ್ಠ 5 ಲಕ್ಷ ರೂ.ಗಳು.
ತೀವ್ರ ಗಾಯ	ವಿದ್ಯುತ್ ಅಪಘಾತದಿಂದ ವ್ಯಕ್ತಿಯು ತೀವ್ರವಾಗಿ ಗಾಯಗೊಂಡಿದ್ದಲ್ಲಿ - ಭಾರತೀಯ ದಂಡ ಸಂಹಿತೆ ಸೆಕ್ಷನ್ 320 ರಲ್ಲಿರುವಂತೆ - ಗರಿಷ್ಠ 1 ಲಕ್ಷ ರೂ.ಗಳ ಮಿತಿಗೊಳಪಟ್ಟು ಪರಿಹಾರ
ಗಾಯ	ವಿದ್ಯುತ್ ಅಪಘಾತದಿಂದ ವ್ಯಕ್ತಿಯು ಗಾಯಗೊಂಡಿದ್ದಲ್ಲಿ - ಭಾರತೀಯ ದಂಡ ಸಂಹಿತೆ ಸೆಕ್ಷನ್ 319 ರಲ್ಲಿರುವಂತೆ - ಗರಿಷ್ಠ 20,000 ರೂ.ಗಳ ಮಿತಿಗೊಳಪಟ್ಟು ಪರಿಹಾರ
ತಾತ್ಕಾಲಿಕ ಪೂರ್ಣ ಅಂಗವಿಕಲತೆ	ವಿದ್ಯುತ್ ಅಪಘಾತದಲ್ಲಿ ವ್ಯಕ್ತಿಯು ತೀವ್ರ ಗಾಯದಿಂದ ಯಾವುದೇ ಅವಧಿಗೆ ತಾತ್ಕಾಲಿಕ ಪೂರ್ಣ ಅಶಕ್ತತೆಗೊಳಪಟ್ಟಲ್ಲಿ - ಕನಿಷ್ಠ 50,000 ರೂ.ಗಳು ಹಾಗೂ ಗರಿಷ್ಠ 1 ಲಕ್ಷ ರೂ.ಗಳ ಪರಿಹಾರ.
ತಾತ್ಕಾಲಿಕ ಭಾಗಶಃ ಅಂಗವಿಕಲತೆ	ವಿದ್ಯುತ್ ಅಪಘಾತದಲ್ಲಿ ವ್ಯಕ್ತಿಯು ತೀವ್ರ ಗಾಯದಿಂದ ಕನಿಷ್ಠ 15 ದಿನಗಳ ಅವಧಿಗೆ ತಾತ್ಕಾಲಿಕ ಭಾಗಶಃ ಅಶಕ್ತತೆಗೊಳಪಟ್ಟಲ್ಲಿ - ಕನಿಷ್ಠ 25,000 ರೂ.ಗಳು ಹಾಗೂ ಗರಿಷ್ಠ 50,000 ರೂ.ಗಳ ಪರಿಹಾರ.
ವೈದ್ಯಕೀಯ ವೆಚ್ಚಗಳು	ವಿದ್ಯುತ್ ಅಪಘಾತದಿಂದ ಆಸ್ಪತ್ರೆಯಲ್ಲಿದ್ದು ಪಡೆದುಕೊಳ್ಳಲಾದ ಚಿಕಿತ್ಸೆಯ ವಾಸ್ತವಿಕ ವೆಚ್ಚಗಳು ಮತ್ತು/ಅಥವಾ ವಿದ್ಯುತ್ ಅಪಘಾತದಿಂದ ಉಂಟಾದ ಗಾಯಗಳ ಚಿಕಿತ್ಸೆಗಾಗಿ ಮಾಡಲಾದ ವಾಸ್ತವಿಕ ವೆಚ್ಚಗಳನ್ನು ಗಾಯಗೊಂಡ ವ್ಯಕ್ತಿಗೆ/ಮೃತಪಟ್ಟ ವ್ಯಕ್ತಿಯ ವಾರಸುದಾರರಿಗೆ ಪ್ರಕರಣಕ್ಕನುಗುಣವಾಗಿ ಮೇಲೆ ತಿಳಿಸಲಾದ ಪರಿಹಾರದ ಮೊತ್ತದೊಂದಿಗೆ ಪಾವತಿಸುವುದು.

ಆ)	ಕಳೆದ ಎರಡು ವರ್ಷಗಳ ಅವಧಿಯಲ್ಲಿ ವಿದ್ಯುತ್ ಅವಘಡದಿಂದ ಮೃತಪಟ್ಟವರ ಸಂಖ್ಯೆ ಎಷ್ಟು; ಈ ಪೈಕಿ ಪರಿಹಾರ ವಿತರಿಸಿರುವ ಪ್ರಕರಣಗಳೆಷ್ಟು; ತಿರಸ್ಕರಿಸಿರುವ ಪ್ರಕರಣಗಳೆಷ್ಟು; ಯಾವ ಕಾರಣಕ್ಕೆ ತಿರಸ್ಕರಿಸಲಾಗಿದೆ; (ಪೂರ್ಣ ವಿವರ ನೀಡುವುದು)	ರಾಜ್ಯದಲ್ಲಿ 2016-17 ರಿಂದ 2017-18 ನೇ ಸಾಲಿನಲ್ಲಿ ವಿದ್ಯುತ್ ಅಪಘಾತದಿಂದ ಮೃತಪಟ್ಟವರ ಸಂಖ್ಯೆ, ಪರಿಹಾರ ವಿತರಿಸಿರುವ ಹಾಗೂ ತಿರಸ್ಕರಿಸಿರುವ ಪ್ರಕರಣಗಳ ವಿವರಗಳು ಕೆಳಕಂಡಂತಿದ್ದು, ವಿದ್ಯುತ್ ಸರಬರಾಜು ಕಂಪನಿವಾರು ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ವರ್ಷ / ವಿವರ		2016-17	2017-18	2018-19 (ಅಕ್ಟೋಬರ್ -18 ರವರೆಗೆ)
ವಿದ್ಯುತ್ ಅಪಘಾತದಿಂದ ಮೃತಪಟ್ಟವರ ಸಂಖ್ಯೆ	ಇಲಾಖೆ	32	34	20
	ಇಲಾಖೇತರ	397	394	380
ಪರಿಹಾರ ವಿತರಿಸಲಾದ ಪ್ರಕರಣಗಳ ಸಂಖ್ಯೆ	ಇಲಾಖೆ	24	27	12
	ಇಲಾಖೇತರ	109	65	51
ತಿರಸ್ಕೃತಗೊಂಡ ಪ್ರಕರಣಗಳ ಸಂಖ್ಯೆ	ಇಲಾಖೆ	0	1	0
	ಇಲಾಖೇತರ	219	216	143
ಬಾಕಿ ಉಳಿದಿರುವ ಪ್ರಕರಣಗಳ ಸಂಖ್ಯೆ	ಇಲಾಖೆ	8	6	8
	ಇಲಾಖೇತರ	69	113	186

ಇ)	ವಿದ್ಯುತ್ ಅವಘಡಕ್ಕೆ ತುತ್ತಾಗಿ ಮೃತಪಟ್ಟ ಕುಟುಂಬದ ಅವಲಂಬಿತರಿಗೆ ಪರಿಹಾರ ನೀಡಲು ಸರ್ಕಾರ ನಿಗದಿಪಡಿಸಿರುವ ಮಾನದಂಡಗಳೇನು (ಪೂರ್ಣ ವಿವರ ಒದಗಿಸುವುದು)?	ವಿದ್ಯುತ್ ಅಪಘಾತಗಳು ಸಂಭವಿಸಿದಾಗ ವೈದ್ಯಾಧಿಕಾರಿಗಳು ಹಾಗೂ ವಿದ್ಯುತ್ ಪರೀವಿಕ್ಷಕರು ನೀಡುವ ವರದಿಯಲ್ಲಿ ನಿಗಮದ ವತಿಯಿಂದ ಅಪಘಾತ ಸಂಭವಿಸಿರುವುದು ಧೃಡಪಟ್ಟಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದಿಂದ ಹೊರಡಿಸಿರುವ ಆದೇಶದನ್ವಯ ವಿದ್ಯುತ್ ಸರಬರಾಜು ಕಂಪನಿಗಳು ಪರಿಹಾರವನ್ನು ನೀಡುತ್ತಿವೆ.

ಸಂಖ್ಯೆ: ಇಎನ್ 158 ಪಿಪಿಎಂ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ

ಅನುಬಂಧ

2016–17 ರಿಂದ 2018–19 (ಅಕ್ಟೋಬರ್ 2018ರ ಅಂತ್ಯಕ್ಕೆ) ವಿದ್ಯುತ್ ಅಪಘಾತದಿಂದ ಮೃತಪಟ್ಟವರ ಸಂಖ್ಯೆ, ಪರಿಹಾರ ನೀಡಲಾದ ಹಾಗೂ ತಿರಸ್ಕೃತಗೊಂಡ ಪ್ರಕರಣಗಳ ವಿವರಗಳು:

1) ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ:

ವರ್ಷ	ವಿದ್ಯುತ್ ಅಪಘಾತದಿಂದ ಮೃತ ಪಟ್ಟವರ ಸಂಖ್ಯೆ		ಪರಿಹಾರ ವಿತರಿಸಲಾದ ಪ್ರಕರಣಗಳ ಸಂಖ್ಯೆ		ತಿರಸ್ಕೃತಗೊಂಡ ಪ್ರಕರಣಗಳ ಸಂಖ್ಯೆ		ಬಾಕಿ ಉಳಿದಿರುವ ಪ್ರಕರಣಗಳ ಸಂಖ್ಯೆ		ತಿರಸ್ಕೃತಗೊಂಡ ಪ್ರಕರಣಗಳ ಕಾರಣಗಳು
	ಇಲಾಖೆ	ಇಲಾಖೇತರ	ಇಲಾಖೆ	ಇಲಾಖೇತರ	ಇಲಾಖೆ	ಇಲಾಖೇತರ	ಇಲಾಖೆ	ಇಲಾಖೇತರ	
2016–17	11	106	11	33	0	70	0	3	1) ಗ್ರಾಹಕರ ವ್ಯಾಪ್ತಿಯಲ್ಲಿರುವ ವಿದ್ಯುತ್ ಸ್ಥಾವರಗಳಿಂದಾಗಿರುವ ಅಪಘಾತಕ್ಕೆ 2) ಅನಧಿಕೃತ ಕೆಲಸ ಮಾಡುವಾಗ ಮತ್ತು ಅನಧಿಕೃತ ಲೈನ್ ಎಳೆದ ಕಾರಣದಿಂದ. 3) ಬೀದಿ ದೀಪದ ವಿದ್ಯುತ್ ಸೋರಿಕೆಯಿಂದಾಗಿ ಆದ ಅಪಘಾತಗಳಿಗೆ 4) ಸಮಾನಾಂತರ ಅಂತರವನ್ನು ಕಾಪಾಡಿಕೊಳ್ಳದೇ ಕಟ್ಟಡ ನಿರ್ಮಾಣ ಮಾಡುವ ಸಂದರ್ಭದಲ್ಲಿ. 5) ವಿದ್ಯುತ್ ಗುತ್ತಿಗೆದಾರರ ಅಡಿಯಲ್ಲಿ ಕೆಲಸ ನಿರ್ವಹಿಸುವಾಗ ಅಪಘಾತ ಸಂಭವಿಸಿದರೆ.
2017–18	10	104	10	16	0	78	0	10	
2018–19 (ಅಕ್ಟೋಬರ್ ರವರೆಗೆ)	7	91	7	9	0	36	0	46	

2) ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ:

ವರ್ಷ	ವಿದ್ಯುತ್ ಅಪಘಾತದಿಂದ ಮೃತ ಪಟ್ಟವರ ಸಂಖ್ಯೆ		ಪರಿಹಾರ ವಿತರಿಸಲಾದ ಪ್ರಕರಣಗಳ ಸಂಖ್ಯೆ		ತಿರಸ್ಕೃತಗೊಂಡ ಪ್ರಕರಣಗಳ ಸಂಖ್ಯೆ		ಬಾಕಿ ಉಳಿದಿರುವ ಪ್ರಕರಣಗಳ ಸಂಖ್ಯೆ		ತಿರಸ್ಕೃತಗೊಂಡ ಪ್ರಕರಣಗಳ ಕಾರಣಗಳು
	ಇಲಾಖೆ	ಇಲಾಖೇತರ	ಇಲಾಖೆ	ಇಲಾಖೇತರ	ಇಲಾಖೆ	ಇಲಾಖೇತರ	ಇಲಾಖೆ	ಇಲಾಖೇತರ	
2016–17	3	57	2	10	0	40	1	7	1) ಸಾರ್ವಜನಿಕರ ನಿರ್ಲಕ್ಷತೆಯಿಂದ ಹಾಗೂ ಸುರಕ್ಷತೆಯ ಅರಿವು ಇಲ್ಲದೆ ಅಪಘಾತ ಸಂಭವಿಸಿರುವುದರಿಂದ, ಸದರಿ ಅಪಘಾತಗಳಿಗೆ ಚಾವಿಸನಿನಿ ಜವಾಬ್ದಾರರಾಗಿರುವುದಿಲ್ಲ. 2) ಅಪಘಾತಗಳಿಗೆ ಸಂಬಂಧಿಸಿದಂತೆ ವಿದ್ಯುತ್ ಪರಿವೀಕ್ಷಕರ ವರದಿ ಲಭ್ಯವಾಗಿರುವುದಿಲ್ಲ. 3) ಅಪಘಾತಕ್ಕೆ ಸಂಬಂಧಿಸಿದ ಅಗತ್ಯ ದಾಖಲಾತಿಗಳನ್ನು ವಿದ್ಯುತ್ ಅವಘಡಕ್ಕೆ ತುತ್ತಾಗಿ ಮೃತಪಟ್ಟ ಕುಟುಂಬದ ಅವಲಂಬಿತರು ಸಲ್ಲಿಸಿರುವುದಿಲ್ಲ.
2017–18	6	53	6	4	0	34	0	15	
2018–19 (ಅಕ್ಟೋಬರ್ ರವರೆಗೆ)	6	58	5	7	0	35	1	16	

3) ಮಂಗಳೂರು ವಿದ್ಯುತ್ ಸರಬರಾಜು ಕಂಪನಿ:

ವರ್ಷ	ವಿದ್ಯುತ್ ಅಪಘಾತದಿಂದ ಮೃತ ಪಟ್ಟವರ ಸಂಖ್ಯೆ		ಪರಿಹಾರ ವಿತರಿಸಲಾದ ಪ್ರಕರಣಗಳ ಸಂಖ್ಯೆ		ತಿರಸ್ಕೃತಗೊಂಡ ಪ್ರಕರಣಗಳ ಸಂಖ್ಯೆ		ಬಾಕಿ ಉಳಿದಿರುವ ಪ್ರಕರಣಗಳ ಸಂಖ್ಯೆ		ತಿರಸ್ಕೃತಗೊಂಡ ಪ್ರಕರಣಗಳ ಕಾರಣಗಳು
	ಇಲಾಖೆ	ಇಲಾಖೇತರ	ಇಲಾಖೆ	ಇಲಾಖೇತರ	ಇಲಾಖೆ	ಇಲಾಖೇತರ	ಇಲಾಖೆ	ಇಲಾಖೇತರ	
2016-17	4	74	4	25	0	49	0	0	ವಿದ್ಯುತ್ ಅವಘಡಕ್ಕೆ ತುತ್ತಾಗಿ ಮೃತಪಟ್ಟ ಕುಟುಂಬದ ಅವಲಂಬಿತರಿಗೆ ಪರಿಹಾರ ನೀಡಲು ಕಾಲಕಾಲಕ್ಕೆ ಕವಿಪ್ರನಿನಿಯಿಂದ ಹೊರಡಿಸಿದ ಆದೇಶದಲ್ಲಿ ಮಾನದಂಡವನ್ನು ನಿಗದಿಪಡಿಸಿರುತ್ತದೆ. ಅದರಂತೆ ಮ.ವಿ.ಸ.ಕಂ. ಪ್ರತಿ ಪ್ರಕರಣದಲ್ಲಿ ವಿದ್ಯುತ್ ಅವಘಡ ಉಂಟಾಗಿರುವ ಕಾರಣವನ್ನು ಪರಿಶೀಲಿಸಿ ಪರಿಹಾರ ನೀಡಲು ಅಗತ್ಯ ಕ್ರಮ ತೆಗೆದುಕೊಂಡಿರುತ್ತದೆ. ಮುಂದುವರೆದು, ಸದರಿ ಆದೇಶದಲ್ಲಿನ ಮಾನದಂಡಗಳಲ್ಲಿ ಅರ್ಹರಾಗದ ಪ್ರಕರಣಗಳು ತಿರಸ್ಕೃತಗೊಂಡಿರುತ್ತವೆ.
2017-18	4	60	3	15	1	45	0	0	ಎರಡು ಸಂಖ್ಯೆಯ ಪ್ರಕರಣಗಳಲ್ಲಿ ವಾರಸುದಾರರಿಗೆ ಪರಿಹಾರ ನೀಡುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. ಉಳಿದ ಪ್ರಕರಣಗಳಲ್ಲಿ ವಿದ್ಯುತ್ ಅವಘಡಕ್ಕೆ ತುತ್ತಾಗಿ ಮೃತಪಟ್ಟ ಕುಟುಂಬದ ಅವಲಂಬಿತರಿಗೆ ಪರಿಹಾರ ನೀಡಲು ಕವಿಪ್ರನಿನಿ ಆದೇಶ ಸಂಖ್ಯೆ ಕೆಪಿಟಿಸಿಎಲ್/ಬಿ7/2476/95-96/ಸಂ-1 ಬೆಂಗಳೂರು ದಿನಾಂಕ 09-11-2017 ರಲ್ಲಿ ಮಾನದಂಡವನ್ನು ನಿಗದಿಪಡಿಸಿರುತ್ತದೆ. ಅದರಂತೆ ಮ.ವಿ.ಸ.ಕಂ. ಪ್ರತಿ ಪ್ರಕರಣದಲ್ಲಿ ವಿದ್ಯುತ್ ಅವಘಡ ಉಂಟಾಗಿರುವ ಕಾರಣವನ್ನು ಪರಿಶೀಲಿಸಿ ಪರಿಹಾರ ನೀಡಲು ಅಗತ್ಯ ಕ್ರಮ ತೆಗೆದುಕೊಂಡಿರುತ್ತದೆ. ಮುಂದುವರೆದು, ಸದರಿ ಆದೇಶದಲ್ಲಿನ ಮಾನದಂಡಗಳಲ್ಲಿ ಅರ್ಹರಾಗದ ಪ್ರಕರಣಗಳು ತಿರಸ್ಕೃತಗೊಂಡಿರುತ್ತದೆ
2018-19 (ಅಕ್ಟೋಬರ್ ರವರೆಗೆ)	0	55	0	5	0	11	0	39	ವಿದ್ಯುತ್ ಅವಘಡಕ್ಕೆ ತುತ್ತಾಗಿ ಮೃತಪಟ್ಟ ಕುಟುಂಬದ ಅವಲಂಬಿತರಿಗೆ ಪರಿಹಾರ ನೀಡಲು ಕವಿಪ್ರನಿನಿ ಆದೇಶ ಸಂಖ್ಯೆ ಕೆಪಿಟಿಸಿಎಲ್/ಬಿ7/2476/95-96/ಸಂ-1 ಬೆಂಗಳೂರು ದಿನಾಂಕ 09-11-2017 ರಲ್ಲಿ ಮಾನದಂಡವನ್ನು ನಿಗದಿಪಡಿಸಿರುತ್ತದೆ. ಅದರಂತೆ ಮ.ವಿ.ಸ.ಕಂ. ಪ್ರತಿ ಪ್ರಕರಣದಲ್ಲಿ ವಿದ್ಯುತ್ ಅವಘಡ ಉಂಟಾಗಿರುವ ಕಾರಣವನ್ನು ಪರಿಶೀಲಿಸಿ ಪರಿಹಾರ ನೀಡಲು ಅಗತ್ಯ ಕ್ರಮ ತೆಗೆದುಕೊಂಡಿರುತ್ತದೆ. ಮುಂದುವರೆದು, ಸದರಿ ಆದೇಶದಲ್ಲಿನ ಮಾನದಂಡಗಳಲ್ಲಿ ಅರ್ಹರಾಗದ 11 ಸಂಖ್ಯೆಯ ಪ್ರಕರಣಗಳು ತಿರಸ್ಕೃತಗೊಂಡಿರುತ್ತದೆ. ಉಳಿದಂತೆ 39 ಸಂಖ್ಯೆಯ ಪ್ರಕರಣಗಳ ಪರಿಶೀಲನಾ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.

4) ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ:

ವರ್ಷ	ವಿದ್ಯುತ್ ಅಪಘಾತದಿಂದ ಮೃತ ಪಟ್ಟವರ ಸಂಖ್ಯೆ		ಪರಿಹಾರ ವಿತರಿಸಲಾದ ಪ್ರಕರಣಗಳ ಸಂಖ್ಯೆ		ತಿರಸ್ಕೃತಗೊಂಡ ಪ್ರಕರಣಗಳ ಸಂಖ್ಯೆ		ಬಾಕಿ ಉಳಿದಿರುವ ಪ್ರಕರಣಗಳ ಸಂಖ್ಯೆ		ತಿರಸ್ಕೃತಗೊಂಡ ಪ್ರಕರಣಗಳ ಕಾರಣಗಳು
	ಇಲಾಖೆ	ಇಲಾಖೇತರ	ಇಲಾಖೆ	ಇಲಾಖೇತರ	ಇಲಾಖೆ	ಇಲಾಖೇತರ	ಇಲಾಖೆ	ಇಲಾಖೇತರ	
2016–17	10	80	5	17	0	31	5	32	1) ಅನಧಿಕೃತವಾಗಿ ವಿದ್ಯುತ್ ಉಪಯೋಗಿಸುವ ವೇಳೆಯಲ್ಲಿ ವಿದ್ಯುತ್ ಸಂಪರ್ಕಕ್ಕೆ ಬಂದು ಅಪಘಾತ ಸಂಭವಿಸಿದ ಸಂದರ್ಭಗಳಲ್ಲಿ. 2) ವಿದ್ಯುತ್ ಉಪಕರಣಗಳನ್ನು ಬಳಕೆ ಮಾಡುವಾಗ ಸಾಕಷ್ಟು ಸುರಕ್ಷತೆಯನ್ನು ಪಾಲಿಸದೇ ಮೃತರ ಅಜಾಗರೂಕತೆಯಿಂದ ಅಪಘಾತ ಸಂಭವಿಸಿದ ಕಾರಣದಿಂದ
2017–18	11	89	6	13	0	32	5	44	3) ಇನ್ನೊಂದು ಪ್ರಕರಣದಲ್ಲಿ ಮೃತರ ಸಂಬಂಧಿಕರು ನ್ಯಾಯಾಲಯದ ಮೊರೆ ಹೋಗಿದ್ದರಿಂದ ನ್ಯಾಯಾಲಯದ ತೀರ್ಪು ಬಂದ ನಂತರ ಮಾನ್ಯ ನ್ಯಾಯಾಲಯದ ಆದೇಶದಂತೆ ಪರಿಹಾರವನ್ನು ನಿರ್ಧರಿಸಲಾಗುವುದು. 4) ನೀರಿನ ಮೋಟರ್ ಚಾಲನೆಗೊಳಿಸುವಾಗ ಅಜಾತುರ್ಯದಿಂದ ವಿದ್ಯುತ್ ಅಪಘಾತ ಸಂಭವಿಸಿರುವುದು (ಮೃತ ವ್ಯಕ್ತಿಯ ಅಜಾಗರೂಕತೆಯಿಂದ)
2018–19 (ಅಕ್ಟೋಬರ್ ರವರೆಗೆ)	4	101	0	16	0	46	4	39	5) ರೆಗ್ಯೂಲೇಶನ್–2010ರ ನಿಂಬಂಧನೆ–13(3&4) & ಮೃತರಿಂದ ರೆಗ್ಯೂಲೇಶನ್ 19(2) & (3)ರ ಉಲ್ಲಂಘನೆಯಾಗಿರುತ್ತದೆ ಎಂದು ವಿದ್ಯುತ್ ಪರಿವೀಕ್ಷಕರು ಧಾರವಾಡರವರ ವರದಿಯಂತೆ 6) ತನಿಖೆಯಿಂದ ಸತ್ಯಾಂಶ ತಿಳಿದು ಬಂದಿರುವಂತೆ ಮೃತ ವ್ಯಕ್ತಿಯು ವಿದ್ಯುತ್ ಅಪಘಾತದಿಂದ ಮೃತಪಡದೇ ರಸ್ತೆ ಅಪಘಾತದಲ್ಲಿ ಮೃತರಾಗಿರುತ್ತಾರೆ. 7) ವಿದ್ಯುತ್ ಪರಿವೀಕ್ಷಕರು ತನಿಖೆ ಕೈಗೊಂಡು ಹೆಸ್ಕಾಂ ಕಂಪನಿಯ ನಿರ್ಲಕ್ಷತನವಿರದ ಪ್ರಕರಣಗಳಲ್ಲಿ ಪರಿಹಾರವನ್ನು ನಿರಾಕರಿಸಲಾಗಿದೆ.

5) ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ:

ವರ್ಷ	ವಿದ್ಯುತ್ ಅಪಘಾತದಿಂದ ಮೃತ ಪಟ್ಟವರ ಸಂಖ್ಯೆ		ಪರಿಹಾರ ವಿತರಿಸಲಾದ ಪ್ರಕರಣಗಳ ಸಂಖ್ಯೆ		ತಿರಸ್ಕೃತಗೊಂಡ ಪ್ರಕರಣಗಳ ಸಂಖ್ಯೆ		ಬಾಕಿ ಉಳಿದಿರುವ ಪ್ರಕರಣಗಳ ಸಂಖ್ಯೆ		ತಿರಸ್ಕೃತಗೊಂಡ ಪ್ರಕರಣಗಳ ಕಾರಣಗಳು
	ಇಲಾಖೆ	ಇಲಾಖೇತರ	ಇಲಾಖೆ	ಇಲಾಖೇತರ	ಇಲಾಖೆ	ಇಲಾಖೇತರ	ಇಲಾಖೆ	ಇಲಾಖೇತರ	
2016–17	4	80	2	24	0	29	2	27	1) ಸಾರ್ವಜನಿಕರ ನಿರ್ಲಕ್ಷತೆಯಿಂದ ಹಾಗೂ ಸುರಕ್ಷಿತ ಅರಿವು ಇಲ್ಲದೆ ಅಪಘಾತ ಸಂಭವಿಸಿರುವುದರಿಂದ, ಸದರಿ ಅಪಘಾತಗಳಿಗೆ ಗುವಿಸಕಂ ಜವಾಬ್ದಾರರಾಗಿರುವುದಿಲ್ಲ. 2) ಅಪಘಾತಗಳಿಗೆ ಸಂಬಂಧಿಸಿದಂತೆ ವಿದ್ಯುತ್ ಪರಿವೀಕ್ಷಕರ ವರದಿ ಲಭ್ಯವಾಗಿದುವುದಿಲ್ಲ. 3) ಅಪಘಾತಕ್ಕೆ ಸಂಬಂಧಿಸಿದ ಅಗತ್ಯ ದಾಖಲಾತಿಗಳನ್ನು ವಿದ್ಯುತ್ ಅಪಘಡಕ್ಕೆ ತುತ್ತಾಗಿ ಮೃತಪಟ್ಟ ಕುಟುಂಬದ ಅವಲಂಬಿತರು ಸಲ್ಲಿಸಿರುವುದಿಲ್ಲ.
2017–18	3	88	2	17	0	27	1	44	
2018–19 (ಅಕ್ಟೋಬರ್ ರವರೆಗೆ)	3	75	0	14	0	15	3	46	

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2137
ಸದಸ್ಯರ ಹೆಸರು : ಶ್ರೀ ಪ್ರೀತಮ್ ಜೆ. ಗೌಡ (ಹಾಸನ)
ಉತ್ತರಿಸಬೇಕಾದ ದಿನಾಂಕ : 18.12.2018
ಉತ್ತರಿಸಬೇಕಾದ ಸದಸ್ಯರು : ಮುಖ್ಯಮಂತ್ರಿಯವರು

*****

	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಸೋಲಾರ್ ವಿದ್ಯುತ್ ಉತ್ಪಾದನೆ ಮಾಡುವ ಯೋಜನೆಗಳು ಯಾವಾಗ ಜಾರಿಗೆ ಬಂದಿದೆ (ಮಾಹಿತಿ ನೀಡುವುದು);	ರಾಜ್ಯದಲ್ಲಿ ಸೌರ ನೀತಿಯನ್ವಯ ಸೋಲಾರ್ ನಿಂದ ವಿದ್ಯುತ್ ಉತ್ಪಾದನೆ ಮಾಡುವ ಯೋಜನೆ 2011 ರಿಂದ ಜಾರಿಗೆ ಬಂದಿದೆ.
ಆ)	ಹಾಸನ ಜಿಲ್ಲೆಗೆ ಸದರಿ ಯೋಜನೆಯಡಿ ಇಲ್ಲಿಯವರೆಗೆ ಎಷ್ಟು ಜನ ರೈತರು ಕೃಷಿ ಜಮೀನಿನಲ್ಲಿ ಸೋಲಾರ್ ವಿದ್ಯುತ್ ಉತ್ಪಾದನೆ ಮಾಡುವ ಬಗ್ಗೆ ಸರ್ಕಾರಕ್ಕೆ ಬಂದಿರುವ ಅರ್ಜಿಗಳೆಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು);	ಸರ್ಕಾರವು 2014-15 ನೇ ಸಾಲಿನಲ್ಲಿ ರೈತರ ಜಮೀನಿನಲ್ಲಿ ಸೌರ ಯೋಜನೆಯನ್ನು ಅನುಷ್ಠಾನಗೊಳಿಸುವುದಕ್ಕೆ ಅರ್ಜಿಗಳನ್ನು ಆಹ್ವಾನಿಸಿದಾಗ 1-3 ಮೆ.ವ್ಯಾ ಸಾಮರ್ಥ್ಯದ ಭೂಮಾಲೀಕತ್ವ ರೈತರ ಯೋಜನೆಯಡಿ ಹಾಸನ ಜಿಲ್ಲೆಯಲ್ಲಿ 1 ಅರ್ಜಿಯು ಸ್ವೀಕೃತವಾಗಿರುತ್ತದೆ. (ಶ್ರೀಮತಿ ರಾಜಮ್ಮ ನೋಂದಣಿ ಸಂಖ್ಯೆ: 106).
ಇ)	ಹಾಸನ ಜಿಲ್ಲೆಯಲ್ಲಿ ಎಷ್ಟು ರೈತರಿಂದ ಸೋಲಾರ್ ವಿದ್ಯುತ್ ಖರೀದಿಸಲು ಒಪ್ಪಂದ (Power Purchase Agreement) ಗಳನ್ನು ಮಾಡಿಕೊಳ್ಳಲಾಗಿದೆ; ಹಾಗಿದ್ದಲ್ಲಿ, ಕೃಷಿ ಜಮೀನಿನಲ್ಲಿ ಉತ್ಪಾದನೆ ಮಾಡುವ ರೈತರಿಗೆ ಸರ್ಕಾರವು ನೀಡುತ್ತಿರುವ ರಿಯಾಯಿತಿ ಹಾಗೂ ವಿಶೇಷ ಸೌಲಭ್ಯಗಳಾವುವು (ತಾಲ್ಲೂಕುವಾರು ಹಾಗೂ ಜಿಲ್ಲಾವಾರು ಮಾಹಿತಿ ನೀಡುವುದು);	ಅರ್ಜಿದಾರರಿಗೆ ಹಾಸನ ಜಿಲ್ಲೆಯ ಆಲೂರು ತಾಲ್ಲೂಕಿನ ಚವಲಗೆರೆ ಗ್ರಾಮದಲ್ಲಿ ಬೆಸ್ಕಾಂಗೆ ವಿದ್ಯುತ್ ಸರಬರಾಜು ಮಾಡಲು 02 ಮೆ.ವ್ಯಾ ಸಾಮರ್ಥ್ಯದ ಯೋಜನೆಯನ್ನು ದಿನಾಂಕ: 17.03.2015 ರಂದು ಹಂಚಿಕೆ ಮಾಡಿದ್ದು, ಸದರಿಯವರು ದಿನಾಂಕ: 02.07.2015 ರಂದು ಬೆಸ್ಕಾಂನೊಂದಿಗೆ ವಿದ್ಯುತ್ ಖರೀದಿ ಒಪ್ಪಂದವನ್ನು ಮಾಡಿಕೊಂಡಿರುತ್ತಾರೆ. ಆದರೆ, ಸದರಿ ಫಲಾನುಭವಿಯು ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನ ಪರಶುರಾಮ ಹೋಬಳಿಯ ಚನ್ನಮನಾಗತಿಹಳ್ಳಿ ಕಾವಲುಗೆ ಸೌರಘಟಕದ ಸ್ಥಳ ಬದಲಾವಣೆಯನ್ನು ಕೋರಿದ್ದು, ದಿನಾಂಕ: 27.04.2017 ರಂದು ಅನುಮತಿ ನೀಡಲಾಗಿದೆ ಹಾಗೂ ದಿನಾಂಕ: 01.07.2017 ರಂದು ಯೋಜನೆಯು ಅನುಷ್ಠಾನಗೊಂಡಿದೆ. ಸ್ಥಳ ಬದಲಾವಣೆ ಆದ ನಂತರ ಪೂರಕ ವಿದ್ಯುತ್ ಖರೀದಿ ಒಪ್ಪಂದವನ್ನು ದಿನಾಂಕ: 18.05.2017 ರಂದು ಮಾಡಿಕೊಂಡಿರುತ್ತಾರೆ.
ಈ)	ಹಾಸನ ಜಿಲ್ಲೆಯಲ್ಲಿರುವ ಸೋಲಾರ್ ವಿದ್ಯುತ್ ಯೋಜನೆಗಳು ಹಾಗೂ ಕಾಮಗಾರಿಗಳಾವುವು; ಈ	ವಿವಿಧ ವರ್ಗಗಳಡಿ ನವೆಂಬರ್ 2018ರ ಅಂತ್ಯಕ್ಕೆ 59.50 ಮೆ.ವ್ಯಾ ಸಾಮರ್ಥ್ಯದ 6 ಯೋಜನೆಗಳನ್ನು ಹಂಚಿಕೆ

ಯೋಜನೆಯಡಿಯಲ್ಲಿ ರೈತರಿಂದ ಇದೂವರೆಗೂ ಎಷ್ಟು ಮೆಗಾವ್ಯಾಟ್ ಸೋಲಾರ್ ವಿದ್ಯುತ್ ಉತ್ಪಾದನೆ ಮಾಡಲಾಗಿದೆ (ತಾಲ್ಲೂಕುವಾರು ಹಾಗೂ ಜಿಲ್ಲಾವಾರು ಮಾಹಿತಿ ನೀಡುವುದು);

ಮಾಡಲಾಗಿದ್ದು, ಇದರಲ್ಲಿ 20 ಮೆ.ವ್ಯಾ ಸಾಮರ್ಥ್ಯದ 1 ಯೋಜನೆಯು ಅನುಷ್ಠಾನಗೊಂಡಿರುತ್ತದೆ. ಬಾಕಿ ಯೋಜನೆಗಳು ಅನುಷ್ಠಾನದ ವಿವಿಧ ಹಂತದಲ್ಲಿದ್ದು, ವಿವರ ಕೆಳಕಂಡಂತಿದೆ:

ತಾಲ್ಲೂಕು	ಹಂಚಿಕೆ ಸಾಮರ್ಥ್ಯ ಮೆ.ವ್ಯಾನಲ್ಲಿ	ಅನುಷ್ಠಾನ ಸಾಮರ್ಥ್ಯ	ವರ್ಗ
ಹೊಳೆನರಸೀಪುರ	40	20	ಸ್ಪರ್ಧಾತ್ಮಕ ಬಿಡ್ ಮುಖೇನ
ಅರಸೀಕೆರೆ	18	ಪ್ರಗತಿಯಲ್ಲಿದೆ	
ಹಾಸನ	1.5		ಸ್ವಂತ ಬಳಕೆ
ಒಟ್ಟು	**59.5**	**20**	

ಕೇಂದ್ರ ಸರ್ಕಾರದ 13ನೇ ಹಣಕಾಸು ಆಯೋಗದಡಿ ನವೀಕರಿಸಬಹುದಾದ ಇಂಧನ ಅಭಿವೃದ್ಧಿಗಾಗಿ ನೀಡಿರುವ ಪ್ರೋತ್ಸಾಹಕ ಅನುದಾನದಲ್ಲಿ ಹಾಸನ ಜಿಲ್ಲಾ ವ್ಯಾಪ್ತಿಯಲ್ಲಿ ಆಯ್ದ 150 ಸರ್ಕಾರಿ ಕಛೇರಿ ಕಟ್ಟಡಗಳ ಸ್ಥಾವರಗಳ ಮೇಲೆ ಹಾಗೂ ನಗರ ಪ್ರದೇಶಗಳಲ್ಲಿ ಕೇಂದ್ರ ಸರ್ಕಾರದ ಸಮಗ್ರ ವಿದ್ಯುತ್ ಅಭಿವೃದ್ಧಿ ಯೋಜನೆಯಡಿ (ಐ.ಪಿ.ಡಿ.ಎಸ್) ಹಾಸನ ಜಿಲ್ಲಾ ವ್ಯಾಪ್ತಿಯಲ್ಲಿ ಆಯ್ದ 147 ಸರ್ಕಾರಿ ಕಛೇರಿ ಕಟ್ಟಡಗಳ ಮೇಲೆ ಸೌರಶಕ್ತಿ ಮೇಲ್ಛಾವಣಿ ಘಟಕಗಳನ್ನು ಅಳವಡಿಸಲಾಗಿರುತ್ತದೆ. ಕ್ರೆಡಲ್ ವತಿಯಿಂದ ಕಂದಾಯ ಇಲಾಖೆಯ 30 ನೆಮ್ಮದಿ ಕೇಂದ್ರಗಳಿಗೆ ಪ್ರತಿ ಕೇಂದ್ರಕ್ಕೆ 2 ಕಿ.ವ್ಯಾ. ಸಾಮರ್ಥ್ಯದಂತೆ ಒಟ್ಟು 60 ಕಿ.ವ್ಯಾ. ಸಾಮರ್ಥ್ಯದ ಸೌರ ಮೇಲ್ಛಾವಣಿ ಘಟಕಗಳನ್ನು ಅಳವಡಿಸಲಾಗಿದೆ. ತಾಲ್ಲೂಕುವಾರು ವಿವರ ಕೆಳಕಂಡಂತಿದೆ :

ತಾಲ್ಲೂಕು	ಅನುಷ್ಠಾನ ಗೊಳಿಸಿರುವ ಸೌರಶಕ್ತಿ ಮೇಲ್ಛಾವಣಿ ಘಟಕಗಳ ಸಂಖ್ಯೆ		
	ಐ.ಪಿ.ಡಿ.ಎಸ್.	13ನೇ ಹಣಕಾಸು ಆಯೋಗ	ಕಂದಾಯ ಇಲಾಖೆಯ ನೆಮ್ಮದಿ ಕೇಂದ್ರಗಳು
ಬೇಲೂರು	51	21	4
ಆಲೂರು	9	11	3
ಹಾಸನ	17	21	4
ಸಕಲೇಶಪುರ	4	11	4
ಅರಸೀಕೆರೆ	13	22	4
ಚನ್ನರಾಯಪಟ್ಟಣ	22	22	5
ಹೊಳೆನರಸೀಪುರ	8	21	2
ಅರಕಲಗೂಡು	23	21	4
ಒಟ್ಟು	**147**	**150**	**30**

ಸಂಖ್ಯೆ: ಇಐನ್ 172 ಪಿಪಿಎಂ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2133
ಸದಸ್ಯರ ಹೆಸರು	:	ಶ್ರೀ ಪಿ.ರಾಜೀವ್ (ಕುಡಚಿ)
ಉತ್ತರಿಸಬೇಕಾದ ದಿನಾಂಕ	:	18-12-2018
ಉತ್ತರಿಸುವ ಸಚಿವರು	:	ಮುಖ್ಯಮಂತ್ರಿಯವರು

***

	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಒಟ್ಟು ಇರುವ ವಿದ್ಯುತ್ ಬೇಡಿಕೆ ಎಷ್ಟು; ಸದ್ಯಕ್ಕೆ ಎಷ್ಟು ಪ್ರಮಾಣದ ವಿದ್ಯುತ್‌ನ್ನು ಉತ್ಪಾದಿಸಲಾಗುತ್ತಿದೆ;	ನವೆಂಬರ್-2018ರ ಮಾಹೆಯಲ್ಲಿ ವಿವಿಧ ವಿದ್ಯುತ್ ಉತ್ಪಾದನಾ ಮೂಲಗಳಿಂದ ಲಭ್ಯವಾಗಿರುವ ದೈನಂದಿನ ಸರಾಸರಿ ವಿದ್ಯುತ್ ಪ್ರಮಾಣದ ವಿವರಗಳು ಕೆಳಕಂಡಂತ್ತಿದ್ದು, ಬೇಡಿಕೆ ಪ್ರಮಣದಷ್ಟು ವಿದ್ಯುತ್ತನ್ನು ಪೂರೈಸಲಾಗಿದೆ. (see table below)
ಆ)	ಯಾವ ಯಾವ ಘಟಕದಿಂದ ಎಷ್ಟೆಷ್ಟು ಪ್ರಮಾಣದ ವಿದ್ಯುತ್ ಉತ್ಪಾದಿಸಲಾಗುತ್ತಿದೆ;	
ಇ)	ಜಲ ವಿದ್ಯುತ್, ಶಾಖ ವಿದ್ಯುತ್ ಮತ್ತು ಸೋಲಾರ್ ವಿದ್ಯುತ್ ಎಷ್ಟು ಪ್ರಮಾಣದಲ್ಲಿ ಉತ್ಪಾದನೆಯಾಗುತ್ತಿದೆ;	

ಮೂಲ	ದೈನಂದಿನ ಸರಾಸರಿ ಲಭ್ಯತೆ (ಮಿಲಿಯನ್ ಯೂನಿಟ್‌ಗಳಲ್ಲಿ)
ಜಲ	33
ಶಾಖೋತ್ಪನ್ನ	36
ಕೇಂದ್ರೀಯ ಘಟಕಗಳಿಂದ ರಾಜ್ಯದ ಪಾಲು	64
ಸೌರ	25
ಪವನ	15
ಇತರೆ ನವೀಕೃತ ಮೂಲಗಳು ಮತ್ತು ಕ್ಯಾಪ್ಟೀವ್	11
ಬೃಹತ್ ಸ್ವತಂತ್ರ ಉತ್ಪಾದಕರು	18
ಖರೀದಿ (ಡಿವಿಸಿ)	6
ಒಟ್ಟು	**208**

	ಪ್ರಶ್ನೆ	ಉತ್ತರ
ಈ)	ಶಾಖ ವಿದ್ಯುತ್ ಉತ್ಪಾದನೆಯಲ್ಲಿ ಏರಿಳಿತ ಉಂಟಾಗಲು ಕಾರಣಗಳೇನು;	ಶಾಖೋತ್ಪನ್ನ ವಿದ್ಯುತ್ ಉತ್ಪಾದನೆಯಲ್ಲಿ ಏರಿಳಿತ ಉಂಟಾಗಲು ಕಾರಣಗಳು ಕೆಳಕಂಡಂತಿವೆ: 1. ಮಳೆಗಾಲದಲ್ಲಿ ವಿದ್ಯುತ್ ಬೇಡಿಕೆಯು ಕಡಿಮೆಯಿರುವುದರಿಂದ ಶಾಖೋತ್ಪನ್ನ ಘಟಕಗಳಿಂದ ವಿದ್ಯುತ್ ಉತ್ಪಾದನೆಯನ್ನು ಕಡಿಮೆ ಮಾಡಲಾಗುವುದು 2. ಕಲ್ಲಿದ್ದಲು ಕೊರತೆ ಇರುವುದು 3. 2017-18ನೇ ಸಾಲಿನಲ್ಲಿ ಬಳ್ಳಾರಿ ಕೇಂದ್ರಕ್ಕೆ ನೀರಿನ ಕೊರತೆಯಿತ್ತು 4. ತಾಂತ್ರಿಕ ಕಾರಣಗಳು 5. ರಾಯಚೂರು ಶಾಖೋತ್ಪನ್ನ ಕೇಂದ್ರದ ಕೆಲವು ಘಟಕಗಳು ಬಹಳ ಹಳೆಯದಾಗಿದ್ದು, ಸಣ್ಣ-ಪುಟ್ಟ ತಾಂತ್ರಿಕ ತೊಂದರೆಗಳಿಂದ ಆಗಾಗ್ಗೆ ವಿದ್ಯುತ್ ಉತ್ಪಾದನೆಯಲ್ಲಿ ಕುಂಠಿತವಾಗಿರುತ್ತದೆ.

ಉ)	ಬೇಡಿಕೆಯ ಪ್ರಮಾಣದ ಪೂರ್ಣ ವಿದ್ಯುತ್ ಉತ್ಪಾದಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ರಾಜ್ಯದಲ್ಲಿ ಪ್ರಸ್ತುತ ದಿನವಹಿ ಸರಾಸರಿ ವಿದ್ಯುತ್ ಬಳಕೆ ಪ್ರಮಾಣವು 208 ಮಿಲಿಯನ್ ಯೂನಿಟ್‌ಗಳಾಗಿದ್ದು, ಮುಂಬರುವ ಬೇಸಿಗೆ ಹಾಗೂ ಪರೀಕ್ಷಾ ಸಮಯದಲ್ಲಿ 238 ಮಿಲಿಯನ್ ಯೂನಿಟ್‌ಗಳಿಗೆ ಏರಿಕೆಯಾಗಬಹುದೆಂದು ಅಂದಾಜಿಸಲಾಗಿದೆ. ಕೇಂದ್ರ ಘಟಕಗಳಿಂದ ಮತ್ತು ರಾಜ್ಯದ ಆಂತರಿಕ ಮೂಲದ ವಿದ್ಯುತ್ ಘಟಕಗಳಿಂದ ಘೋಷಣೆಯಂತೆ ವಿದ್ಯುತ್ ಲಭ್ಯವಾದಲ್ಲಿ ಯಾವುದೇ ಕೊರತೆಯಿಲ್ಲದೆ ವಿದ್ಯುತ್ ಸರಬರಾಜು ಮಾಡಬಹುದಾಗಿದೆ.
ಊ)	ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಯಾವ ಯೋಜನೆಗಳನ್ನು ರೂಪಿಸಿಕೊಂಡಿದೆ?	1. 370 ಮೆಗಾವ್ಯಾಟ್ ಸಾಮರ್ಥ್ಯದ ಯಲಹಂಕ ಅನಿಲ ಆಧಾರಿತ ವಿದ್ಯುತ್ ಯೋಜನೆಯ ಅನುಷ್ಠಾನ. 2. 2000 ಮೆ.ವ್ಯಾ ಸಾಮರ್ಥ್ಯದ ಪಾವಗಡ ಸೌರ ಪಾರ್ಕಿನಲ್ಲಿ ಎನ್.ಟಿ.ಪಿ.ಸಿ ವತಿಯಿಂದ 600 ಮೆಗಾವ್ಯಾಟ್ ಸಾಮರ್ಥ್ಯದ ಯೋಜನೆಗಳು ಈಗಾಗಲೇ ಅನುಷ್ಠಾನಗೊಂಡಿದ್ದು, ಕ್ರೆಡಲ್ ವತಿಯಿಂದ 1200 ಮೆಗಾವ್ಯಾಟ್ ಸಾಮರ್ಥ್ಯದ ಸೌರ ಯೋಜನೆಗಳನ್ನು ಅನುಷ್ಠಾನಗೊಳಿಸಲು ಟೆಂಡರ್ ಮುಖಾಂತರ ಹಂಚಿಕೆ ನೀಡಿದ್ದು, ಕಾಮಗಾರಿ ಪ್ರಗತಿಯಲ್ಲಿದೆ. ಬಾಕಿ ಉಳಿದ 200 ಮೆಗಾವ್ಯಾಟ್ ಸಾಮರ್ಥ್ಯವನ್ನು ಎಸ್.ಇ.ಸಿ.ಐ ವತಿಯಿಂದ ಅನುಷ್ಠಾನಗೊಳಿಸಲಾಗುತ್ತಿದ್ದು, ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ. 3. ಪಾವಗಡ ಸೌರ ಪಾರ್ಕಿನಲ್ಲಿ ಕ್ರೆಡಲ್ ಮುಖಾಂತರ 50 ಮೆಗಾವ್ಯಾಟ್ ಸಾಮರ್ಥ್ಯದ ಸೌರ ಯೋಜನೆಗಳನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. 4. 43 ತಾಲ್ಲೂಕುಗಳಲ್ಲಿ ತಲಾ 20 ಮೆಗಾವ್ಯಾಟ್‌ಗಳಂತೆ ಒಟ್ಟು 860 ಮೆಗಾವ್ಯಾಟ್ ಸಾಮರ್ಥ್ಯದ ಯೋಜನೆಗಳಡಿ 840 ಮೆಗಾವ್ಯಾಟ್ ಸಾಮರ್ಥ್ಯಕ್ಕೆ ಕ್ರೆಡಲ್ ನಿಂದ ಹಂಚಿಕೆ ನೀಡಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದೆ.

ಸಂಖ್ಯೆ: ಇಎನ್ 170 ಪಿಪಿಎಂ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2136
ಸದಸ್ಯರ ಹೆಸರು : ಶ್ರೀ. ಪ್ರೀತಮ್ ಜೆ.ಗೌಡ (ಹಾಸನ)
ಉತ್ತರಿಸಬೇಕಾದ ದಿನಾಂಕ : 18-12-2018
ಉತ್ತರಿಸುವ ಸಚಿವರು : ಮುಖ್ಯಮಂತ್ರಿಯವರು

***

	ಪ್ರಶ್ನೆ	ಉತ್ತರ
ಅ)	ಹಾಸನ ಜಿಲ್ಲೆಗೆ "ಸೋಲಾರ್ ರೂಫ್ ಟಾಪ್" ಯೋಜನೆಯು ಜಾರಿಗೆ ಬಂದಿದೆಯೇ; ಬಂದಿದ್ದಲ್ಲಿ, ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಮಂಜೂರಾದ ಯೋಜನೆಗಳಾವುವು; (ಜಿಲ್ಲಾವಾರು ಮಾಹಿತಿ ನೀಡುವುದು);	ಸೌರ ನೀತಿ 2014-21 ಹಾಗೂ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು(ಕೆ.ಇ.ಆರ್.ಸಿ.) ಕಾಲ ಕಾಲಕ್ಕೆ ನಿಗಧಿಪಡಿಸುವ ನಿಯಮಾವಳಿ/ಮಾನದಂಡಗಳನ್ವಯ ರಾಜ್ಯದ ಎಲ್ಲಾ ಭಾಗಗಳ ಗ್ರಾಹಕರು ತಮ್ಮ ಕಟ್ಟಡಗಳ ಮೇಲ್ಛಾವಣಿಯಲ್ಲಿ ಸೌರ ಘಟಕಗಳನ್ನು ಅಳವಡಿಸಿಕೊಳ್ಳಬಹುದಾಗಿದೆ.
ಆ)	ಬೇಸಿಗೆ ಕಾಲದಲ್ಲಿ ಹಾಸನ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ವಿದ್ಯುತ್ ಸಮಸ್ಯೆಯನ್ನು ಬಗೆಹರಿಸಲು ಸೋಲಾರೀಕರಣಗೊಳಿಸಲು ಸರ್ಕಾರಿ ಕಛೇರಿ, ಶಾಲಾ ಕಾಲೇಜುಗಳಲ್ಲಿ ಹಾಗೂ ಇತರೆ ಸ್ಥಳಗಳಲ್ಲಿ "ಸೋಲಾರ್ ರೂಫ್ ಟಾಪ್" ಅಳವಡಿಸಲು ಸರ್ಕಾರ ಯಾವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ (ವಿವರ ನೀಡುವುದು);	ಕೇಂದ್ರ ಸರ್ಕಾರದ 13ನೇ ಹಣಕಾಸು ಆಯೋಗದಡಿ ನವೀಕರಿಸಬಹುದಾದ ಇಂಧನ ಅಭಿವೃದ್ಧಿಗಾಗಿ ನೀಡಿರುವ ಪ್ರೋತ್ಸಾಹಕ ಅನುದಾನದಲ್ಲಿ ಹಾಸನ ಜಿಲ್ಲಾ ವ್ಯಾಪ್ತಿಯಲ್ಲಿ ಆಯ್ದ 150 ಸರ್ಕಾರಿ ಕಛೇರಿ ಕಟ್ಟಡಗಳ ಸ್ಥಾವರಗಳ ಮೇಲೆ ಹಾಗೂ ಸೆಸ್ಕ್ ಕಂಪನಿಯ ವ್ಯಾಪ್ತಿಯಲ್ಲಿ ಒಟ್ಟಾರೆ 580 ಸರ್ಕಾರಿ ಕಛೇರಿ ಕಟ್ಟಡಗಳ ಮೇಲೆ ಸೌರಶಕ್ತಿ ಮೇಲ್ಛಾವಣಿ ಘಟಕಗಳನ್ನು ಅಳವಡಿಸಲಾಗಿರುತ್ತದೆ. ನಗರ ಪ್ರದೇಶಗಳಲ್ಲಿ ಕೇಂದ್ರ ಸರ್ಕಾರದ ಸಮಗ್ರ ವಿದ್ಯುತ್ ಅಭಿವೃದ್ಧಿ ಯೋಜನೆಯಡಿ (ಐ.ಪಿ.ಡಿ.ಎಸ್) ಹಾಸನ ಜಿಲ್ಲಾ ವ್ಯಾಪ್ತಿಯಲ್ಲಿ ಆಯ್ದ 147 ಸಂಖ್ಯೆಯ ಸರ್ಕಾರಿ ಕಛೇರಿ ಕಟ್ಟಡಗಳ ಮೇಲೆ ಹಾಗೂ ಸೆಸ್ಕ್ ಕಂಪನಿಯ ವ್ಯಾಪ್ತಿಯಲ್ಲಿ ಒಟ್ಟಾರೆ 343 ಸಂಖ್ಯೆಯ ಸರ್ಕಾರಿ ಕಛೇರಿ ಕಟ್ಟಡಗಳ ಮೇಲೆ ಸೌರಶಕ್ತಿ ಮೇಲ್ಛಾವಣಿ ಘಟಕಗಳನ್ನು ಅಳವಡಿಸಲಾಗಿರುತ್ತದೆ. ಕ್ರೆಡಲ್ ವತಿಯಿಂದ ಕಂದಾಯ ಇಲಾಖೆಯ 30 ಸಂಖ್ಯೆಯ ನೆಮ್ಮದಿ ಕೇಂದ್ರಗಳಿಗೆ ಪ್ರತಿ ಕೇಂದ್ರಕ್ಕೆ 2ಕಿ.ವ್ಯಾ. ರಂತೆ ಒಟ್ಟು 60 ಕಿ.ವ್ಯಾ. ಸಾಮರ್ಥ್ಯದ ಸೌರ ಮೇಲ್ಛಾವಣಿ ಘಟಕಗಳನ್ನು ಸ್ಥಾಪಿಸಲಾಗಿದೆ.
ಇ)	"ಸೋಲಾರ್ ರೂಫ್ ಟಾಪ್" ಯೋಜನೆಯಲ್ಲಿರುವ ಮಾನದಂಡಗಳೇನು; ಈ ಯೋಜನೆಯಿಂದ ಹಾಸನ ಜಿಲ್ಲೆಗೆ ಯಾವ ರೀತಿಯ ಸೌಲಭ್ಯಗಳು ಒದಗಿಸಲಾಗುವುದು (ಸಂಪೂರ್ಣ ಮಾಹಿತಿ ನೀಡುವುದು)?	ಸೌರ ಮೇಲ್ಛಾವಣಿ ಘಟಕಗಳಿಗೆ ಕೆ.ಇ.ಆರ್.ಸಿ.ರವರು ಕಾಲ ಕಾಲಕ್ಕೆ ನಿಗಧಿಪಡಿಸುವ ನಿಯಮಾವಳಿ, ಮಾನದಂಡ ಮತ್ತು ದರಗಳನ್ವಯ ರಾಜ್ಯದ ಎಲ್ಲಾ ಭಾಗಗಳ ಗ್ರಾಹಕರು ತಮ್ಮ ಕಟ್ಟಡಗಳ ಮೇಲ್ಛಾವಣಿಯಲ್ಲಿ ಸೌರ ಘಟಕಗಳನ್ನು ಅಳವಡಿಸಿಕೊಳ್ಳಬಹುದಾಗಿದೆ. • ಸೌರಶಕ್ತಿ ಘಟಕದ ಸಾಮರ್ಥ್ಯವು ವಿದ್ಯುತ್ ಮಂಜೂರಾತಿ (Sanctioned Load) ಹೊರೆಯ ಸಾಮರ್ಥ್ಯದ ಮಿತಿಗೆ ಒಳಪಟ್ಟಿರುತ್ತದೆ. (SRTPV proposed capacity = Sanctioned Load).

		• ಗೃಹಬಳಕೆ, ಹಾಸ್ಪಿಟಲ್ಸ್ ಮತ್ತು ಶೈಕ್ಷಣಿಕ ಸಂಸ್ಥೆಗಳು, ಹೆಚ್.ಟಿ(4), ಹೆಚ್.ಟಿ–2(ಸಿ), ಎಲ್.ಟಿ–2(ಎ) ಮತ್ತು ಎಲ್.ಟಿ–2(ಬಿ) ಗಳಿಗೆ ಒಟ್ಟು ಮಾಪನ ವ್ಯವಸ್ಥೆ(Gross metering) ಅಥವಾ ನಿವ್ವಳ ಮಾಪನ ವ್ಯವಸ್ಥೆ(Net metering) ಆಯ್ಕೆ ಮಾಡಿಕೊಳ್ಳುವ ಅವಕಾಶವಿದ್ದು, ಇತರೆ ಉಳಿದ ಸ್ಥಾವರಗಳಿಗೆ Net metering ಮಾತ್ರ ಅಳವಡಿಸಿಕೊಳ್ಳುವ ಅವಕಾಶವಿರುತ್ತದೆ. • 1.0ರಿಂದ 5.0 ಕಿ.ವ್ಯಾವರೆಗೆ ಸಿಂಗಲ್ ಫೇಸ್‌ನಲ್ಲಿ, 5.0 ಕಿ.ವ್ಯಾ ನಿಂದ 50 ಕಿ.ವ್ಯಾ ವರೆಗೆ 3 ಫೇಸ್‌ನಲ್ಲಿ ಹಾಗೂ 50 ಕಿ.ವ್ಯಾಗಿಂತ ಮೇಲಿನ 1000 ಕಿ.ವ್ಯಾವರೆಗಿನ ಘಟಕಗಳನ್ನು 11 ಕೆ.ವಿ ಹೆಚ್.ಟಿ ಮಾರ್ಗದಡಿಯಲ್ಲಿ ವಿಸಕಂಗಳ ಗ್ರಿಡ್‌ಗೆ ಸಂಪರ್ಕ ಕಲ್ಪಿಸಬೇಕಿದ್ದು, ಘಟಕಕ್ಕೆ ಅಗತ್ಯವಾದ ಆರ್ಥಿಕ, ತಾಂತ್ರಿಕ ಅಗತ್ಯತೆಗಳನ್ನು ಅರ್ಜಿದಾರರೇ ಕೈಗೊಳ್ಳಬೇಕಿರುತ್ತದೆ. 500 ಕಿ.ವ್ಯಾಗಿಂತ ಹೆಚ್ಚಿನ ಸಾಮರ್ಥ್ಯದ ಘಟಕಗಳ ವಿದ್ಯುತ್ ಖರೀದಿ ಒಪ್ಪಂದಗಳಿಗೆ ಕೆ.ಇ.ಆರ್.ಸಿ. ಯಿಂದ ಅನುಮೋದನೆಯನ್ನು ಪಡೆಯಬೇಕಿರುತ್ತದೆ. • ಗ್ರಾಹಕರು ಉತ್ಪಾದಿಸುವ ಸೌರಶಕ್ತಿ ವಿದ್ಯುತ್ ಉತ್ಪಾದನೆಯು ತಾವು ಗ್ರಿಡ್‌ನಿಂದ ಪಡೆದ ವಿದ್ಯುಚ್ಛಕ್ತಿಗಿಂತ ಹೆಚ್ಚುವರಿಯಾಗಿದ್ದು ನಿವ್ವಳ ಮಾಪನ ಆಧಾರದ ಮೇಲೆ ವಿದ್ಯುತ್ ಸರಬರಾಜು ಕಂಪನಿಗಳ ಗ್ರಿಡ್‌ಗೆ ಪೂರೈಸಿದ್ದಲ್ಲಿ, ಕೆ.ಇ.ಆರ್.ಸಿ. ಯು ದಿನಾಂಕ :18.05.2018ರಿಂದ ಈ ಕೆಳಕಂಡಂತೆ ದರ ನಿಗಧಿಪಡಿಸಿರುತ್ತದೆ : ದರಗಳು ರೂ/ಯೂನಿಟ್‌ಗೆ : ರೂ. 3.56/– (ಸಬ್ಸಿಡಿ ರಹಿತ) ರೂ. 2.67/– (ಸಬ್ಸಿಡಿ ಸಹಿತ) • ಸೌರ ಶಕ್ತಿ ಮೇಲ್ಛಾವಣಿ ಘಟಕಗಳಿಗೆ ರಾಜ್ಯ ಸರ್ಕಾರದ ವತಿಯಿಂದ ಯಾವುದೇ ಪ್ರೋತ್ಸಾಹ ಧನ ನೀಡುತ್ತಿಲ್ಲ. ಕೇಂದ್ರ ಸರ್ಕಾರದ ಎಂ.ಎನ್.ಆರ್.ಇ ವತಿಯಿಂದ ಬೆಂಚ್‌ಮಾರ್ಕ್ ದರದ ಮೇಲೆ ಶೇ.30ರವರೆಗೆ ಸಬ್ಸಿಡಿಯನ್ನು ಗೃಹಬಳಕೆ, ಹಾಸ್ಪಿಟಲ್ಸ್ ಮತ್ತು ಶೈಕ್ಷಣಿಕ ಸಂಸ್ಥೆಗಳು ಅಳವಡಿಸುವ ಸೌರ ಶಕ್ತಿ ಮೇಲ್ಛಾವಣಿ ಘಟಕಗಳಿಗೆ ನೀಡುತ್ತಿದ್ದು, ಗ್ರಾಹಕರು ಇದಕ್ಕಾಗಿ ಎಂ.ಎನ್.ಆರ್.ಇ ನಿಂದ ಅನುಮೋದಿತ ಚಾನಲ್ ಪಾರ್ಟನರ್ಸ್‌ಗಳಿಂದ ಘಟಕವನ್ನು ಅಳವಡಿಸಿಕೊಳ್ಳಲು ಕ್ರಮವಹಿಸಿ ಪಡೆದುಕೊಳ್ಳಬಹುದಾಗಿದೆ. • ಗೃಹ ಸಾಲ/ಗೃಹ ನವೀಕರಣ ಸಾಲ ಪಡೆಯುವ ಗ್ರಾಹಕರಿಗೆ ಸೌರ ಮೇಲ್ಛಾವಣಿ ಘಟಕಗಳನ್ನು ಅಳವಡಿಸಿಕೊಳ್ಳಲು ಪ್ರೋತ್ಸಾಹಿಸಿ ಅದಕ್ಕೆ ತಗಲುವ ವೆಚ್ಚವನ್ನು ಗೃಹ ಸಾಲದಡಿಯಲ್ಲಿ ಪಡೆಯಲು ಎಂ.ಎನ್.ಆರ್.ಇ. ವತಿಯಿಂದ ಸಾರ್ವಜನಿಕ ವಲಯದ ಬ್ಯಾಂಕುಗಳಿಗೆ ನಿರ್ದೇಶನ ನೀಡಲಾಗಿರುತ್ತದೆ.

ಸಂಖ್ಯೆ: ಇಎನ್ 171 ಪಿಪಿಎಂ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2056
ಸದಸ್ಯರ ಹೆಸರು	:	ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ (ಇಂಡಿ)
ಉತ್ತರಿಸಬೇಕಾದ ದಿನಾಂಕ	:	18-12-2018
ಉತ್ತರಿಸುವ ಸಚಿವರು	:	ಮುಖ್ಯಮಂತ್ರಿಯವರು

***

<table>
<tr><th colspan="2">ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಭವಿಷ್ಯದಲ್ಲಿ ಉದ್ಭವಿಸಬಹುದಾದ ವಿದ್ಯುತ್ ಕೊರತೆಯನ್ನು ನೀಗಿಸುವ ನಿಟ್ಟಿನಲ್ಲಿ ಸರ್ಕಾರ ಸೌರ ವಿದ್ಯುತ್ ಯೋಜನೆಗಳು ಸೇರಿದಂತೆ ಅಸಾಂಪ್ರದಾಯಿಕ ಇಂಧನಗಳ ಬಳಕೆಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ಕೈಗೊಂಡಿರುವ ಕ್ರಮಗಳೇನು; (ಸಮಗ್ರ ವಿವರ ನೀಡುವುದು)</td><td>
ಭವಿಷ್ಯದಲ್ಲಿ ಉದ್ಭವಿಸಬಹುದಾದ ವಿದ್ಯುತ್ ಕೊರತೆಯನ್ನು ನೀಗಿಸುವ ನಿಟ್ಟಿನಲ್ಲಿ ಸೌರ ವಿದ್ಯುತ್ ಯೋಜನೆಗಳು ಸೇರಿದಂತೆ ಅಸಾಂಪ್ರದಾಯಿಕ ಇಂಧನಗಳ ಬಳಕೆಯನ್ನು ಉತ್ತೇಜಿಸಲು ಹಾಗೂ ಮುಂದಿನ ದಿನಗಳಲ್ಲಿ ಹೆಚ್ಚಾಗಲಿರುವ ವಿದ್ಯುತ್ ಬೇಡಿಕೆಯನ್ನು ಪೂರೈಸಲು ಸೌರ ಮತ್ತು ನವೀಕೃತ ಇಂಧನ ಮೂಲಗಳ ವಿದ್ಯುತ್ ಘಟಕಗಳ ಸ್ಥಾಪನೆಗೆ ಹೆಚ್ಚು ಪ್ರೋತ್ಸಾಹ ನೀಡಲಾಗುತ್ತಿದೆ. ಈವರೆವಿಗೂ ಸೌರ ಮತ್ತು ಅಸಂಪ್ರದಾಯಿಕ ಇಂಧನ ಮೂಲಗಳಿಂದ ಹಂಚಿಕೆಯಾಗಿರುವ ಹಾಗೂ ಅನುಷ್ಠಾನಗೊಂಡಿರುವ ಯೋಜನೆಗಳ ವಿವರಗಳು ಕೆಳಕಂಡಂತಿವೆ:
<table>
<tr><th>ಮೂಲ</th><th>ಹಂಚಿಕೆ ಸಾಮರ್ಥ್ಯ (ಮೆಗಾವ್ಯಾಟ್‌ಗಳಲ್ಲಿ)</th><th>ಅನುಷ್ಠಾನ ಸಾಮರ್ಥ್ಯ (ಮೆಗಾವ್ಯಾಟ್‌ಗಳಲ್ಲಿ)</th></tr>
<tr><td>ಪವನ</td><td>18103</td><td>4738</td></tr>
<tr><td>ಸೌರ</td><td>9145</td><td>5266</td></tr>
<tr><td>ಕಿರುಜಲ</td><td>3011</td><td>853</td></tr>
<tr><td>ಸಹ ವಿದ್ಯುತ್</td><td>2178</td><td>1673</td></tr>
<tr><td>ಜೈವಿಕ</td><td>391</td><td>134</td></tr>
<tr><td>ತ್ಯಾಜ್ಯ ಮೂಲದಿಂದ ವಿದ್ಯುತ್ ಉತ್ಪಾದನೆ</td><td>26</td><td>0</td></tr>
<tr><td>ಒಟ್ಟು</td><td>32854</td><td>12664</td></tr>
</table>
ಪ್ರಸ್ತುತ ಅನುಷ್ಠಾನ ಹಂತದಲ್ಲಿರುವ ಸೌರ ಯೋಜನೆಗಳು ಕೆಳಕಂಡಂತಿವೆ:

2000 ಮೆಗಾವ್ಯಾಟ್ ಸಾಮರ್ಥ್ಯದ ಪಾವಗಡ ಸೌರ ಪಾರ್ಕಿನಲ್ಲಿ ಎನ್.ಟಿ.ಪಿ.ಸಿ ವತಿಯಿಂದ 600 ಮೆಗಾವ್ಯಾಟ್ ಸಾಮರ್ಥ್ಯದ ಯೋಜನೆಗಳು ಈಗಾಗಲೇ ಅನುಷ್ಠಾನಗೊಂಡಿದ್ದು, ಕ್ರೆಡಲ್ ವತಿಯಿಂದ 1200 ಮೆಗಾವ್ಯಾಟ್ ಸಾಮರ್ಥ್ಯದ ಸೌರ ಯೋಜನೆಗಳನ್ನು ಅನುಷ್ಠಾನಗೊಳಿಸಲು ಟೆಂಡರ್ ಮುಖಾಂತರ ಹಂಚಿಕೆ ನೀಡಿದ್ದು, ಕಾಮಗಾರಿ ಪ್ರಗತಿಯಲ್ಲಿದೆ. ಬಾಕಿ ಉಳಿದ 200 ಮೆಗಾವ್ಯಾಟ್ ಸಾಮರ್ಥ್ಯವನ್ನು ಎಸ್.ಇ.ಸಿ.ಐ ವತಿಯಿಂದ ಅನುಷ್ಠಾನಗೊಳಿಸಲಾಗುತ್ತಿದ್ದು, ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ.
ಪಾವಗಡ ಸೌರ ಪಾರ್ಕಿನಲ್ಲಿ ಕ್ರೆಡಲ್ ಮುಖಾಂತರ 50 ಮೆಗಾವ್ಯಾಟ್ ಸಾಮರ್ಥ್ಯದ ಸೌರ ಯೋಜನೆಗಳನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
43 ತಾಲ್ಲೂಕುಗಳಲ್ಲಿ ತಲಾ 20 ಮೆಗಾವ್ಯಾಟ್‌ಗಳಂತೆ ಒಟ್ಟು 860 ಮೆಗಾವ್ಯಾಟ್ ಸಾಮರ್ಥ್ಯದ ಯೋಜನೆಗಳಡಿ 840 ಮೆಗಾವ್ಯಾಟ್ ಸಾಮರ್ಥ್ಯಕ್ಕೆ ಕ್ರೆಡಲ್ ನಿಂದ ಹಂಚಿಕೆ ನೀಡಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದೆ.

</td></tr>
</table>

ಆ) ರಾಜ್ಯಕ್ಕೆ ಪ್ರಸಕ್ತ ವರ್ಷದಲ್ಲಿ ಪ್ರತಿನಿತ್ಯ ಸರಾಸರಿ ಅಗತ್ಯವಿರುವ ವಿದ್ಯುತ್ ಪ್ರಮಾಣವೆಷ್ಟು; ಜಲ ಮೂಲವೂ ಸೇರಿದಂತೆ ವಿವಿಧ ಮೂಲಗಳಿಂದ ನಿತ್ಯವೂ ಉತ್ಪಾದನೆಯಾಗುವ ಒಟ್ಟು ವಿದ್ಯುತ್ ಪ್ರಮಾಣವೆಷ್ಟು; 2016-17 ರಿಂದ 2018-19 ರ ಅಕ್ಟೋಬರ್ ಅಂತ್ಯದವರೆಗೆ ಉತ್ಪಾದನೆಯಾದ ವಿದ್ಯುತ್‌ನ ಪ್ರಮಾಣವೆಷ್ಟು; (ಯೋಜನಾವಾರು, ಪ್ರತಿ ತಿಂಗಳುವಾರು ವಿವರಗಳನ್ನು ನೀಡುವುದು)

ವಿದ್ಯುತ್ ಬೇಡಿಕೆ ಪ್ರಮಾಣವು ಋತುಮಾನಕ್ಕೆ ತಕ್ಕಂತೆ ಏರಿಳಿತವಾಗುತ್ತಿರುತ್ತದೆ. ಬೇಸಿಗೆ ಕಾಲದಲ್ಲಿ ಅಧಿಕ ವಿದ್ಯುತ್ ಬೇಡಿಕೆಯಿದ್ದು, ಮಳೆಗಾಲದಲ್ಲಿ ಸ್ವಲ್ಪ ಕಡಿಮೆಯಾಗಿ, ಚಳಿಗಾಲದಲ್ಲಿ ಮಧ್ಯಮ ಪ್ರಮಾಣದ ಬೇಡಿಕೆಯಿದ್ದು, ಪ್ರಸಕ್ತ ಸಾಲಿನಲ್ಲಿ ಬೇಡಿಕೆ ಪ್ರಮಾಣದಷ್ಟು ವಿದ್ಯುತ್ತನ್ನು ಪೂರೈಸಲಾಗುತ್ತಿದೆ.

2018-19 ನೇ ಸಾಲಿನ ನವೆಂಬರ್ ಮಾಹೆಯ ದೈನಂದಿನ ಸರಾಸರಿ ವಿದ್ಯುತ್ ಬೇಡಿಕೆ ಪ್ರಮಾಣವು 208 ಮಿಲಿಯನ್ ಯೂನಿಟ್‌ಗಳಾಗಿದ್ದು, ಬೇಡಿಕೆ ಪ್ರಮಾಣದಷ್ಟು ವಿದ್ಯುತ್ತನ್ನು ಪೂರೈಸಲಾಗಿದೆ. ಮೂಲವಾರು ವಿವರಗಳು ಕೆಳಕಂಡಂತಿವೆ.

ಮೂಲ	**ನವೆಂಬರ್-2018 ರಲ್ಲಿ ಲಭ್ಯವಾಗಿರುವ ದೈನಂದಿನ ಸರಾಸರಿ ವಿದ್ಯುತ್ ಪ್ರಮಾಣ (ಮಿಲಿಯನ್ ಯೂನಿಟ್‌ಗಳಲ್ಲಿ)**
ಜಲ	33
ಶಾಖೋತ್ಪನ್ನ	36
ಕೇಂದ್ರೀಯ ಘಟಕಗಳಿಂದ ರಾಜ್ಯದ ಪಾಲು	64
ನವೀಕೃತ ಇಂಧನ ಮೂಲಗಳು ಮತ್ತು ಕ್ಯಾಪ್ಟೀವ್	51
ಬೃಹತ್ ಸ್ವತಂತ್ರ ಉತ್ಪಾದಕರು	18
ಖರೀದಿ (ಡಿವಿಸಿ)	6
ಒಟ್ಟು	**208**

2016-17 ನೇ ಸಾಲಿನಿಂದ 2018-19 ನೇ ಸಾಲಿನ ಅಕ್ಟೋಬರ್ ಮಾಹೆಯವರೆಗೆ ವಿವಿಧ ಮೂಲಗಳಿಂದ ಲಭ್ಯವಾಗಿರುವ ವಿದ್ಯುತ್ ಪ್ರಮಾಣದ ವಿವರಗಳನ್ನು **ಅನುಬಂಧದಲ್ಲಿ** ನೀಡಿದೆ.

ಇ) ಸದರಿ ಅವಧಿಯಲ್ಲಿ ವಿದ್ಯುತ್ ಕೊರತೆಯನ್ನು ನೀಗಿಸುವ ನಿಟ್ಟಿನಲ್ಲಿ ಸರ್ಕಾರ ಬೇರೆ ರಾಜ್ಯಗಳಿಂದ ವಿದ್ಯುತ್ ಖರೀದಿಸಿದ್ದರೆ, ಖರೀದಿಸಿದ ಒಟ್ಟು ಯೂನಿಟ್ ಎಷ್ಟು? (ವಿವರ ನೀಡುವುದು)

ವಿಷಯ: 3	ರಾಜ್ಯದಲ್ಲಿನ ಒಟ್ಟು 30 ಜಿಲ್ಲೆಗಳ ವ್ಯಾಪ್ತಿಯಲ್ಲಿ 5766 ಗ್ರಾಮ ಪಂಚಾಯಿತಿ ಗ್ರಂಥಾಲಯಗಳು 127 ಅಲೆಮಾರಿ ಸಮುದಾಯ ಗ್ರಂಥಾಲಯಗಳು ಹಾಗೂ 100 ಕೊಳಚೆ ಪ್ರದೇಶ ಗ್ರಂಥಾಲಯಗಳು ಗ್ರಾಮೀಣ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಇಲ್ಲಿನ ಗ್ರಾಮ ಪಂಚಾಯಿತಿ ಕಾರ್ಯಾಲಯಗಳು 05 ವರ್ಷಗಳಿಂದ ಬಾಕಿ ಉಳಿಸಿಕೊಂಡಿದ್ದು, ದಿನಾಂಕ: 31-03-2017ರ ಅಂತ್ಯಕ್ಕೆ ಒಟ್ಟು ಮೊತ್ತರೂ. 73,69,24,105/- (ಎಪ್ಪತ್ತ ಮೂರು ಕೋಟಿ ಅರವತ್ತೊಂಭತ್ತು ಲಕ್ಷದ ಇಪ್ಪತ್ತಾಲ್ಕು ಸಾವಿರ ಒಂದು ನೂರಾಐದು) ಬಾಕಿ ಉಳಿಸಿಕೊಂಡಿರುತ್ತದೆ. (ವಿವರ ಅನುಬಂಧ-2ರಲ್ಲಿ ಜಿಲ್ಲಾವಾರು ಕ್ರೂಢೀಕೃತ ಮಾಹಿತಿಯನ್ನು ಲಗತ್ತಿಸಿದೆ)
ನಿರ್ಣಯ:	ಗ್ರಾಮ ಪಂಚಾಯಿತಿಗಳಿಂದ ಬಾಕಿ ಇರುವ ಗ್ರಂಥಾಲಯ ಕರದ ವಿವರವನ್ನು ಪರಿಶೀಲಿಸಿ ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಮೇಲ್ವಿಚಾಕರಿಗೆ ಸರ್ಕಾರದಿಂದ ನೀಡಲಾಗುತ್ತಿರುವ ಗೌರವಧನದ ವಾರ್ಷಿಕ ವೆಚ್ಚವು ರೂ. 48.44 ಕೋಟಿ ವೆಚ್ಚವಾಗುತ್ತಿರುವುದನ್ನು ಪರಿಶೀಲಿಸಲಾಯಿತು. ಸದರಿ ಗ್ರಂಥಾಲಯಗಳನ್ನು ಮೇಲ್ವಿಚಾರಕರ ಸಮೇತ ಗ್ರಾಮ ಪಂಚಾಯಿತಿಗಳಿಗೆ ವಹಿಸಿ ಕ್ರಮಜರುಗಿಸಲು ಸಚಿವ ಸಂಪುಟ ಅನುಮೋದನೆಗಾಗಿ ಕ್ರಮ ವಹಿಸುವಂತೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ರವರಿಗೆ ಸಭೆಯಲ್ಲಿ ಸೂಚಿಸಿ ತೀರ್ಮಾನಿಸಲಾಯಿತು.
ನಿರ್ಣಯ:	ವಿವಿಧ ಸ್ಥಳೀಯ ಸಂಸ್ಥೆಗಳು ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಬಾಕಿ ಉಳಿಸಿಕೊಂಡಿರುವ ಗ್ರಂಥಾಲಯ ಕರದ ಕುರಿತಂತೆ ಚುಕ್ಕೆ ಗುರುತಿನ/ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಭರವಸೆ ಸಮಿತಿ ಸಭೆಯಲ್ಲಿ ಸರ್ಕಾರವು ತೆಗೆದುಕೊಂಡಿರುವ ನಿರ್ಣಯದಂತೆ ಕ್ರಮ ವಹಿಸುವಂತೆ ಸಭೆಯಲ್ಲಿ ಸೂಚಿಸಿ ನಿರ್ಣಯಿಸಲಾಯಿತು.
ವಿಷಯ: 4	ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ವಿವಿಧ ಸ್ಥಳೀಯ ಸಂಸ್ಥೆಗಳಿಂದ ಬಾಕಿ ಉಳಿಸಿಕೊಂಡಿರುವ ಗ್ರಂಥಾಲಯ ಕರವನ್ನು ESCROW ಖಾತೆ ತೆರೆದು ಪಾವತಿಸಲು ಕ್ರಮ ಕೈಗೊಳ್ಳುವ ಕುರಿತು ಸಲ್ಲಿಸಲಾದ ಏಕ ಕಡತದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಬಾಕಿ ಇರುವ ಗ್ರಂಥಾಲಯ ಕರವನ್ನು ESCROW ಖಾತೆ ಮುಖಾಂತರ ಪಾವತಿಸಲು ಸೂಕ್ತ ಆದೇಶ ಹೊರಡಿಸುವಂತೆ ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ರವರಿಗೆ ಸೂಚಿಸಿರುತ್ತಾರೆ. ಆದರೆ, ಸದರಿ ESCROW ಖಾತೆ ತೆರೆಯುವ ಕುರಿತು ಸರ್ಕಾರದ ಆದೇಶ ಹೊರಡಿಸುವ ಬಗ್ಗೆ ಚರ್ಚಿಸುವುದು. (ಪ್ರತಿ ಲಗತ್ತಿಸಿದೆ)
ನಿರ್ಣಯ:	ವಿವಿಧ ಸ್ಥಳೀಯ ಸಂಸ್ಥೆಗಳಿಂದ ಬಾಕಿ ಉಳಿಸಿಕೊಂಡಿರುವ ಗ್ರಂಥಾಲಯ ಕರವನ್ನು ESCROW ಖಾತೆ ತೆರೆದು ಇ.ಸಿ.ಎಸ್. ಮುಖಾಂತರ ಇಲಾಖೆಗೆ ಪಾವತಿಸಲು ಸೂಕ್ತ ಆದೇಶ ಹೊರಡಿಸುವಂತೆ ತೀರ್ಮಾನಿಸಲಾಯಿತು.

ವಿಷಯ: 5	ಗ್ರಂಥಾಲಯ ಕರವನ್ನು ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಗ್ರಂಥಾಲಯಲ್ಲಿನ ಕಾಯಿದೆ 1965 ಪ್ರಕರಣ 30 ರಲ್ಲಿನ ಅವಕಾಶದಂತೆ ಸ್ಥಳೀಯ ಸಂಸ್ಥೆಗಳು ನಿಗದಿತವಾಗಿ ಬಿಡುಗಡೆ ಮಾಡದಿದ್ದಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಆರ್ಥಿಕ ಇಲಾಖೆಯಿಂದ ಬಿಡುಗಡೆ ಮಾಡುವ ಎಸ್.ಎಫ್.ಸಿ. ಅನುದಾನದಿಂದ ಸಂಬಂಧಿಸಿದ ಮೊತ್ತ ಕಡಿತಗೊಳಿಸಿ ಆಯಾ ಜಿಲ್ಲಾ/ನಗರ ಗ್ರಂಥಾಲಯ ಪ್ರಾಧಿಕಾರಕ್ಕೆ ನೇರವಾಗಿ ಬಿಡುಗಡೆ ಮಾಡಲು ಕಾಯಿದೆಗೆ ತಿದ್ದುಪಡಿ ತರಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು ಈ ಬಗ್ಗೆ ಚರ್ಚಿಸುವ ಕುರಿತು.
ನಿರ್ಣಯ:	ಗ್ರಂಥಾಲಯ ಕರವನ್ನು ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ನಿಗದಿತವಾಗಿ ಬಿಡುಗಡೆ ಮಾಡಲು ಗ್ರಂಥಾಲಯಲ್ಲಿನ ಕಾಯಿದೆ 1965 ಪ್ರಕರಣ 30ಕ್ಕೆ ತಿದ್ದುಪಡಿ ತರಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾದಂತೆ ಕಾನೂನು ಮತ್ತು ಸಂಸದೀಯ ವ್ಯವಹಾರ ಇವರ ಅಭಿಪ್ರಾಯದೊಂದಿಗೆ ಸಚಿವ ಸಂಪುಟದ ಅನುಮೋದನೆಗಾಗಿ ಸಲ್ಲಿಸಲು ಕ್ರಮ ಜರುಗಿಸುವಂತೆ ಸಭೆಯಲ್ಲಿ ನಿರ್ಣಯಿಸಲಾಯಿತು.

(ತ.ಮ. ವಿಜಯ್ ಭಾಸ್ಕರ್)
ಮುಖ್ಯ ಕಾರ್ಯದರ್ಶಿಗಳು,
ಕರ್ನಾಟಕ ಸರ್ಕಾರ,
ಬೆಂಗಳೂರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: : 2069
ಸದಸ್ಯರ ಹೆಸರು : ಡಾ: ಕೆ. ಶ್ರೀನಿವಾಸಮೂರ್ತಿ(ನೆಲಮಂಗಲ)
ಉತ್ತರಿಸುವ ದಿನಾಂಕ : 18.12.2018.
ಉತ್ತರಿಸುವ ಸಚಿವರು : ಮುಖ್ಯಮಂತ್ರಿಗಳು.

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ನೆಲಮಂಗಲ ವಿಧಾನಸಭಾ ಕ್ಷೇತ್ರ ಪುರಸಭೆ ವ್ಯಾಪ್ತಿಯಲ್ಲಿನ ಗ್ರಂಥಾಲಯ ಸಮರ್ಪಕವಾದ ಕಟ್ಟಡ ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ)	ಹಾಗಿದ್ದಲ್ಲಿ, ಈವರೆಗೆ ಈ ಕಟ್ಟಡ ನಿರ್ಮಾಣ ಮಾಡದೇ ಇರುವುದಕ್ಕೆ ಕಾರಣ ಏನು; ಸಾರ್ವಜನಿಕರ ಉಪಯೋಗದ ಬಹು ಮುಖ್ಯವಾದ ಈ ಗ್ರಂಥಾಲಯ ಸರಿಯಾದ ರೀತಿಯಲ್ಲಿ ನಡೆಯದೇ ಸಾರ್ವಜನಿಕರಿಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸದರಿ ಕಟ್ಟಡ ನಿರ್ಮಿಸಲು ಪುರಸಭೆಯವರು ನೀಡಿದ ನಿವೇಶನದ ಅಳತೆಗನುಸಾರ ಚೆಕ್‌ಬಂದಿ ಗುರುತಿಸಿ ಇಲಾಖೆಗೆ ನೀಡಿಲ್ಲದ ಕಾರಣ ಕಟ್ಟಡ ಕಾಮಗಾರಿ ಪ್ರಾರಂಭಿಸಲಾಗಿಲ್ಲ. ಸುಸಜ್ಜಿತ ಕಟ್ಟಡ ಇಲ್ಲದೆ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.
ಇ)	ಈ ನೂತನ ಕಟ್ಟಡ ನಿರ್ಮಾಣ ಮಾಡಲು ಸರ್ಕಾರ ಈವರೆಗೂ ಅನುದಾನ ಬಿಡುಗಡೆಗೊಳಿಸದಿರಲು ಕಾರಣವೇನು; (ವಿವರ ನೀಡುವುದು)	ಪುರಸಭೆಯವರು ನೀಡಿದ ನಿವೇಶನದ ಅಳತೆಗನುಸಾರ ಚೆಕ್‌ಬಂದಿ ಗುರುತಿಸಿ ಇಲಾಖೆಗೆ ನೀಡಿಲ್ಲದ ಕಾರಣ ಕಟ್ಟಡ ಕಾಮಗಾರಿಗೆ ಅನುದಾನ ಬಿಡುಗಡೆಗೊಳಿಸಿರುವುದಿಲ್ಲ.
ಈ)	ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು;	ಸರಕಾರವು ನೂತನ ಕಟ್ಟಡ ನಿರ್ಮಿಸಲು ರೂ:46.90 ಲಕ್ಷದ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿದ್ದು ಸಂಪೂರ್ಣ ಅನುದಾನವನ್ನು ಗ್ರಂಥಾಲಯ ಪ್ರಾಧಿಕಾರ ನಿಧಿಯಿಂದ ಭರಿಸಲಾಗುತ್ತಿದ್ದು ಸದ್ಯ ರೂ:20.00 ಲಕ್ಷಗಳನ್ನು ಕಾಮಗಾರಿಗೆ ಕಾಯ್ದಿರಿಸಲಾಗಿದೆ.
ಉ)	ಈ ಗ್ರಂಥಾಲಯ ನಿರ್ಮಾಣ ಮಾಡಿಕೊಡಲು ಸರ್ಕಾರದಿಂದ ಎಷ್ಟು ಅನುದಾನ ಬಿಡುಗಡೆ ಮಾಡಲಾಗುವುದು;	
ಊ)	ಈಗಾಗಲೇ ಅನುದಾನ ಬಿಡುಗಡೆ ಮಾಡಿದ್ದಲ್ಲಿ, ಬಿಡುಗಡೆಗೊಳಿಸಿರುವ ಅನುದಾನ ಎಷ್ಟು; ನೂತನ ಕಟ್ಟಡ ನಿರ್ಮಾಣಕ್ಕೆ ಆಗಿರುವ ಅನಾನುಕೂಲಗಳೇನು? (ವಿವರ ನೀಡುವುದು)	ಪ್ರಸ್ತಾಪಿತ ಗ್ರಂಥಾಲಯ ಕಟ್ಟಡ ನಿರ್ಮಾಣ ಕಾಮಗಾರಿಗೆ ಗ್ರಂಥಾಲಯ ಪ್ರಾಧಿಕಾರ ನಿಧಿಯಿಂದ ರೂ:20.00 ಲಕ್ಷಗಳನ್ನು ಅನುದಾನ ಕಾಯ್ದಿರಿಸಿದೆ. ಸದರಿ ನಿವೇಶನದಲ್ಲಿ ಗ್ರಂಥಾಲಯ ಕಟ್ಟಡವನ್ನು ನಿರ್ಮಾಣ ಮಾಡಲು ಪುರಸಭೆ ವತಿಯಿಂದ ನಿವೇಶನದ ಅಳತೆಗನುಸಾರವಾಗಿ ಚೆಕ್‌ಬಂದಿಯನ್ನು ಗುರುತಿಸಿ ಇಲಾಖೆಗೆ ನೀಡದೆ ಇರುವುದರಿಂದ ಅನಾನುಕೂಲ ವಾಗಿದೆ.

ಸಂಖ್ಯೆ: ಇಡಿ 179 ಎಲ್‌ಐಬಿ 2018)

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: : 1538

ಸದಸ್ಯರ ಹೆಸರು : ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ(ಶಿರಸಿ)

ಉತ್ತರಿಸುವ ದಿನಾಂಕ : 18.12.2018.

ಉತ್ತರಿಸುವ ಸಚಿವರು : ಮುಖ್ಯಮಂತ್ರಿಗಳು.

<table>
<tr><th>ಕ್ರಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದ ಸ್ಥಳೀಯ ಸಂಸ್ಥೆಗಳಿಂದ ಬರಬೇಕಾದ ಗ್ರಂಥಾಲಯ ಕರ ಎಷ್ಟು; (ಗ್ರಂಥಾಲಯ ಕರದ ಬೇಡಿಕೆ, ಸಂಗ್ರಹ ಹಾಗೂ ಇದರ ಬಾಕಿ ಮೊತ್ತದ ಮಾಹಿತಿಗಳನ್ನು ಒದಗಿಸುವುದು);</td><td>ರಾಜ್ಯದಲ್ಲಿನ ಸ್ಥಳೀಯ ಸಂಸ್ಥೆಗಳಿಂದ ಬರಬೇಕಾದ ಬಾಕಿ ಗ್ರಂಥಾಲಯ ಕರ ರೂ. 429,96,18,705=00 ಗ್ರಂಥಾಲಯ ಕರದ ಬೇಡಿಕೆ, ಸಂಗ್ರಹ ಹಾಗೂ ಇದರ ಬಾಕಿ ಮೊತ್ತದ ವಿವರ ಈ ಕೆಳಗಿನಂತಿದೆ.
<table>
<tr><th>ಸಂ</th><th>ವಿವರ</th><th>ಮೊತ್ತ ರೂ. ಲಕ್ಷಗಳಲ್ಲಿ</th></tr>
<tr><td>1.</td><td>ಹಿಂದಿನ ಬಾಕಿಯು ಸೇರಿದಂತೆ ದಿ: 31-03-2018ರ ಅಂತ್ಯಕ್ಕೆ ಒಟ್ಟಾರೆ ಬೇಡಿಕೆ ಗ್ರಂಥಾಲಯ ಕರದ ಮೊತ್ತ</td><td>61467.15</td></tr>
<tr><td>2.</td><td>ಕಳೆದ ಮೂರು ವರ್ಷಗಳಲ್ಲಿ ಪಾವತಿಸಿದ ಮೊತ್ತ (2015-16 ರಿಂದ 2017-18) ವಾದ ಗ್ರಂಥಾಲಯ ಕರದ ಮೊತ್ತ</td><td>18470.96</td></tr>
<tr><td>3.</td><td>ದಿ: 31-3-2018ರ ಅಂತ್ಯಕ್ಕೆ ಬಾಕಿ ಗ್ರಂಥಾಲಯ ಕರದ ಮೊತ್ತ</td><td>42996.19</td></tr>
</table>
</td></tr>
<tr><td>ಆ)</td><td>ಈ ರೀತಿಯ ಗ್ರಂಥಾಲಯ ಕರ ಸಂಗ್ರಹವನ್ನು ರಾಜ್ಯದ ಯಾವ ಯಾವ ಸ್ಥಳೀಯ ಸಂಸ್ಥೆಗಳ ಮೂಲಕ ಸಂಗ್ರಹಿಸಲಾಗುತ್ತದೆ;</td><td>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ಹಾಗೂ ರಾಜ್ಯದ ಎಲ್ಲಾ ಮಹಾನಗರ ಪಾಲಿಕೆಗಳು, ನಗರಸಭೆಗಳು, ಪುರಸಭೆಗಳು, ಪಟ್ಟಣ ಪಂಚಾಯತಿಗಳು ಹಾಗೂ ಗ್ರಾಮ ಪಂಚಾಯತಿಗಳಿಂದ ಗ್ರಂಥಾಲಯ ಕರ ಸಂಗ್ರಹಿಸಲಾಗುತ್ತಿದೆ.</td></tr>
</table>

ಇ)	ಸದರಿ ಕರ ಸಂಗ್ರಹವು ಸಮರ್ಪಕವಾಗಿ ಆಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದಕ್ಕೆ ಕಾರಣಗಳೇನು;	ಹೌದು. ನಿಯಮಿತವಾಗಿ ಆಯಾ ಸ್ಥಳೀಯ ಸಂಸ್ಥೆಗಳು ಬಾಕಿ ಇರುವ ಗ್ರಂಥಾಲಯ ಕರ ಪಾವತಿಸಿರುವುದಿಲ್ಲ.
ಈ)	ಗ್ರಂಥಾಲಯ ಕರ ಸಂಗ್ರಹಕ್ಕೆ ಹಾಗೂ ಅದರ ಉದ್ದೇಶಕ್ಕೆ ಪಾವತಿಯಾಗಿರುವ ಹಣ ಎಷ್ಟು; ಪಾವತಿಯಾಗದಿದ್ದಲ್ಲಿ ಕಾರಣಗಳೇನು; ಈ ಬಾಕಿ ಮೊತ್ತವನ್ನು ಯಾವಾಗ ಈ ಉದ್ದೇಶಕ್ಕಾಗಿ ನೀಡಲಾಗುತ್ತದೆ (ವಿವರಗಳನ್ನು ಒದಗಿಸುವುದು)?	ಗ್ರಂಥಾಲಯ ಕರ ಸಂಗ್ರಹಕ್ಕಾಗಿ ಕರ್ನಾಟಕ ಸರ್ಕಾರದ ಸಾರ್ವಜನಿಕ ಗ್ರಂಥಾಲಯ ಕಾಯ್ದೆ ಪ್ರಕರಣ 30(1) ರನುಸಾರ ಸ್ಥಳೀಯ ಸಂಸ್ಥೆಗಳು ಸಾರ್ವಜನಿಕ ಆಸ್ತಿ ಪಾಸ್ತಿಗಳಿಂದ ಸಂಗ್ರಹಿಸುವ ತೆರಿಗೆಯಲ್ಲಿ ಶೇ.6 ರಂತೆ ಗ್ರಂಥಾಲಯ ಕರವನ್ನು ಆಕರಿಸಲಾಗುತ್ತಿದೆ. ಹೀಗೆ ಆಕರಿಸಲಾದ ಗ್ರಂಥಾಲಯ ತೆರಿಗೆಯ ಒಟ್ಟು ಮೊತ್ತಕ್ಕೆ ಶೇ.10 ರಂತೆ ಸಂಗ್ರಹಣಾ ವೆಚ್ಚವನ್ನು ಸ್ಥಳೀಯ ಸಂಸ್ಥೆಗಳು ಕಟಾವಣೆ ಮಾಡಿಕೊಂಡು ಉಳಿದ ಮೊತ್ತವನ್ನು ಗ್ರಂಥಾಲಯ ಇಲಾಖೆಗೆ ಪಾವತಿಸಬೇಕಾಗಿರುತ್ತದೆ.

ಸಂಖ್ಯೆ: ಇಡಿ 178 ಎಲ್‌ಐಬಿ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

1.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:		1267
2.	ಸದಸ್ಯರ ಹೆಸರು	:	ಶ್ರೀ ದೊಡ್ಡಗೌಡರ ಮಹಾಂತೇಶ ಬಸವಂತರಾಯ (ಕಿತ್ತೂರು)
3.	ಉತ್ತರಿಸಬೇಕಾದ ದಿನಾಂಕ	:	18-12-2018
4.	ಉತ್ತರಿಸುವ ಸಚಿವರು	:	ಮಾನ್ಯ ಮುಖ್ಯಮಂತ್ರಿಯವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	2018-19ರ ಆಯವ್ಯಯದಲ್ಲಿ ಇಲಾಖಾವಾರು ನಿಗದಿ ಮಾಡಿದ ಅನುದಾನವೆಷ್ಟು;	ಅನುಬಂಧ- 1 ರಲ್ಲಿ ನೀಡಲಾಗಿದೆ ಆರ್ಥಿಕ ಪ್ರತ್ಯಾಯೋಜನೆಯನ್ವಯ ಸರ್ಕಾರದ ವಿವಿಧ ಹಂತಗಳಲ್ಲಿ ಅನುದಾನ ಬಿಡುಗಡೆಗೆ ಆದೇಶವನ್ನು ಹೊರಡಿಸಲಾಗುವುದರಿಂದ, ಬಿಡುಗಡೆಯಾಗುವ ಹಣ ಒಂದೇ ಕಡೆ ಕ್ರೋಢೀಕೃತವಾಗುತ್ತಿಲ್ಲ. ಆದುದರಿಂದ ಪ್ರತಿ ಇಲಾಖೆಗೆ ಬಿಡುಗಡೆಯಾಗಿರುವ ಹಣದ ಬಗ್ಗೆ ಆರ್ಥಿಕ ಇಲಾಖೆಯಲ್ಲಿ ಮಾಹಿತಿ ಲಭ್ಯವಿರುವುದಿಲ್ಲ.
ಆ)	31-10-2018ರ ಒಳಗಾಗಿ ಇಲಾಖಾವಾರು ಬಿಡುಗಡೆ ಮಾಡಿದ ಅನುದಾನವೆಷ್ಟು ಹಾಗೂ ಇಲಾಖಾವಾರು ಖರ್ಚು ಮಾಡಿದ ಅನುದಾನವೆಷ್ಟು (ಇಲಾಖಾವಾರು ವಿವರ ನೀಡುವುದು);	

ಸಂಖ್ಯೆ: ಎಫ್‌ಡಿ 94 ಬಿಜಿಎಲ್ 2018

(ಹೆಚ್.ಡಿ.ಕುಮಾರಸ್ವಾಮಿ)

ಮುಖ್ಯಮಂತ್ರಿ

	ಅನುಬಂಧ-1		
			(ರೂ.ಕೋಟಿಗಳಲ್ಲಿ)
	ಇಲಾಖಾವಾರು ವಿವರ	**2018-19 ನೇ** ಜುಲೈಆಯವ್ಯಯ ಅಂದಾಜಿನಲ್ಲಿ ನಿಗದಿಪಡಿಸಿರುವ ಅನುದಾನ	ಅಕ್ಟೊಬರ್-2018ರ ಅಂತ್ಯಕ್ಕೆ ಮಹಾಲೇಖಪಾಲರ ಲೆಕ್ಕ
01	ಕೃಷಿ ಮತ್ತು ತೋಟಗಾರಿಕೆ	7578.91	2309.12
02	ಪಶುಸಂಗೋಪನೆ ಮತ್ತು ಮೀನುಗಾರಿಕೆ	2578.59	1592.67
03	ಆರ್ಥಿಕ	27920.61	8863.42
04	ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ	1245.23	642.89
05	ಒಳಾಡಳಿತ ಮತ್ತು ಸಾರಿಗೆ	7380.75	3670.01
06	ಮೂಲಭೂತ ಸೌಕರ್ಯ ಅಭಿವೃದ್ಧಿ	100.64	158.66
07	ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತಿ ರಾಜ್	13934.31	7069.85
08	ಅರಣ್ಯ, ಜೀವಿ ಶಾಸ್ತ್ರ ಮತ್ತು ಪರಿಸರ	1710.02	646.55
09	ಸಹಕಾರ	5805.90	3204.78
10	ಸಮಾಜ ಕಲ್ಯಾಣ	11607.08	4736.56
11	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ	5716.31	2514.63
12	ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳು	1177.27	241.70
13	ಆಹಾರ ಮತ್ತು ನಾಗರೀಕ ಸರಬರಾಜು	3865.57	1518.24
14	ಕಂದಾಯ	6659.00	2945.72
15	ಮಾಹಿತಿ ತಂತ್ರಜ್ಞಾನ	252.96	111.46
16	ವಸತಿ	3591.38	1476.69
17	ಶಿಕ್ಷಣ	26000.83	19238.14
18	ವಾಣಿಜ್ಯ ಮತ್ತು ಕೈಗಾರಿಕೆ	2280.77	645.21
19	ನಗರಾಭಿವೃದ್ಧಿ	12904.48	5180.62
20	ಲೋಕೋಪಯೋಗಿ	8976.60	2675.90
21	ಜಲ ಸಂಪನ್ಮೂಲ	14524.02	5732.98
22	ಆರೋಗ್ಯ ಮತ್ತು ಕುಟುಂಬ ಕಲ್ಯಾಣ	9299.37	4898.64
23	ಕಾರ್ಮಿಕ ಮತ್ತು ಕೌಶಲ್ಯ ಅಭಿವೃದ್ಧಿ	1260.31	414.24
24	ಇಂಧನ	10719.23	5464.93
25	ಕನ್ನಡ ಮತ್ತು ಸಂಸ್ಕೃತಿ	340.66	79.43
26	ಯೋಜನೆ, ಸಾಂಖ್ಯಿಕ, ವಿಜ್ಞಾನ ಮತ್ತು ತಂತ್ರಜ್ಞಾನ	1754.23	400.65
27	ಕಾನೂನು	1429.16	1061.22
28	ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ	179.51	65.90
29	ಋಣ ಮೇಲುಸ್ತುವಾರಿ	27694.42	8795.50
	ಒಟ್ಟು	**218488.12**	**96356.30**

ದಿನಾಂಕ 94 ಡಿಸೆಂಬರ್ 2018

[signature]

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1275

ಮಾನ್ಯ ಸದಸ್ಯರ ಹೆಸರು : ಶ್ರೀ ಬಸವರಾಜ ಎಸ್.ಬೊಮ್ಮಾಯಿ (ಶಿಗ್ಗಾಂವ್)

ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಗಳು

ಉತ್ತರಿಸಬೇಕಾದ ದಿನಾಂಕ : 18.12.2018

ಕ್ರ.ಸಂ.	ಪ್ರಶ್ನೆ	ಉತ್ತರ
(ಅ)	ರಾಜ್ಯ ಸರ್ಕಾರಿ ನೌಕರರಿಗೆ ರಾಷ್ಟ್ರೀಯ ಉಳಿತಾಯ ಯೋಜನೆ (ಎನ್.ಪಿ.ಎಸ್.)ಯನ್ನು ಜಾರಿಗೆ ತಂದ ಉದ್ದೇಶವೇನು; ಯೋಜನೆ ಜಾರಿಗೆ ಬಂದಿದ್ದು ಯಾವಾಗ;	ದಿನಾಂಕ:01-4-2006ಕ್ಕಿಂತ ಮುಂಚಿತವಾಗಿ ಜಾರಿಯಲ್ಲಿದ್ದ ನಿಶ್ಚಿತ ಪಿಂಚಣಿ ಯೋಜನೆಗೆ ಸಂಬಂಧಿಸಿದಂತೆ ಆರ್ಥಿಕ ಹೊರೆಯನ್ನು ನಿಭಾಯಿಸಲು ಸಾಕಷ್ಟು ನಿಧಿಯ (Asset) ಆಧಾರ ಇಲ್ಲದೇ ಇರುವ ಕಾರಣ ಹಾಗೂ ಪಿಂಚಣಿ ಪಾವತಿಯ ಆರ್ಥಿಕ ಹೊರೆ ವರ್ಷದಿಂದ ವರ್ಷಕ್ಕೆ ಏರಿಕೆ ಆಗುತ್ತಿದ್ದ ಕಾರಣ ರಿಸರ್ವ್ ಬ್ಯಾಂಕ್ ರಚಿಸಿದ ಸಮಿತಿಯ ವರದಿಯ ಶಿಫಾರಸ್ಸಿನ ಆಧಾರದ ಮೇಲೆ ಕೇಂದ್ರ ಸರ್ಕಾರವು ದಿನಾಂಕ:01-01-2004 ರಿಂದ ನೂತನ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಿರುತ್ತದೆ. ಅದರಂತೆ ರಾಜ್ಯ ಸರ್ಕಾರವೂ ಸಹ ಆದೇಶ ಸಂಖ್ಯೆ: ಎಫ್‌ಡಿ(ಎಸ್‌ಪಿಎಲ್) 04 ಪಿಇಟಿ 2005, ದಿನಾಂಕ: 31-03-2006ರನ್ವಯ ಈ ಯೋಜನೆಯನ್ನು ದಿನಾಂಕ:01-4-2006 ರಿಂದ ಜಾರಿಗೊಳಿಸಿದೆ.
(ಆ)	ಈ ಯೋಜನೆ ಜಾರಿಯಿಂದ ನೌಕರರಿಗೆ ಆಗುವ ಸಾಧಕ-ಬಾಧಕಗಳ ಕುರಿತು ಅಧ್ಯಯನ ನಡೆಸಲಾಗಿದೆಯೇ; (ವಿವರಗಳನ್ನು ನೀಡುವುದು)	
(ಇ)	ಯೋಜನೆ ಜಾರಿಗೆ ಬಂದಾಗಿನಿಂದ ಈವರೆಗೆ ನೌಕರರಿಂದ ಸಂಗ್ರಹವಾಗಿರುವ ಒಟ್ಟು ಮೊತ್ತ ಎಷ್ಟು; ಈ ಹಣಕ್ಕೆ ನೌಕರರಿಗೆ ನೀಡುವ ಬಡ್ಡಿ ದರ ಎಷ್ಟು; (ಕಳೆದ 3 ವರ್ಷಗಳ ವಿವರ ನೀಡುವುದು)	ಅಕ್ಟೋಬರ್-2018ರ ಅಂತ್ಯಕ್ಕೆ ಎನ್.ಪಿ.ಎಸ್. ನೌಕರರ ವಂತಿಗೆ ಮೊತ್ತ ರೂ. 2761,97,21,834/- ನೌಕರರ ವಂತಿಗೆಯ ಮೇಲೆ ನೀಡುವ ಬಡ್ಡಿ ದರವನ್ನು ಪಿ.ಎಫ್.ಆರ್.ಡಿ.ಎ. ಅಧಿನಿಯಮದಡಿ, ಎನ್.ಪಿ.ಎಸ್. ಟ್ರಸ್ಟ್ ಮತ್ತು ಪಿ.ಎಫ್.ಆರ್.ಡಿ.ಎ.ಗಳು ಹೊರಡಿಸುವ ಮಾರ್ಗಸೂಚಿಗಳ ಪ್ರಕಾರ ನಿರ್ಧರಿಸಲಾಗುವುದು.
(ಈ)	ಸಂಗ್ರಹವಾಗಿರುವ ಹಣವನ್ನು ಯಾವ ರೀತಿ ವಿನಿಯೋಗಿಸಿಕೊಳ್ಳಲಾಗುತ್ತಿದೆ; ನೌಕರರ ಹಣಕ್ಕೆ ಭದ್ರತೆ ನೀಡುವವರು ಯಾರು; ಯಾವ ರೀತಿ ಭದ್ರತೆ ನೀಡಲಾಗುತ್ತದೆ;	ಎನ್.ಪಿ.ಎಸ್. ನೌಕರರ ವೇತನದಿಂದ ಕಟಾವಣೆಯಾಗುವ ಮೊತ್ತವು (ಮೂಲವೇತನ+ ತುಟ್ಟಿಭತ್ಯೆಯ ಶೇ.10% ರಷ್ಟು) ಖಜಾನೆಯ ಮುಖಾಂತರ ಅಖಂ ರವರಲ್ಲಿ ನಿರ್ವಹಿಸುತ್ತಿರುವ ಪ್ರಾನ್‌ಖಾತೆಗೆ ಜಮೆ ಮಾಡಲಾಗುತ್ತದೆ. ತದನಂತರ ಎನ್.ಪಿ.ಎಸ್. ಮೊತ್ತವನ್ನು PFRDA ರವರಿಂದ ನೇಮಕಗೊಂಡಿರುವ PFM's (Pension Fund Manager) ಗಳಿಗೆ PFRDA ರವರ

		ಮಾರ್ಗದರ್ಶನದನ್ವಯ ಈ ಕೆಳಕಂಡಂತೆ ಹೂಡಿಕೆ ಮಾಡಲಾಗುತ್ತದೆ. Scheme Details / Percentage Scheme 1 — SBI PENSION FUND SCHEME - STATE GOVT — 33.50% Scheme 2 — UTI RETIREMENT SOLUTIONS PENSION FUND SCHEME- STATE GOVT — 34.00% Scheme 3 — LIC PENSION FUND SCHEME - STATE GOVT — 32.50% ಕೇಂದ್ರ ಸರ್ಕಾರದಿಂದ ಸ್ಥಾಪಿತವಾಗಿರುವ PFRDA ರವರು ಎನ್.ಪಿ.ಎಸ್. ಯೋಜನೆಯಲ್ಲಿ ಹೂಡಿಕೆ ಮಾಡಿರುವ ಮೊತ್ತಕ್ಕೆ ಭದ್ರತೆ ನೀಡುತ್ತಾರೆ. ಎನ್.ಪಿ.ಎಸ್. ಟ್ರಸ್ಟ್ ಮತ್ತು Pension Fund Manager ಗಳ ನಡುವಿನ ಒಪ್ಪಂದದಲ್ಲಿ Pension Fund Manager ಗಳಿಗೆ ಹೂಡಿಕೆಯ ಮೇಲೆ ಸೂಕ್ತ (ಹೆಚ್ಚಿನ) ಲಾಭ ನೀಡುವಂತೆ ಷರತ್ತು ವಿಧಿಸಿದ್ದು, Pension Fund Manager ಗಳು ಷರತ್ತಿಗೆ ಬದ್ಧರಾಗಿರಬೇಕಿರುತ್ತದೆ.
(ಉ)	ಎನ್.ಪಿ.ಎಸ್. ರದ್ದುಪಡಿಸುವಂತೆ ಸರ್ಕಾರಿ ನೌಕರರು ಒತ್ತಾಯಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಎನ್.ಪಿ.ಎಸ್. ರದ್ದುಪಡಿಸುವ ಕುರಿತು ಸರ್ಕಾರದ ನಿಲುವೇನು?	ಸರ್ಕಾರದ ಗಮನಕ್ಕೆ ಬಂದಿದೆ. ನೂತನ ಪಿಂಚಣಿ ಯೋಜನೆಗೆ ಸೂಕ್ತ ಬದಲಾವಣೆ/ಮಾರ್ಪಾಡು ಮಾಡಲು ಸರ್ಕಾರವು ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಸರ್ಕಾರಿ ಆದೇಶ ಸಂಖ್ಯೆ:ಆಇ 107 ಪಿಇಎನ್ 2018, ದಿನಾಂಕ:11.12.2018ರಲ್ಲಿ ಅಧಿಕಾರಿಗಳ ಸಮಿತಿಯನ್ನು ರಚಿಸಿದೆ. ಅಧಿಕಾರಿಗಳ ಸಮಿತಿ ವರದಿ ನೀಡಿದ ನಂತರ ಪರಿಶೀಲಿಸಿ ತೀರ್ಮಾನ ತೆಗೆದುಕೊಳ್ಳಲಾಗುವುದು.

ಸಂಖ್ಯೆ:ಆಇ(ವಿ) 103 ಪಿಇಎನ್ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ		2133
ಮಾನ್ಯ ಸದಸ್ಯರ ಹೆಸರು	:	ಶ್ರೀ ಡಿ.ವೇದವ್ಯಾಸ ಕಾಮತ್ (ಮಂಗಳೂರು ನಗರ ದಕ್ಷಿಣ)
ಉತ್ತರಿಸುವ ಸಚಿವರು	:	ಮಾನ್ಯ ಮುಖ್ಯಮಂತ್ರಿಗಳು
ಉತ್ತರಿಸಬೇಕಾದ ದಿನಾಂಕ	:	18.12.2018

ಕ್ರ.ಸಂ.	ಪ್ರಶ್ನೆ	ಉತ್ತರ
(ಅ)	ದಿನಾಂಕ:01/04/2006 ರಿಂದ ನೇಮಕಾತಿ ಹೊಂದಿದ ಸರ್ಕಾರಿ ಸಿಬ್ಬಂದಿಗಳ ನೂತನ ಪಿಂಚಣಿ ಯೋಜನೆಯನ್ನು ರದ್ದುಪಡಿಸಿ, ಹಳೆ ಪಿಂಚಣಿ ಯೋಜನೆಯನ್ನು ಮುಂದುವರೆಸಲು ರಾಜ್ಯದಾದ್ಯಂತ ಪ್ರತಿಭಟನೆ ಹಾಗೂ ಮನವಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ
(ಆ)	ನೂತನ ಪಿಂಚಣಿ ಯೋಜನೆಗೆ ಒಳಪಡುವ ಇಲಾಖಾವಾರು ನೌಕರರ ಮಾಹಿತಿ ನೀಡುವುದು;	ಅನುಬಂಧದಲ್ಲಿ ಲಗತ್ತಿಸಿದೆ
(ಇ)	ಹಾಗಿದ್ದಲ್ಲಿ, ಈ ಸರ್ಕಾರಿ ನೌಕರರನ್ನು ಹಿಂದಿನ ಪಿಂಚಣಿ ಯೋಜನೆಗೆ ಒಳಪಡಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?	ನೂತನ ಪಿಂಚಣಿ ಯೋಜನೆಗೆ ಸೂಕ್ತ ಬದಲಾವಣೆ/ ಮಾರ್ಪಾಡು ಮಾಡಲು ಸರ್ಕಾರವು ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಸರ್ಕಾರಿ ಆದೇಶ ಸಂಖ್ಯೆ:ಆಇ 107 ಪಿಇಎನ್ 2018, ದಿನಾಂಕ: 11.12.2018ರಲ್ಲಿ ಅಧಿಕಾರಿಗಳ ಸಮಿತಿಯನ್ನು ರಚಿಸಿದೆ. ಅಧಿಕಾರಿಗಳ ಸಮಿತಿಯು ನೀಡುವ ವರದಿಯನ್ನು ಪರಿಶೀಲಿಸಿ ತೀರ್ಮಾನ ತೆಗೆದುಕೊಳ್ಳಲಾಗುವುದು.

ಸಂಖ್ಯೆ:ಆಇ(ವಿ) 104 ಪಿಇಎನ್ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ

ಅನುಬಂಧ

Department wise Employee list

1	ADVOCATE GENERAL	101
2	AGRICULTURE	1945
3	ANIMAL HUSBANDARY & VET SERVICESE	2899
4	JUDICIAL	10117
5	Archaeology Museums & Heritage	50
6	ADMINISTRTIVE TRAINING INSTITUTE	68
7	KARNATAKA STATE ARCHIVES	9
8	BACKWARD CLASSES AND MINORITIES	203
9	BACKWARD CLASSES WELFARE DEPARTMENT	121
10	CO OPARATIVE SOCITIES	650
11	COMPOSIT EDUCATION	70
12	CONSUMER DESPUTE REDRESSAL COMMISSION	89
13	CADA	12
14	COMMERCIAL TAXES	1046
15	DPAR(ACCOUNTS)	1403
16	DRUGS CONTROLLER	261
17	STATE EDUCATION RESEARCH & TRAINING	201
18	WELFARE OF DISABLED	33
19	PUBLIC INSTRUCTIONS	852
20	COLLIGIATE EDUCATION	5767
21	ELECTION COMMISSION	110
22	RELIGIOUS & CHARITABLE ENDOWMENTS	55
23	PRIMARY EDUCATION	12961
24	SECONDARY EDUCATION	44222
25	TECHNICAL EDUCATION	2333
26	VOCATIONAL EDUCATION	51
27	EXCISE	1197
28	EMPLOYMENT AND TRAINING	939
29	FACTORIES & BOILERS	200
30	FOOD CIVIL SUPPLY & CONSUMER AFFAIRS	167
31	FISHERIES	341
32	FOREST	5307
33	Fiscal Policy Institute	4
34	FIRE &EMERGENCY SERVICE	2941
35	HEALTH & FAMILY WELFARE	8289
36	KARNATAKA GUEST HOUSE	27
37	KARNATAKA GAZETTEER	4
38	HOME GUARDS	50
39	HORTICULTURE	12955
40	KARNATAKA HUMAN RIGHTS COMMISSION	8
41	KARNATAKA HEALTH SCHEME DEVELOPMENT PROJECT	36
42	INDUSTRIES & COMMERCE	164
43	INFORMATION	84
44	IRRIGATION	503
45	ISIS MEDICAL SERVICE	286
46	INFORMATION TECHNOLOGY	2
47	KARNATAKA INDUSTRIAL TRIBUNAL	6
48	KARNATAKA ADMINISTRATIVE TRIBUNAL	75
49	KARNATAKA BHAVAN	28
50	KANNADA AND CULTURE	24
51	KARNATAKA GOVT INSURANCE DEPARTMENT	298
52	KARNATAKA APPELLATE TRIBUNAL	33
53	KARNATAKA LEGISLATIVE ASSEMBLY	428
54	LABOUR	110
55	LEGISLATIVE COUNCIL	83
56	PUBLIC LIBRARIES	496

57	LEGAL METROLOGY	74
58	LOKAYUKTHA	340
59	SURVEY SETTLEMENT AND LAND RECORDS	3259
60	MEDICAL EDUCATION	159
61	MINES & GEOLOGY	52
62	MINORITIES	830
63	MINOR IRRIGATION	490
64	MASS EDUCATION	4
65	MUNCIPAL ADMINISTRATION	88
66	TRANSPORT	496
67	NATIONAL CADET CORPS	161
68	KARNATAKA PUBLIC SERVICE COMMISSION	99
69	PANCHAYAT RAJ ENG DEPT	251
70	RURAL DRINKING AND SANITATION	571
71	PROSECUTION & GOVT. LITIGATIONS	422
72	POLICE	42968
73	PRISONS	910
74	PRINTING STATIONERY & PUBLICATIONS	173
75	PORTS & INLAND WATER TRANSPORT	28
76	PREUNIVERSITY EDUCATION	3953
77	PUBLIC WORKS DEPARTMENT	1887
78	SOCIAL WELFAE (TP)	563
79	AYUSH	603
80	SECRETARY TO GOVERNOR, RAJBHAVAN	43
81	REVENUE	9473
82	STATE ACCOUNTS	471
83	STATE ELECTION COMMISSION	9
84	State Disaster Responce Force	30
85	SERICULTURE	323
86	CANE DEVELOPMENT	2
87	SECRETARIAT TRAINING INSTITUTE	8
88	SILK INDUSTRIES CELL	5
89	SAINIK WELFARE	52
90	STAMPS AND REGISTRATION	305
91	SMALL SAVINGS & STATE LOTTARIES	85
92	ECONOMICS & STATISTICS	343
93	SOCIAL WELFARE DEPARTMENT	1379
94	YOUTH SERVICES & SPORTS	53
95	TREASURIES	883
96	TRANSLATIONS	37
97	TOWN & COUNTRY PLANNNING	232
98	TRANSPORT APPELLATE TRIBUNAL	6
99	TOURISM	27
100	TRIBAL WELFARE DEPARTMENT	99
101	TEXTILES	755
102	BANGALORE METROPOLITAN TASK FORCE	8
103	VIGILANCE	6
104	WATERSHED DEVELOPMENT	54
105	WOMEN & CHILD DEVELOPMENT	870
106	ZILLA PANCHAYATH	510
107	TALUK PANCHAYATH	11494
108	PAPULATION CENTRE	3
	Total	206660

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2155

ಸದಸ್ಯರ ಹೆಸರು: ಶ್ರೀ ಎಸ್.ಆರ್. ವಿಶ್ವನಾಥ್, (ಯಲಹಂಕ ವಿಧಾನಸಭಾ ಕ್ಷೇತ್ರ)

ಉತ್ತರಿಸಬೇಕಾದವರು: ಮುಖ್ಯಮಂತ್ರಿಯವರು

ಉತ್ತರಿಸಬೇಕಾದ ದಿನಾಂಕ: 18-12-2018

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಯಲಹಂಕ ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ಕಳೆದ 3 ವರ್ಷಗಳಿಂದ ಬೆಂಗಳೂರು ನಗರ ಮತ್ತು ಇತರೆ ವಿಭಾಗಗಳಿಂದ ಮದ್ಯ ಮಾರಾಟ ಅಂಗಡಿಗಳನ್ನು ವರ್ಗಾವಣೆ ಮಾಡಲಾಗಿದೆಯೇ (ವಿವರ ನೀಡುವುದು);	ಯಲಹಂಕ ವಿಧಾನ ಸಭಾಕ್ಷೇತ್ರದ ವ್ಯಾಪ್ತಿಗೆ ಕಳೆದ 3 ವರ್ಷಗಳಿಂದ (2016, 2017 ಹಾಗೂ 2018 ಕ್ಯಾಲೆಂಡರ್ ವರ್ಷ) ಒಟ್ಟು 30 ಅಬಕಾರಿ ಸನ್ನದುಗಳನ್ನು ಸ್ಥಳಾಂತರ ಮಾಡಲಾಗಿದೆ. ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.
ಆ)	ಗ್ರಾಮಾಂತರ ಪ್ರದೇಶಗಳಲ್ಲಿ ಅಕ್ರಮ ಮದ್ಯ ಮಾರಾಟವು ಹೆಚ್ಚಾಗಿದ್ದು, ಇವುಗಳನ್ನು ತಡೆಗಟ್ಟಲು ಸರ್ಕಾರ ಯಾವ ಕ್ರಮಕೈಗೊಂಡಿದೆ;	ಅನಧಿಕೃತ ಸ್ಥಳಗಳಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುವವರನ್ನು ಪತ್ತೆ ಹಚ್ಚಿ ಅಂತಹವರ ವಿರುದ್ಧ ಅಬಕಾರಿ ಕಾಯಿದೆ ಮತ್ತು ನಿಯಮಗಳನ್ವಯ ಪ್ರಕರಣಗಳನ್ನು ದಾಖಲು ಮಾಡಲಾಗುತ್ತಿದೆ. ಅಬಕಾರಿ ಇಲಾಖೆಯು ಅಕ್ರಮ ಮದ್ಯ ಮಾರಾಟವನ್ನು ತಡೆಗಟ್ಟಲು ಅಬಕಾರಿ ಕಾಯ್ದೆ ಮತ್ತು ತತ್ಸಂಬಂಧ ನಿಯಮಗಳ ಜಾರಿಗೊಳಿಸುವಿಕೆ ಕ್ರಮಗಳನ್ನು ಚುರುಕುಗೊಳಿಸಲಾಗಿದೆ. ಅಲ್ಲದೆ ಈ ಕುರಿತು ಪೋಲೀಸ್ ಇಲಾಖೆಯೂ ಸಹ ನಿರಂತರ ಕಾರ್ಯಾಚರಣೆ ನಡೆಸುತ್ತಿದ್ದು, ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ 2 ತಿಂಗಳಿಗೊಮ್ಮೆ ನಡೆಯುವ ಸಮನ್ವಯ ಸಮಿತಿ ಸಭೆಯಲ್ಲೂ ಅಬಕಾರಿ ಅಕ್ರಮ ಕುರಿತು ಅಗತ್ಯ ನಿರ್ದೇಶನಗಳನ್ನು ನೀಡಲಾಗುತ್ತಿದೆ. ಅಬಕಾರಿ ಇಲಾಖೆಯ ಸಿಬ್ಬಂದಿಯು ಸದಾ ಕಾಲ ಜಾಗೃತರಾಗಿದ್ದು ನಿರಂತರ ದಾಳಿ ಕಾರ್ಯ ನಡೆಸಿ, ಅಕ್ರಮ ಮದ್ಯ ಮಾರಾಟವಾಗದಂತೆ ಎಚ್ಚರಿಕೆ ವಹಿಸುವಂತೆ ನಿರ್ದೇಶಿಸಲಾಗಿದೆ
ಇ)	ಮದ್ಯ ಅಂಗಡಿಗಳನ್ನು ತೆರೆಯುವ ಸಂದರ್ಭದಲ್ಲಿ ಸ್ಥಳೀಯ ಸಾರ್ವಜನಿಕರ ವಿರೋಧದಿಂದಾಗಿ ಅಧಿಕಾರಿಗಳು ಅಂಗಡಿಗಳನ್ನು ವರ್ಗಾವಣೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು.
ಈ)	ಮದ್ಯ ಅಂಗಡಿಯನ್ನು ತೆರೆಯುವ ಸಂದರ್ಭದಲ್ಲಿ ಸರ್ಕಾರದ ನಿಯಮಗಳನ್ನು ಉಲ್ಲಂಘಿಸಿ (ಶಾಲೆ/ದೇವಸ್ಥಾನ) ಅನುಮತಿಯನ್ನು ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಇಲ್ಲ.

ಆಇ 76 ಇಎಲ್‌ಕ್ಯೂ 2018

(ಹೆಚ್.ಡಿ.ಕುಮಾರಸ್ವಾಮಿ)

ಮುಖ್ಯಮಂತ್ರಿ

ಅನುಬಂಧ

ಯಲಹಂಕ ವಿಧಾನಸಭಾಕ್ಷೇತ್ರ ವ್ಯಾಪ್ತಿಗೆ 2016, 2017 ಹಾಗೂ 2018 ಕ್ಯಾಲೆಂಡರ್ ಸಾಲುಗಳಲ್ಲಿ ಸ್ಥಳಾಂತರಗೊಂಡಿರುವ ಸನ್ನದುಗಳ ವಿವರ

2016ನೇ ವರ್ಷ

ಕ್ರ. ಸಂ.	ಸನ್ನದುದಾರರ ಹೆಸರು ಮತ್ತು ಸನ್ನದು ವಿಳಾಸ	ಸನ್ನದು ವಿಧ	ಆದೇಶ ಸಂಖ್ಯೆ ಮತ್ತು ದಿನಾಂಕ
1	ಶ್ರೀ ಆರ್. ಲಕ್ಷ್ಮಣಮೂರ್ತಿ, ಬಿ.ಜಿ. ಲಿಕ್ಕರ್ಸ್, ಕಟ್ಟಡದ ಸಂಖ್ಯೆ:22/2, ಸೈಟ್ ನಂ.10, ಹೊನ್ನಸಂದ್ರ, ದಾಸನಪುರ ಹೋಬಳಿ, ಬೆಂಗಳೂರು ಉತ್ತರತಾಲ್ಲೂಕು, ಬೆಂಗಳೂರು. (ಟಿ.ದಾಸರಹಳ್ಳಿ ಅಬಕಾರಿ ವಲಯ)	ಸಿಎಲ್–2	ಆದೇಶ ಸಂ: ಇಎಕ್ಸ್‌ಇ:ಐಎಂಎಲ್:ಟಿ.ದಾವ:02:2015–16 ದಿನಾಂಕ:28–06–2016
2	ಹೆಚ್.ವಿ.ವೆಂಕಟೇಶ್, ಮಾರುತಿ ಬಾ/ರೆ, ಕಟ್ಟಡ ಸಂಖ್ಯೆ:51:1–ಎ:4, ಹೆಗ್ಗಡದೇವನಪುರಗ್ರಾಮ, ಆಲೂರು ಪಂಚಾಯಿತಿ, ದಾಸನಪುರ ಹೋಬಳಿ, ಬೆಂಗಳೂರು ಉತ್ತರತಾಲ್ಲೂಕು (ಟಿ.ದಾಸರಹಳ್ಳಿ ಅಬಕಾರಿ ವಲಯ)	ಸಿಎಲ್–9	ಆದೇಶ ಸಂ: ಇಎಕ್ಸ್‌ಇ:ಐಎಂಎಲ್:ಟಿ.ದಾವ:ಸಿಎಲ್–9:380:2015–16 ದಿನಾಂಕ:17–06–2016

2017ನೇ ವರ್ಷ

ಕ್ರ. ಸಂ.	ಸನ್ನದುದಾರರ ಹೆಸರು ಮತ್ತು ಸನ್ನದು ವಿಳಾಸ	ಸನ್ನದು ವಿಧ	ಆದೇಶ ಸಂಖ್ಯೆ ಮತ್ತು ದಿನಾಂಕ
1	ಶ್ರೀ ಡಿ.ಪಿ. ಅಶೋಕ್ ನಂ: 13, ಸರ್ವೆ ನಂ: 28/1, ರಾಮಚಂದ್ರಪುರ ಮುಖ್ಯರಸ್ತೆ, ದೊಡ್ಡಬೊಮ್ಮಸಂದ್ರ, ಬೆಂಗಳೂರು (ಯಲಹಂಕ ಅಬಕಾರಿ ವಲಯ)	ಸಿಎಲ್–2	ಆದೇಶ ಸಂ: ಇಎಕ್ಸ್‌ಇ/ಐಎಂಎಲ್/ ಯವ/ಸಿಎಲ್–2/06/ 2016–17, ದಿ : 17.04.2017
2	ಶ್ರೀ ಕೆ ಎಂ ಸುಬ್ರಮಣ್ಯ, ಕಟ್ಟಡದ ನಂ: 1794/37/4/32, ಶಿವನಹಳ್ಳಿ, ಯಲಹಂಕ, ಬೆಂಗಳೂರು (ಯಲಹಂಕ ಅಬಕಾರಿ ವಲಯ)	ಸಿಎಲ್–2	ಆದೇಶ ಸಂ:ಇಎಕ್ಸ್‌ಇ/ಐಎಂಎಲ್/ಯವ/ಸಿಎಲ್–2/43/2016–17, ದಿ : 29.06.2017
3	ಶ್ರೀಮತಿ ಜಯಲಕ್ಷ್ಮೀ ಕೋಂ ಬಿ. ನಾಗರಾಜ್ ಬಿಬಿಎಂಪಿ ಖಾತಾ ನಂ–12/12, ವೆಂಕಟಾಲ, ಬೆಂಗಳೂರು ಉತ್ತರತಾಲ್ಲೂಕು, ಬೆಂಗಳೂರು (ಯಲಹಂಕ ಅಬಕಾರಿ ವಲಯ)	ಸಿಎಲ್–9	ಆದೇಶ ಸಂ:ಇಎಕ್ಸ್‌ಇ/ಐಎಂಎಲ್/ಯವ/56/ 2017–18, ದಿ : 01.09.2017
4	ಶ್ರೀ ಕೆ.ಹೊಂಬಹನುಮಯ್ಯ, ಸಿಎಲ್–9 ಸನ್ನದುದಾರರು, ಕಟ್ಟಡ ಸಂಖ್ಯೆ:1437/ಡಿ, ಗಾಂಧಿನಗರ ಬಡಾವಣೆ, ಯಲಹಂಕ ಟೌನ್, ಬೆಂಗಳೂರು (ಗೋಕುಲ ಅಬಕಾರಿ ವಲಯ)	ಸಿಎಲ್–9	ಆದೇಶ ಸಂಖ್ಯೆ:ಇಎಕ್ಸ್‌ಇ/ಗೋವ/ಸಿಎಲ್–9/05/2016–17 ದಿನಾಂಕ:29.06.2017
5	ಆರ್.ಶ್ರೀನಿವಾಸ್ ಸಿಎಲ್–9 ಸನ್ನದುದಾರರು ಮೆ:ಶ್ರೀನಿವಾಸ್ ಬಾರ್/ರೆ ಉದ್ದೇಶಿತ ಕಟ್ಟಡ ಸಂಖ್ಯೆ 1008/834/5, ಕಾಕೋಳು ರಸ್ತೆ, ರಾಜಾನುಕುಂಟೆ ಅಂಚೆ, ಹೆಸರಘಟ್ಟ ಹೋಬಳಿ, ಬೆಂಗಳೂರು–64 (ಗೋಕುಲ ಅಬಕಾರಿ ವಲಯ)	ಸಿಎಲ್–9	ಆದೇಶ ಸಂಖ್ಯೆ:ಇಎಕ್ಸ್‌ಇ/ಐಎಂಎಲ್/ಗೋವ/ ಸಿಎಲ್–9/04/2016–17 ದಿನಾಂಕ:29.06.2017

6	ಶ್ರೀ. ಎಸ್.ಎಲ್.ನಟರಾಜ್ ಸಿಎಲ್-9 ಸನ್ನದುದಾರರು, ಮೆ:ಅರುಣಾ ಬಾರ್/ರೆ, ಸಂಖ್ಯೆ 155/1 ಹೆಸರಘಟ್ಟ ವಿಲೇಜ್, ಹೆಸರಘಟ್ಟ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು-560097 (ಗೋಕುಲ ಅಬಕಾರಿ ವಲಯ)	ಸಿಎಲ್-9	ಆದೇಶ ಸಂಖ್ಯೆ:ಇಎಕ್ಸ್‌ಇ/ಭಾತಮ/ಗೋವ/ಸಿಎಲ್-9/571/2017-18 ದಿನಾಂಕ:31.08.2017
7	ಶ್ರೀ ಜಿ.ವೆಂಕಟೇಶ್ ಸಿಎಲ್-9 ಸನ್ನದುದಾರರು ಸರ್ವೆ ನಂ:16/1, ಪಿ1, ಸೈಟ್ ನಂ:1, ಕುಂಬಾರಹಳ್ಳಿ, ಸಿಲ್ವೆಮರ ರಸ್ತೆ, ಕಸಗಟ್ಟಪುರಗ್ರಾಮ ಪಂಚಾಯಿತಿ, ಹೆಸರಘಟ್ಟ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು-560090 (ಗೋಕುಲ ಅಬಕಾರಿ ವಲಯ)	ಸಿಎಲ್-9	ಆದೇಶ ಸಂಖ್ಯೆ:ಇಎಕ್ಸ್‌ಇ/ಭಾತಮ/ಗೋವ/ಸಿಎಲ್-9/649/2017-18 ದಿನಾಂಕ:13.10.2017
8	ಶ್ರೀ. ಜಿ.ಮುದ್ದಭೈರಯ್ಯ, ಮಧು ವೈನ್ಸ್, ಕಟ್ಟಡ ಸಂಖ್ಯೆ:19, ಅಸೆಸ್‌ಮೆಂಟ್ ನಂ.21/1, ಎಸ್.ಸಿ.ಆರ್ ರಸ್ತೆ, ಮಾದನಾಯ್ಕನಹಳ್ಳಿ ಅಂಚೆ, ಬೆಂಗಳೂರು-562162 (ಟಿ.ದಾಸರಹಳ್ಳಿ ಅಬಕಾರಿ ವಲಯ)	ಸಿಎಲ್-2	ಆದೇಶ ಸಂಖ್ಯೆ: ಇಎಕ್ಸ್‌ಇ:ಭಾತಮ:ಟಿ.ದಾವ:ಸಿಎಲ್-2:535: 2017-18 ದಿನಾಂಕ:24-07-2017
9	ಕೆ.ಎಸ್. ಚಾಮರಾಜು, ಸಿ.ಎಂ ವೈನ್ಸ್, ನಂ.2/5 ಮಾಕಳಿ ಗ್ರಾಮ, ತುಮಕೂರುರಸ್ತೆ, ದಾಸನಪುರ ಹೋಬಳಿ, ಬೆಂಗಳೂರು (ಟಿ.ದಾಸರಹಳ್ಳಿ ಅಬಕಾರಿ ವಲಯ)	ಸಿಎಲ್-2	ಆದೇಶ ಸಂಖ್ಯೆ: ಇಎಕ್ಸ್‌ಇ:ಐಎಂಎಲ್:ಟಿ.ದಾವ:ಸಿಎಲ್-2 :640:2017-18 ದಿನಾಂಕ:16-11-2017
10	ಶ್ರೀಮತಿ ಎಸ್.ವಸಂತ, ಶೇಖರ್ ವೈನ್ಸ್, ಸಂಖ್ಯೆ5 ಮತ್ತು 6, ಬಿಲ್ಡಿಂಗ್ ಮತ್ತುಖಾತಾ ನಂ:32 ಮತ್ತು 33, ತೋಟಡದಗುಡ್ಡದಹಳ್ಳಿ ಗ್ರಾಮ, ದಾಸನಪುರ ಹೋಬಳಿ, ಬೆಂಗಳೂರು.. (ಟಿ.ದಾಸರಹಳ್ಳಿ ಅಬಕಾರಿ ವಲಯ)	ಸಿಎಲ್-2	ಆದೇಶ ಸಂಖ್ಯೆ: ಇಎಕ್ಸ್‌ಇ:ಭಾತಮ:ಸ.ಸ್ಥ: ಟಿ.ದಾವ:09:2017-18 ದಿನಾಂಕ:30-06-2017
11	ಶ್ರೀ ಟಿ.ವಾಸುದೇವಯ್ಯ, ವಿ.ಕೆ ಬಾ/ರೆ, ಕಟ್ಟಡ ಸೈಟ್ ನಂ.01, ಅಸೆಸ್‌ಮೆಂಟ್ ನಂ.37/2ಎ, ಟಿ. ತಿಮ್ಮಪ್ಪ ಬಡಾವಣೆ, ರಡ್ಡಿತೋಟದರಸ್ತೆ, ಶ್ರೀಕಂಠಪುರ, ಅಂಚೆಪಾಳ್ಯ, ನಾಗಸಂದ್ರ, ಬೆಂಗಳೂರು-73. (ಟಿ.ದಾಸರಹಳ್ಳಿ ಅಬಕಾರಿ ವಲಯ)	ಸಿಎಲ್-9	ಆದೇಶ ಸಂಖ್ಯೆ: ಇಎಕ್ಸ್‌ಇ:ಐಎಂಎಲ್:ಟಿ.ದಾವ: ಸಿಎಲ್-9:626:2017-18 ದಿನಾಂಕ:18-09-2017
12	ಶ್ರೀ. ಬಿ. ಚಂದ್ರಪ್ಪ , ಸಿಎಲ್-2 ಸನ್ನದುದಾರರು, ವಿನಾಯಕ ವೈನ್ಸ್, ಕಟ್ಟಡ ಸಂಖ್ಯೆ: 60, ಲಕ್ಷ್ಮೀಪುರರಸ್ತೆ, ಸಿದ್ದನ ಹೊಸಹಳ್ಳಿ, ದಾಸನಪುರ ಹೋಬಳಿ, ಬೆಂಗಳೂರು ಉತ್ತರ (ಪೀಣ್ಯಅಬಕಾರಿ ವಲಯ)	ಸಿಎಲ್-2	ಆದೇಶ ಸಂಖ್ಯೆ: ಇಎಕ್ಸ್‌ಇ/ಐಎಂಎಲ್/ಪೀವ/ ಸಿಎಲ್2/2016-17 ದಿ:29.06.2017
13	ಶ್ರೀಮತಿ ಹೆಚ್.ಟಿ.ಕುಮಾರಿ, ಸಿಎಲ್-2 ಸನ್ನದುದಾರರು, ಸಪ್ತಗಿರಿ ವೈನ್ಸ್‌ಕಟ್ಟಡ ಸಂಖ್ಯೆ: ನಂ.42/2, ಸೈಟ್ ನಂ.07, ಕಾಚೋಹಳ್ಳಿ ಮುಖ್ಯರಸ್ತೆ, ದಾಸನಪುರ ಹೋಬಳಿ, ಬೆಂಗಳೂರು ಉತ್ತರತಾ॥ (ಪೀಣ್ಯಅಬಕಾರಿ ವಲಯ)	ಸಿಎಲ್-2	ಆದೇಶ ಸಂಖ್ಯೆ: ಇಎಕ್ಸ್‌ಇ/ಐಎಂಎಲ್/ಪೀವ/ ಸ್ಥಳಾಂತರ/40/2017-18 ದಿ:01.09.2017
14	ಶ್ರೀಮತಿ ಬಿ.ಜಿ.ಭೈರಮ್ಮ ಸಿಎಲ್-2 ಸನ್ನದುದಾರರು, ಮಂಜುನಾಥ ವೈನ್ಸ್‌ಕಟ್ಟಡ ಸಂಖ್ಯೆ: ಸರ್ವೇ ನಂ.28/2, 28/3, 29/2, ಕೆ.ನಂ.255, ಸೈಟ್ ನಂ.01, ಸಿದ್ದನಹೊಸಹಳ್ಳಿ, ದಾಸನಪುರ ಹೋಬಳಿ, ಬೆಂಗಳೂರು ಉತ್ತರ (ಪೀಣ್ಯಅಬಕಾರಿ ವಲಯ)	ಸಿಎಲ್-2	ಆದೇಶ ಸಂಖ್ಯೆ: ಇಎಕ್ಸ್‌ಇ/ಐಎಂಎಲ್/ಪೀವ/ ಸಿಎಲ್2/221//2016-17 ದಿ:29.06.2017

15	ಶ್ರೀಮತಿ ಜೆ.ಸತ್ಯಕುಮಾರಿ, ಸಿಎಲ್-2 ಸನ್ನದುದಾರರು, ಅಮೃತ್ ವೈನ್ಸ್, ಕಟ್ಟಡ ಸಂಖ್ಯೆ:ಅಸೆಸ್‌ಮೆಂಟ್ ನಂ.12/1, ಹಾಲಿ ಖಾತಾ ಸಂಖ್ಯೆ:1531, ಕಾಚೋಹಳ್ಳಿ ಗ್ರಾಮ, ದಾಸನಪುರ ಹೋಬಳಿ, ಬೆಂಗಳೂರು ಉತ್ತರತಾಲ್ಲೂಕು (ಪೀಣ್ಯಅಬಕಾರಿ ವಲಯ)	ಸಿಎಲ್-2	ಆದೇಶ ಸಂಖ್ಯೆ:ಇಎಕ್ಸ್‌ಇ/ಐಎಂಎಲ್/ಪೀವ/ ಸಿಎಲ್2/414/2016-17 ದಿ:30.06.2017
16	ಶ್ರೀಮತಿ ಯಶೋಧ, ಸಿಎಲ್9 ಸನ್ನದುದಾರರು, ಅರ್ಕಾವತಿ ಬಾ/ರೆ, ಕಟ್ಟಡ ಸಂಖ್ಯೆ: ಸಂಖ್ಯೆ:102/2, ಸೈಟ್ ನಂ.11, ಶ್ರೀ ನಾಗರಾಜಪ್ಪ ಬಿಲ್ಡಿಂಗ್, ಹಾರೋಕ್ಯಾತನಹಳ್ಳಿ ಗ್ರಾಮ, ದಾಸನಪುರ ಹೋಬಳಿ, ಬೆಂಗಳೂರು ಉತ್ತರತಾ॥, (ಪೀಣ್ಯಅಬಕಾರಿ ವಲಯ)	ಸಿಎಲ್-9	ಆದೇಶ ಸಂಖ್ಯೆ:ಇಎಕ್ಸ್‌ಇ/ಐಎಂಎಲ್/ಪೀವ/ ಸಿಎಲ್9/71/2016-17 ದಿ:29.06.2017
17	ಶ್ರೀಮತಿ ಸಿ. ಪದ್ಮಾವತಿ, ಸಿಎಲ್9 ಸನ್ನದುದಾರರು, ವಿನಾಯಕ ಬಾ/ರೆ, ಕಟ್ಟಡ ಸಂಖ್ಯೆ: 24, ಬೈಲಪ್ಪನಪಾಳ್ಯ ಹೊಟ್ಟಪ್ಪನಪಾಳ್ಯ ಮುಖ್ಯರಸ್ತೆ, ಮಾದಾವರ, (ಅಂಚೆ) ದಾಸನಪುರ (ಹೋ), ಬೆಂಗಳೂರು ಉತ್ತರತಾ॥, ಬೆಂಗಳೂರು (ಪೀಣ್ಯಅಬಕಾರಿ ವಲಯ)	ಸಿಎಲ್-9	ಆದೇಶ ಸಂಖ್ಯೆ: ಇಎಕ್ಸ್‌ಇ/ಐಎಂಎಲ್/ಪೀವ/ ಸಿಎಲ್9/64/2016-17 ದಿ:29.06.2017
18	ಶ್ರೀಮತಿ ಬಿ.ಜಿ.ಭೈರಮ್ಮ ಸಿಎಲ್-9 ಸನ್ನದುದಾರರುಶ್ರೀನಿವಾಸ ಬಾ/ರೆ, ಕಟ್ಟಡ ಸಂಖ್ಯೆ: 1383/121, ಸಿದ್ದನ ಹೊಸಹಳ್ಳಿ ಗ್ರಾಮ, ದಾಸನಪುರ ಹೋಬಳಿ, ಬೆಂಗಳೂರು ಉತ್ತರತಾ॥ (ಪೀಣ್ಯಅಬಕಾರಿ ವಲಯ)	ಸಿಎಲ್-9	ಆದೇಶ ಸಂಖ್ಯೆ: ಇಎಕ್ಸ್‌ಇ/ಐಎಂಎಲ್/ಪೀವ/ಸಿಎಲ್9 /ಸ್ಥಳಾಂತರ/07/2016-17 ದಿ:29.06.2017
19	ಶ್ರೀ. ಲೋಕೇಶ್, ಸಿಎಲ್-9 ಸನ್ನದುದಾರರುವೀರಭದ್ರೇಶ್ವರ ಬಾ/ರೆ, ಕಟ್ಟಡ ಸಂಖ್ಯೆ: ಅಸೆಸ್‌ಮೆಂಟ್ ನಂ. 31/1, ಹಳೆ ಖಾತಾ ನಂ.31 (ಹೊಸ ಖಾತಾ ನಂ.3179) ಕಟ್ಟಡದ ನಂ.14, ದಾಸನಪುರಗ್ರಾಮ ಮತ್ತು ಹೋಬಳಿ, ಬೆಂಗಳೂರು ಉತ್ತರತಾ॥ (ಪೀಣ್ಯಅಬಕಾರಿ ವಲಯ)	ಸಿಎಲ್-9	ಆದೇಶ ಸಂಖ್ಯೆ: ಇಎಕ್ಸ್‌ಇ/ಐಎಂಎಲ್/ಪೀವ/ಸಿಎಲ್9 220/2016-17 ದಿ:30.06.2017
20	ಶ್ರೀ.ಬಿ.ರಾಮ್‌ಮೋಹನ್ ಸಿಎಲ್-2 ಸನ್ನದುದಾರರು ಬೆಂಗಳೂರು ವೈನ್ಸ್, ಕಟ್ಟಡ ಸರ್ವೆ ನಂ.19/3, ನಂ.51,52,53. ಕಡಬಗೆರೆ ಮುಖ್ಯರಸ್ತೆ, ದಾಸನಪುರ ಹೋಬಳಿ, ಬೆಂಗಳೂರು ಉತ್ತರತಾ॥ (ಪೀಣ್ಯಅಬಕಾರಿ ವಲಯ)	ಸಿಎಲ್-2	ಆದೇಶ ಸಂಖ್ಯೆ: ಇಎಕ್ಸ್‌ಇ/ಐಎಂಎಲ್/ಪೀವ/ಸಿಎಲ್2 /ಸ್ಥಳಾಂತರ/43/2017-18 ದಿ:01.09.2017
21	ಶ್ರೀ ಹೊನ್ನಗಿರಿಗೌಡ, ಸಿಎಲ್-2 ಸನ್ನದುದಾರರು, ಸತೀಶ್ ವೈನ್ಸ್‌ಕಟ್ಟಡ ಸಂ:35, ಅಸೆಸ್‌ಮೆಂಟ್ ನಂ.35/6, ಕಾಚೋಹಳ್ಳಿ ಮುಖ್ಯರಸ್ತೆ, ದಾಸನಪುರ ಹೋಬಳಿ, ಬೆಂಗಳೂರು ಉತ್ತರತಾ॥, ಬೆಂಗಳೂರು (ಪೀಣ್ಯಅಬಕಾರಿ ವಲಯ)	ಸಿಎಲ್-2	ಆದೇಶ ಸಂಖ್ಯೆ: ಇಎಕ್ಸ್‌ಇ/ಐಎಂಎಲ್/ಪೀವ/ಸಿಎಲ್2 49/2017-18 ದಿ:17.10.2017
22	ಶ್ರೀಮತಿ ಲತಾ, ಮ್ಯಾನೇಜಿಂಗ್ ಪಾರ್ಟನರ್, ಸಿಎಲ್-2 ಸನ್ನದುದಾರರು, ಕೀರ್ತಿಎಂಟರ್ ಪ್ರೈಸಸ್‌ಕಟ್ಟಡ ಸೈಟ್ ನಂ.45/2ಎ, ಸೊಂಡೆಕೊಪ್ಪರಸ್ತೆ, ತಾವರೆಕೆರೆ, ಬೆಂಗಳೂರು. (ಪೀಣ್ಯಅಬಕಾರಿ ವಲಯ)	ಸಿಎಲ್-2	ಆದೇಶ ಸಂಖ್ಯೆ: ಇಎಕ್ಸ್‌ಇ/ಐಎಂಎಲ್/ಪೀವ/ಸಿಎಲ್2 53/2017-18 ದಿ:16.10.2017

23	ಮ್ಯಾನೇಜಿಂಗ್ ಪಾರ್ಟನರ್ಸ್, ಸಿಎಲ್-9 ಸನ್ನದುದಾರರುಅನ್ನಪೂರ್ಣೇಶ್ವರಿಎಂಟರ್‌ಪ್ರೈಸಸ್, ಕಟ್ಟಡ ಸರ್ವೇ ನಂ:19/3-ಎ1, ಕಟ್ಟಡ ಸಂಖ್ಯೆ:52/1, ಕಡಬಗೆರೆ, ದಾಸನಪುರ ಹೋಬಳಿ, ಬೆಂಗಳೂರು ಉತ್ತರತಾಲ್ಲೂಕು, ಬೆಂಗಳೂರು (ಪೀಣ್ಯಅಬಕಾರಿ ವಲಯ)	ಸಿಎಲ್-2	ಆದೇಶ ಸಂಖ್ಯೆ: ಇಎಕ್ಸ್‌ಇ/ಐಎಂಎಲ್/ಪೀವ/ಸಿಎಲ್9 49/2017-18 ದಿ:26.09.2017
24	ಶ್ರೀ ಕೆ.ಎಂ.ಶಂಕರ್, ಸಿಎಲ್-9 ಸನ್ನದುದಾರರು ಸರಿತಾ ಬಾ/ರೆ, ಕಟ್ಟಡ ಸರ್ವೇ ನಂ:155/126, ಸೈಟ್ ನಂ.73, ಕಡಬಗೆರೆಗ್ರಾಮ, ದಾಸನಪುರ ಹೋಬಳಿ, ಬೆಂಗಳೂರು ಉತ್ತರತಾಲ್ಲೂಕು, ಬೆಂಗಳೂರು (ಪೀಣ್ಯಅಬಕಾರಿ ವಲಯ)	ಸಿಎಲ್-2	ಆದೇಶ ಸಂಖ್ಯೆ: ಇಎಕ್ಸ್‌ಇ/ಐಎಂಎಲ್/ಪೀವ/ಸಿಎಲ್9 37/2017-18 ದಿ:30.08.2017

2018ನೇ ವರ್ಷ

ಕ್ರ ಸಂ.	ಸನ್ನದುದಾರರ ಹೆಸರು ಮತ್ತು ಸನ್ನದು ವಿಳಾಸ	ಸನ್ನದು ವಿಧ	ಆದೇಶ ಸಂಖ್ಯೆ ಮತ್ತು ದಿನಾಂಕ
1	ಶ್ರೀ ಕೆ. ಮಂಜುನಾಥ ಖಾತಾ ನಂ: 551ಎ/444ಎ, ಗಾಂಧಿನಗರ ಮುಖ್ಯರಸ್ತೆ, ಸುಗ್ಗಪ್ಪ ಬಡಾವಣೆ, ಯಲಹಂಕ ಓಲ್ಡ್‌ಟೌನ್, ಬೆಂಗಳೂರು (ಯಲಹಂಕ ಅಬಕಾರಿ ವಲಯ)	ಸಿಎಲ್-9	ಆದೇಶ ಸಂ: ಇಎಕ್ಸ್‌ಇ/ಐಎಂಎಲ್/ಹೆವ/ಸಿಎಲ್-9/598/ 2017-18, ದಿ : 01.02.2018.
2	ಶ್ರೀ ಹೆಚ್.ಈ. ಅವಿನಾಶ್ 2017-18ನೇ ಸಾಲಿನ ಆರ್‌ವಿಬಿ ಹೊಂದಿಕೊಂಡಿರುವ ಸಿಎಲ್-9 ಸನ್ನದುದಾರರು, ಕಟ್ಟಡದ ಸಂಖ್ಯೆ: 899/756, 4ನೇ ಮಹಡಿ ಮತ್ತು ಮೆಜಿನೈನ್ ಮಹಡಿಆರ್‌ಎಂ ಸ್ಕ್ವಯರ್, ಬಿಬಿ ಮುಖ್ಯರಸ್ತೆ, ಯಲಹಂಕ, ಬೆಂಗಳೂರು (ಯಲಹಂಕ ಅಬಕಾರಿ ವಲಯ)	ಸಿಎಲ್-9	ಆದೇಶ ಸಂ: ಇಎಕ್ಸ್‌ಇ/ಐಎಂಎಲ್/ಯವ/ಸಿಎಲ್- 9&ಆರ್‌ವಿಬಿ/64/2017-18, ದಿ : 12.04.2018.
3	ಶ್ರೀಮತಿ ರಾಧಮ್ಮ ಟಿ.ಪಿ. ಬಿಬಿಎಂಪಿ ಖಾತಾ ನಂ: 1172/346/162/ಎ, ವೆಂಕಟಾಲ, ಯಲಹಂಕ, ಬೆಂಗಳೂರು (ಯಲಹಂಕ ಅಬಕಾರಿ ವಲಯ)	ಸಿಎಲ್-9	ಆದೇಶ ಸಂ: ಇಎಕ್ಸ್‌ಇ/ಯವ/ಐಎಂಎಲ್/ಸಿಎಲ್-2/41/2017- 18, ದಿ: 27.06.2018.
4	ಎಂ.ಎಸ್.ಐ.ಎಲ್ , ಸರ್ವೇ ನಂ 61/2, ಅಂಗಡಿ ಸಂಖ್ಯೆ 7 ಮತ್ತು 8, ಹಕ್ಕಿ ಕೆಂಪಯ್ಯಬಿಲ್ಡಿಂಗ್, ಹೆಸರಘಟ್ಟಕೆರೆರಸ್ತೆ, ಬೆಂಗಳೂರು (ಗೋಕುಲ ಅಬಕಾರಿ ವಲಯ)	ಸಿಎಲ್-11ಸಿ	ಆದೇಶ ಸಂಖ್ಯೆ:ಇಎಕ್ಸ್‌ಇ/ಗೋವ/ಐಎಂಎಲ್/ಸಿಎಲ್- 11ಸಿ/657/2018-19 ದಿ:24.08.2018

ಆಇ 76 ಇಎಲ್‌ಕ್ಯೂ 2018

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:	2157
ಸದಸ್ಯರ ಹೆಸರು:	ಶ್ರೀ ಎಸ್.ಎನ್. ಸುಬ್ಬಾರೆಡ್ಡಿ (ಬಾಗೇಪಲ್ಲಿ)
ಉತ್ತರಿಸಬೇಕಾದವರು:	ಮುಖ್ಯಮಂತ್ರಿಯವರು
ಉತ್ತರಿಸಬೇಕಾದ ದಿನಾಂಕ:	18-12-2018

ಕ್ರ ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಸಿ.ಎಸ್.ಎಲ್-9 ಮತ್ತು ಸಿ.ಎಸ್.ಎಲ್-2 ಮದ್ಯದಂಗಡಿ ನಡೆಸಬೇಕಾದರೆ ಅಂಗಡಿಯ ಕಟ್ಟಡದ ವಿನ್ಯಾಸ ಯಾವ ಮಾದರಿಯಲ್ಲಿರಬೇಕು;	ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ 7 ರಲ್ಲಿ ಸಿಎಲ್-2 ಮತ್ತು ಸಿಎಲ್-11(ಸಿ) (ಎಂ.ಎಸ್.ಐ.ಎಲ್. ಮದ್ಯ ಮಾರಾಟ ಮಳಿಗೆ) ಸನ್ನದಿಗೆ ಒಂದಕ್ಕಿಂತ ಹೆಚ್ಚಿನ ಪ್ರವೇಶ ಮತ್ತು ನಿರ್ಗಮನ ದ್ವಾರ ಇರಬಾರದು ಎಂದು ಉಪಬಂಧಿಸಿದೆ. ಸಿಎಲ್-9 ಸನ್ನದನ್ನು ನಡೆಸಲು ಅಗತ್ಯವಿರುವ ಸೌಲಭ್ಯಗಳ ಬಗ್ಗೆ ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳು, 1968ರ ನಿಯಮ 3(9) ರಲ್ಲಿ ಉಪಬಂಧಿಸಿದೆ.
ಆ)	ಸಿ.ಎಸ್.ಎಲ್.-9 ಮತ್ತು ಸಿ.ಎಸ್.ಎಲ್-2 ಪರವಾನಗಿಯಲ್ಲಿ ಒಂದು ಅಂಗಡಿಯಲ್ಲಿ ಒಂದಕ್ಕಿಂತ ಹೆಚ್ಚಿನ ಕೌಂಟರ್ ತೆಗೆಯಬಹುದೆ; (ವಿವರ ನೀಡುವುದು)	ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳು, 1968 ರ ನಿಯಮ 3 ರ ಉಪ ನಿಯಮ (4) ಕ್ಕೆ ಮಾಡಲಾದ ತಿದ್ದುಪಡಿಯಲ್ಲಿ ಕೇವಲ ಸಿಎಲ್-4 ಸನ್ನದಿನಲ್ಲಿ ಮಾತ್ರ ಜಿಲ್ಲಾಧಿಕಾರಿಗಳ ಅನುಮತಿಯೊಂದಿಗೆ 04 ಹೆಚ್ಚುವರಿ ಕೌಂಟರ್ ತೆರೆಯಲು ಅವಕಾಶ ಇರುತ್ತದೆ.
ಇ)	ಒಂದು ಪರವಾನಗಿ ಒಂದು ಕಟ್ಟಡದಲ್ಲಿ ನಡೆಯುತ್ತಿದ್ದು ಒಂದಕ್ಕಿಂತ ಹೆಚ್ಚಿನ ಕೌಂಟರ್ ನಡೆಸಿದರೆ ಅಪರಾಧವೆ (ವಿವರ ನೀಡುವುದು)?	ಸನ್ನದು ಮಂಜೂರಾತಿ ಸಂಬಂಧದಲ್ಲಿ ವಿಧಿಸಲಾಗಿರುವ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಕರ್ನಾಟಕ ಅಬಕಾರಿ ಕಾಯ್ದೆ, 1965ರ ಕಲಂ 36 ರಂತೆ ಕ್ರಮ ಜರುಗಿಸಲು ಅವಕಾಶವಿದೆ.

ಆಇ 77 ಇಎಲ್‌ಕ್ಯೂ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1278
ಸದಸ್ಯರ ಹೆಸರು: ಶ್ರೀ ಎಸ್.ಟಿ. ಸೋಮಶೇಖರ್
(ಯಶವಂತಪುರ ವಿಧಾನಸಭಾ ಕ್ಷೇತ್ರ)
ಉತ್ತರಿಸಬೇಕಾದವರು: ಮುಖ್ಯಮಂತ್ರಿಯವರು
ಉತ್ತರಿಸಬೇಕಾದ ದಿನಾಂಕ: 18-12-2018

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಯಶವಂತಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕಳೆದ ಎರಡು ವರ್ಷಗಳಲ್ಲಿ ಎಷ್ಟು ಮದ್ಯ ಅಂಗಡಿಗಳನ್ನು ಸ್ಥಳಾಂತರಿಸುವ ಪ್ರಸ್ತಾವನೆಗಳಿಗೆ ಆದೇಶ ನೀಡಲಾಗಿದೆ;	ಬೆಂಗಳೂರು ನಗರ ಜಿಲ್ಲೆ (ಉತ್ತರ) ವ್ಯಾಪ್ತಿಯಲ್ಲಿ ಯಶವಂತಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಸಂಬಂಧಿಸಿದಂತೆ 2017ರಲ್ಲಿ ಒಟ್ಟು 04 ಮದ್ಯದಂಗಡಿಗಳನ್ನು ಹಾಗೂ 2018ರಲ್ಲಿ ಒಂದು ಮದ್ಯದಂಗಡಿಯನ್ನು ಸ್ಥಳಾಂತರಿಸುವ ಪ್ರಸ್ತಾವನೆಗಳಿಗೆ ಆದೇಶ ನೀಡಲಾಗಿದೆ.
ಆ)	ಈ ಪ್ರಕರಣಗಳಿಗೆ ಸ್ಥಳೀಯರಿಂದ ಆಕ್ಷೇಪಣೆಗಳು ಸ್ವೀಕೃತವಾಗಿರುವ ಜಾಗಗಳು ಎಷ್ಟು;	ಒಂದು.
ಇ)	ಬಡಾವಣೆಗಳು ಹಾಗೂ ಜನನಿಬಿಡ ಪ್ರದೇಶಗಳಲ್ಲಿ ಮದ್ಯ ಅಂಗಡಿಗಳ ಸ್ಥಳಾಂತರ ಹೆಚ್ಚಾಗಲು ಕಾರಣಗಳೇನು?	ಕರ್ನಾಟಕ ಅಬಕಾರಿ ಕಾಯ್ದೆ 1965 ಮತ್ತು ಇದರಡಿ ರಚಿಸಲಾಗಿರುವ ನಿಯಮಗಳಡಿ ಆಕ್ಷೇಪಣಾ ರಹಿತ ಸ್ಥಳವೆಂದು ಕಂಡು ಬಂದ ನಂತರವಷ್ಟೇ ಸನ್ನದು ಸ್ಥಳಾಂತರಕ್ಕೆ ಆದೇಶ ನೀಡಲಾಗುತ್ತಿದ್ದು, ಘನ ಸರ್ವೋಚ್ಚ ನ್ಯಾಯಾಲಯದ ದಿನಾಂಕ:15-12-2016 ಹಾಗೂ 31-03-2017 ರ ಆದೇಶಗಳ ಹಿನ್ನಲೆಯಲ್ಲಿ ರಾಷ್ಟ್ರೀಯ / ರಾಜ್ಯ ಹೆದ್ದಾರಿಗಳ ಬದಿಯಲ್ಲಿದ್ದ ಬಾಧಿತಗೊಂಡಿರುವ ಸನ್ನದುಗಳು ಜಿಲ್ಲೆಯ ಆಕ್ಷೇಪಣಾ ರಹಿತ ಸ್ಥಳಗಳಿಗೆ ಸ್ಥಳಾಂತರಗೊಂಡಿವೆ.

ಆಇ 72 ಇಎಲ್‌ಕ್ಯೂ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1303
ಸದಸ್ಯರ ಹೆಸರು : ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಯಲಬುರ್ಗ)
ಉತ್ತರಿಸಬೇಕಾದ ದಿನಾಂಕ : 18-12-2018
ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಗಳು

	ಪ್ರಶ್ನೆ	ಉತ್ತರ
(ಅ)	ಕೊಪ್ಪಳ ಜಿಲ್ಲೆಯಲ್ಲಿ ಯಲಬುರ್ಗಾ ವಿಧಾನಸಭಾ ಕ್ಷೇತ್ರದಲ್ಲಿ ಆರ್.ಎಂ.ಎಸ್.ಎ ಯೋಜನೆಯಡಿ ಪ್ರೌಢಶಾಲಾ ಕಟ್ಟಡ ಹಾಗೂ ಪ್ರೌಢಶಾಲೆ ಬಲವರ್ಧನೆ ಯೋಜನೆಯಡಿ ಮಂಜೂರಾದ ಕಾಮಗಾರಿಗಳು ಎಷ್ಟು ಹಾಗೂ ಮಂಜೂರಾದ ಅನುದಾವೆಷ್ಟು; (ವಿವರ ಒದಗಿಸುವುದು)	ಕೊಪ್ಪಳ ಜಿಲ್ಲೆಯ ಯಲಬುರ್ಗಾ ವಿಧಾನಸಭಾ ಕ್ಷೇತ್ರದಲ್ಲಿ ಆರ್.ಎಂ.ಎಸ್.ಎ ಯೋಜನೆಯಡಿ ಈ ಕೆಳಕಂಡ 12 ಕಾಮಗಾರಿಗಳು ಮಂಜೂರಾಗಿರುತ್ತದೆ. • ಆದರ್ಶ ವಿದ್ಯಾಲಯ – 1 • ಶಾಲಾ ಕಟ್ಟಡಗಳ ಉನ್ನತೀಕರಣ – 5 • ಪ್ರೌಢಶಾಲೆ ಬಲವರ್ಧನೆ – 6 ಸದರಿ 12 ಕಾಮಗಾರಿಗಳಿಗೆ ರೂ.910.88 ಲಕ್ಷ ಮಂಜೂರಾಗಿರುತ್ತದೆ. (ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಿದೆ)
(ಆ)	ಸದರಿ ಯೋಜನೆಯಡಿ ಕಟ್ಟಡ ನಿರ್ಮಾಣಕ್ಕೆ ನೀಡಿದ ಗುತ್ತಿಗೆ ಅವಧಿ ಎಷ್ಟು; ಈವರೆಗೂ ಇಷ್ಟು ಕಟ್ಟಡಗಳನ್ನು ನಿರ್ಮಾಣ ಮಾಡಲಾಗಿದೆ;ಎಷ್ಟು ಕಟ್ಟಡಗಳನ್ನು ಇಲಾಖೆಗೆ ಹಸ್ತಾಂತರಿಸಲಾಗಿದೆ;	ಸದರಿ ಯೋಜನೆಯಡಿ ಆದರ್ಶ ವಿದ್ಯಾಲಯಗಳಿಗೆ 20 ತಿಂಗಳು, ಶಾಲಾ ಕಟ್ಟಡಗಳ ಉನ್ನತೀಕರಣ ಹಾಗೂ ಪ್ರೌಢಶಾಲೆ ಬಲವರ್ಧನೆ ಕಾಮಗಾರಿಗಳಿಗೆ 16 ತಿಂಗಳುಗಳ ಗುತ್ತಿಗೆ ಅವಧಿಯನ್ನು ನಿಗದಿಪಡಿಸಲಾಗಿದೆ. ಎಲ್ಲಾ ಶಾಲಾ ಕಟ್ಟಡಗಳ ಕಾಮಗಾರಿಗಳು ಪೂರ್ಣಗೊಂಡಿದ್ದು, ಈಗಾಗಲೇ ಬಲವರ್ಧನೆಯಡಿ – 3 ಹಾಗೂ ಉನ್ನತೀಕರಣದಡಿ – 2 ಕಟ್ಟಡಗಳನ್ನು ಇಲಾಖೆಗೆ ಹಸ್ತಾಂತರಿಸಲಾಗಿದೆ. ಉಳಿದ ಕಟ್ಟಡಗಳನ್ನು ಹಸ್ತಾಂತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
(ಇ)	ಬಾಕಿ ಇರುವ ಕಟ್ಟಡಗಳು ಎಷ್ಟು, ಕಟ್ಟಡ ನಿರ್ಮಾಣ ವಿಳಂಬಕ್ಕೆ ಕಾರಣಗಳೇನು; ವಿಳಂಬದಿಂದ ವಿದ್ಯಾರ್ಥಿಗಳ ಪಠ್ಯ ಚಟುವಟಿಕೆಗಳಿಗೆ ತೊಂದರೆಯಾಗಿರುವುದರಿಂದ ಕೈಗೊಂಡ ಕ್ರಮಗಳೇಣು; ವಿಳಂಬಕ್ಕೆ ಕಾರಣರಾದ ಗುತ್ತಿಗೆದಾರರು ಹಾಗೂ ಅಧಿಕಾರಿಗಳ ಮೇಲೆ ಕೈಗೊಂಡ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು)	ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.

ಇಡಿ 52 ಎಂಸಿಡಿ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ

ANNEXURE – 1

ABSTRACT																
KOPPAL DISTRICT																
Construction of Additional rooms for Strengthening of existing Govt. High Schools																
Agency: JAMPANA CONSTRUCTION Pvt. Ltd.																
Sl No	Name of the Constituency	Total No. of Works	No. of Works Started	No. of Works Not Started	Status of work								Estimated amount in Lakhs	Contract amount in Lakhs	Total Expenditure in Lakhs
					Foundation (FO)	Plinth (P)	Lintel (L)	Roof (R)			Finishing (F)	Completed (C)			
								GF	FF	SF					
1	Yelburga	6	6	0	0	0	0	0	0	0	0	6	221.76	260.65	328.82
	Total	6	6	0	0	0	0	0	0	0	0	6	221.76	260.65	328.82
Construction of New School buildings for Upgradation															
Agency: JAMPANA CONSTRUCTION Pvt. Ltd.															
1	Yelburga	5	5	0	0	0	0	0	0	0	0	5	290.60	340.55	413.63
	Total	5	5	0	0	0	0	0	0	0	0	5	290.60	340.55	413.63
Construction of Adarsha Vidyalaya															
Agency: BSR INFRATECH INDIA LTD															
1	Yelburga	1	1	0	0	0	0	0	0	0	0	1	398.52	476.35	509.89
	Total	1	1	0	0	0	0	0	0	0	0	1	398.52	476.35	509.89
GRAND TOTAL		12	12	0	0	0	0	0	0	0	0	12	910.88	1077.55	1252.34

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2079
ಸದಸ್ಯರ ಹೆಸರು : ಶ್ರೀ ಆರ್.ಅಶೋಕ (ಪದ್ಮನಾಭನಗರ)
ಉತ್ತರಿಸಬೇಕಾದ ದಿನಾಂಕ : 18-12-2018
ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಗಳು

	ಪ್ರಶ್ನೆ	ಉತ್ತರ
(ಅ)	ಪ್ರಸಕ್ತ ಶೈಕ್ಷಣಿಕ ವರ್ಷವೂ ಸೇರಿದಂತೆ ಕಳೆದ 2 ವರ್ಷಗಳಿಂದ ರಾಜ್ಯದಲ್ಲಿ ಸರ್ಕಾರಿ ಶಾಲೆಗಳಿಗೆ ವಿದ್ಯಾವಿಕಾಸ ಯೋಜನೆಯಡಿ ಪೂರೈಸಿದ ಸಮವಸ್ತ್ರ ಕೋಟ್ಯಾಂತರ ರೂಪಾಯಿ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಪ್ರಸಕ್ತ ಶೈಕ್ಷಣಿಕ ವರ್ಷವೂ ಸೇರಿದಂತೆ ಕಳೆದ 2 ವರ್ಷಗಳಿಂದ ರಾಜ್ಯದಲ್ಲಿ ಸರ್ಕಾರಿ ಶಾಲೆಗಳಿಗೆ ವಿದ್ಯಾವಿಕಾಸ ಯೋಜನೆಯಡಿ ಪೂರೈಸಿದ ಸಮವಸ್ತ್ರದಲ್ಲಿ ಅವ್ಯವಹಾರ ನಡೆದಿರುವುದಿಲ್ಲ.
(ಆ)	ಹಾಗಿದ್ದಲ್ಲಿ, ಸರ್ಕಾರಿ ಶಾಲೆಗಳಲ್ಲಿ ನೊಂದಣಿಯಾದ ವಿದ್ಯಾರ್ಥಿಗಳ ಸಂಖ್ಯೆಗಿಂತ ಕಳೆದ 2 ವರ್ಷಗಳಲ್ಲಿ ಹೆಚ್ಚುವರಿ ಸಮವಸ್ತ್ರ ವಿತರಣೆಯಾಗಿರಲು ಕಾರಣವೇನು;	2017-18ನೇ ಸಾಲಿಗೆ ವಿದ್ಯಾರ್ಥಿ ಸಾಧನೆ ಜಾಡೀಕರಣ ವ್ಯವಸ್ಥೆ (ಎಸ್.ಎ.ಟಿ.ಎಸ್) ತಂತ್ರಾಂಶವು ಜಾರಿಗೆ ಬರುವ ಪೂರ್ವದಲ್ಲಿ ಸಮವಸ್ತ್ರ ಸರಬರಾಜು ಮಾಡಲು ಜಿಲ್ಲಾ ಉಪನಿರ್ದೇಶಕರಿಂದ ವಿದ್ಯಾರ್ಥಿಗಳ ದಾಖಲಾತಿ/ ಹಾಜರಾತಿ ಮಾಹಿತಿ ಆಧಾರದ ಮೇಲೆ ಬೇಡಿಕೆಪಟ್ಟಿಯನ್ನು ಆಯುಕ್ತರ ಹಂತದಲ್ಲಿ ಪಡೆದು ವಿದ್ಯಾರ್ಥಿಗಳಿಗೆ ಸಮವಸ್ತ್ರ ಸರಬರಾಜು ಮಾಡಲಾಗುತ್ತಿತ್ತು. ಸದರಿ ಬೇಡಿಕೆ ಪಟ್ಟಿ ಸಲ್ಲಿಸುವಾಗ ಶಾಲೆಗಳಿಗೆ ದಾಖಲಾಗುವ ಮಕ್ಕಳ ಸಂಖ್ಯೆಯನ್ನು ಅಂದಾಜಿಸಿ ಲೆಕ್ಕ ಹಾಕಲಾಗುತ್ತಿತ್ತು. ಮುಂದಿನ ವರ್ಷದಲ್ಲಿ ಬೇಡಿಕೆ ಪಟ್ಟಿ ಸಲ್ಲಿಸುವಾಗ ಹಿಂದಿನ ವರ್ಷದ ಸರಬರಾಜಿನಲ್ಲಿ ಹೆಚ್ಚುವರಿ ಬಟ್ಟೆ ಸರಬರಾಜಾಗಿದ್ದಲ್ಲಿ, ಅದನ್ನು ಕಳೆದು ಬೇಡಿಕೆ ಸಲ್ಲಿಸಲಾಗುತ್ತಿತ್ತು. ಅದರಂತೆ, ಪ್ರತಿ ವರ್ಷವೂ ಸರಿದೂಗಿಸಿಕೊಂಡು ಮರುಹೊಂದಾಣಿಕೆ ಮಾಡಿಕೊಳ್ಳಲಾಗಿದೆ. ಅದರಂತೆ, 2016-17ನೇ ಸಾಲಿನಲ್ಲಿ ಬೇಡಿಕೆ ಪಡೆಯುವಾಗ ದಾಸ್ತಾನುವಹಿಯನ್ನು ಪರಿಶೀಲಿಸಿಕೊಂಡು ಹೆಚ್ಚುವರಿಯಾಗಿರುವ ಸಮವಸ್ತ್ರಗಳನ್ನು ಕಳೆದು, ಬಾಕಿ ಬೇಕಾಗಿರುವ ಸಮವಸ್ತ್ರ ಬಟ್ಟೆಗಳ ಸರಬರಾಜಿಗೆ ಬೇಡಿಕೆ ಸಲ್ಲಿಸಲು ಸೂಚಿಸಲಾಗಿತ್ತು. ಆದರೂ, ಈ ಸಾಲಿನಲ್ಲಿ ವ್ಯತ್ಯಾಸದ ಪ್ರಮಾಣ ಹೆಚ್ಚಾಗಿದ್ದುದರಿಂದ, ಈ ವಿಚಾರವಾಗಿ ಹೆಚ್ಚುವರಿ ಸಮವಸ್ತ್ರ ಪೂರೈಕೆ ಬಗ್ಗೆ ಇಲಾಖೆಯಿಂದ ತಪಾಸಣೆಗೆ ತಂಡ ರಚಿಸಿ ಆದೇಶಿಸಲಾಗಿದ್ದು, ತಪಾಸಣಾ ವರದಿ ನಿರೀಕ್ಷಿಸಲಾಗಿದೆ.
(ಇ)	ಈ ವಿಚಾರಕ್ಕೆ ಸಂಬಂಧಿಸಿದಂತೆ ಸಿ.ಎ.ಜಿ. ವರದಿ ನೀಡಿದ್ದರೂ ಸರ್ಕಾರ ಈ ವರೆಗೆ ಕ್ರಮ ಕೈಗೊಳ್ಳದಿರಲು ಕಾರಣವೇನು?	

ಇಡಿ 191 ಯೋಯೋಕ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1258
ಸದಸ್ಯರ ಹೆಸರು	:	ಶ್ರೀ ಅನಿಲ್ ಎಸ್ ಬೆನಕೆ (ಬೆಳಗಾವಿ ಉತ್ತರ)
ಉತ್ತರಿಸಬೇಕಾದ ದಿನಾಂಕ	:	18-12-2018
ಉತ್ತರಿಸುವ ಸಚಿವರು	:	ಮಾನ್ಯ ಮುಖ್ಯಮಂತ್ರಿಗಳು

ಪ್ರಶ್ನೆ	ಉತ್ತರ
(ಅ) ಕಳೆದ ಎರಡು ವರ್ಷಗಳಲ್ಲಿ ಬೆಳಗಾವಿ ಜಿಲ್ಲೆಯ ಸರ್ಕಾರಿ ಶಾಲಾ ಮಕ್ಕಳಿಗೆ ಎಷ್ಟು ಸೈಕಲ್‌ಗಳನ್ನು ವಿತರಿಸಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು)	2016-17 ಮತ್ತು 2017-18ನೇ ಸಾಲಿನಲ್ಲಿ ಬೆಳಗಾವಿ ಜಿಲ್ಲೆಯ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ 8ನೇ ತರಗತಿಯ ಮಕ್ಕಳಿಗೆ ಸೈಕಲ್‌ಗಳನ್ನು ವಿತರಣೆ ಮಾಡಿರುವ ತಾಲ್ಲೂಕುವಾರು ವಿವರ ಈ ಕೆಳಕಂಡಂತೆ ಇರುತ್ತದೆ. (ಕೆಳಗಿನ ಕೋಷ್ಟಕ)

ಕ್ರ ಸಂ.	ತಾಲ್ಲೂಕಿನ ಹೆಸರು	2016-17	2017-18
1	ಬೆಳಗಾವಿ ನಗರ	ನಗರ ಪ್ರದೇಶಗಳಿಗೆ ಬೈಸಿಕಲ್ ವಿತರಣೆ ಕಾರ್ಯಕ್ರಮ ಇರುವುದಿಲ್ಲ	
2	ಬೆಳಗಾವಿ ಗ್ರಾಮಾಂತರ	5042	5029
3	ಬೈಲಹೊಂಗಲ	2752	2696
4	ಖಾನಾಪುರ	3215	3385
5	ಕಿತ್ತೂರು	1623	1684
6	ರಾಮದುರ್ಗ	3300	3030
7	ಸೌಂದತ್ತಿ	3841	3833
8	ಅಥಣಿ	4931	4772
9	ಕಾಗವಾಡ	1704	1827
10	ಚಿಕ್ಕೋಡಿ	3893	4071
11	ನಿಪ್ಪಾಣಿ	3358	3438
12	ಹುಕ್ಕೇರಿ	5375	5391
13	ರಾಯಬಾಗ	5544	5451
14	ಗೋಕಾಕ	3379	3275
15	ಮೂಡಲಗಿ	5117	5223
	ಒಟ್ಟು	**53074**	**53105**

ಪ್ರಶ್ನೆ	ಉತ್ತರ
(ಆ) ವಿತರಿಸಲಾಗಿರುವ ಸೈಕಲ್‌ಗಳು ಕಳಪೆ ಗುಣಮಟ್ಟದಿಂದ ಕೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಈ ಸಂಬಂಧ ದೂರುಗಳು ಬಂದಿರುತ್ತವೆ.
(ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದ ಕ್ರಮವೇನು;	• ಬೈಸಿಕಲ್‌ಗಳ ತಯಾರಿಕೆ ಹಂತದಲ್ಲಿ ಹಾಗೂ ಮಕ್ಕಳಿಗೆ ವಿತರಣೆ ಮಾಡಿದ ನಂತರ ಬೈಸಿಕಲ್‌ಗಳ ಗುಣಮಟ್ಟದ ಬಗ್ಗೆ Visual Inspection ಹಾಗೂ Crash Test ಗಳನ್ನು, ಮೂರನೇ ಸಂಸ್ಥೆಯಾದ ಆರ್ ಅಂಡ್ ಡಿ ಸೆಂಟರ್ ಫಾರ್ ಬೈಸಿಕಲ್ ಅಂಡ್ ಸಿವಿಂಗ್ ಮೆಷಿನ್, ಲೂದಿಯಾನ ಇವರಿಂದ ಪರಿಶೀಲನೆಯನ್ನು ಮಾಡಿಸಿ ವರದಿಯನ್ನು ಪಡೆಯಲಾಗುತ್ತದೆ.

	• ಬ್ಲಾಕ್ ಹಂತದಲ್ಲಿ ಬೈಸಿಕಲ್‌ಗಳ ಜೋಡಣೆಯ ಕಾರ್ಯ ನಡೆಯುವ ಸಂದರ್ಭದಲ್ಲಿ ಪರಿಶೀಲನೆ ಮಾಡಲು ವಿವಿಧ ಹಂತಗಳಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧಿಕಾರಿಗಳ ತಂಡಗಳನ್ನು ರಚಿಸಲಾಗಿದ್ದು, ಸದರಿ ಪರಿಶೀಲನಾ ತಂಡವು ಬೈಸಿಕಲ್‌ಗಳ ಜೋಡಣೆಯನ್ನು ಪರಿಶೀಲಿಸಿದ ನಂತರ ಪ್ರತಿ ಶಾಲಾ ಮಟ್ಟದಲ್ಲಿ ಎಸ್.ಡಿ.ಎಂ.ಸಿ. ಸದಸ್ಯರು, ಶಾಲಾ ಮುಖ್ಯ ಶಿಕ್ಷಕರು ಹಾಗೂ ಸ್ಥಳೀಯ ಸರ್ಕಾರಿ ನೌಕರರನ್ನು ಒಳಗೊಂಡ ಸಮಿತಿಯನ್ನು ರಚಿಸಿಕೊಂಡು ಬೈಸಿಕಲ್‌ಗಳ ಗುಣಮಟ್ಟ ಹಾಗೂ ಜೋಡಣೆ ಸರಿಯಾಗಿರುವುದನ್ನು ಖಾತ್ರಿ ಪಡಿಸಿಕೊಂಡು ನಂತರ ಶಾಲಾ ಮಕ್ಕಳಿಗೆ ವಿತರಣೆ ಮಾಡಲು ತಿಳಿಸಲಾಗಿದ್ದು, ಅದರಂತೆ ಶಾಲಾ ಹಂತದಲ್ಲಿ ಪರಿಶೀಲಿಸಿಕೊಂಡು ವಿತರಣೆ ಮಾಡಲಾಗುತ್ತದೆ. • ಆರ್ ಅಂಡ್ ಡಿ ಸೆಂಟರ್ ಫಾರ್ ಬೈಸಿಕಲ್ ಅಂಡ್ ಸಿವಿಂಗ್ ಮೆಷಿನ್. ಲೂಧಿಯಾನ ಸಂಸ್ಥೆಯಿಂದ ಈವರೆವಿಗೂ ತಯಾರಿಕಾ ಹಂತದಲ್ಲಿನ Visual Inspection ಹಾಗೂ Crash Test ವರದಿ ಸ್ವೀಕೃತವಾಗಿದ್ದು, ಅವರ ವರದಿಯನ್ವಯ ಗುಣಮಟ್ಟ ತೃಪ್ತಿಕರವಾಗಿರುತ್ತದೆ ಎಂದು ವರದಿ ಸಲ್ಲಿಸಿರುತ್ತಾರೆ. ಸರಬರಾಜು ನಂತರದ Crash Test ಮಾಡಬೇಕಾಗಿರುತ್ತದೆ. • ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧಿಕಾರಿಗಳನ್ನು ಒಳಗೊಂಡ ವಿಭಾಗೀಯ ಹಂತದ ಹಾಗೂ ಜಿಲ್ಲಾ ಹಂತದ ಪರಿಶೀಲನಾ ತಂಡಗಳಿಗೆ ಈಗಾಗಲೇ ಸರಬರಾಜು ಮಾಡಿರುವ ಬೈಸಿಕಲ್‌ಗಳಲ್ಲಿ ರ್‍ಯಾಂಡಮ್ ಪರಿಶೀಲನೆ ಮಾಡಿ ವರದಿ ಸಲ್ಲಿಸುವಂತೆ ಸೂಚನೆಗಳನ್ನು ನೀಡಲಾಗಿದೆ. ಪ್ರಸ್ತುತ, ಬೈಸಿಕಲ್‌ಗಳ ವಿತರಣೆಯನ್ನು ತಾತ್ಕಾಲಿಕವಾಗಿ ತಡೆಹಿಡಿಯಲಾಗಿದೆ.
(ಈ) ಸೈಕಲ್‌ಗಳನ್ನು ಪೂರೈಸಲು ಸರ್ಕಾರ ಯಾವ ಸಂಸ್ಥೆಗೆ ಗುತ್ತಿಗೆ ನೀಡಲಾಗಿದೆ; ಪ್ರಸಕ್ತ ಸಾಲಿನಲ್ಲಿ ಎಷ್ಟು ಸೈಕಲ್‌ಗಳನ್ನು ವಿತರಿಸಲಾಗಿದೆ; (ಶಾಲೆಗಳವಾರು ವಿವರ ನೀಡುವುದು)?	• 2018-19ನೇ ಸಾಲಿನಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಬೈಸಿಕಲ್‌ಗಳನ್ನು ಪೂರೈಸಲು ಮೆ॥ ಹಿರೋ ಸೈಕಲ್ಸ್, ಲೂಧಿಯಾನ ಹಾಗೂ ಮೆ॥ ಏವನ್ ಸೈಕಲ್ಸ್, ಲೂಧಿಯಾನ ಸಂಸ್ಥೆಗಳಿಗೆ ಆದೇಶ ನೀಡಲಾಗಿದೆ. • ಪ್ರಸಕ್ತ ಸಾಲಿನಲ್ಲಿ ನವೆಂಬರ್ ಅಂತ್ಯದವರೆಗೆ 51396 ಸೈಕಲ್‌ಗಳನ್ನು ವಿತರಿಸಲಾಗಿದೆ. (ಶಾಲಾವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ)

ಇಡಿ 195 ಯೋಯೋಕ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2126
ಸದಸ್ಯರ ಹೆಸರು	:	ಶ್ರೀ ಅಂಗಾರ ಎಸ್ (ಸುಳ್ಯ)
ಉತ್ತರಿಸಬೇಕಾದ ದಿನಾಂಕ	:	18-12-2018
ಉತ್ತರಿಸುವ ಸಚಿವರು	:	ಮಾನ್ಯ ಮುಖ್ಯಮಂತ್ರಿಗಳು

	ಪ್ರಶ್ನೆ	ಉತ್ತರ
(ಅ)	ಸುಳ್ಯ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕಳೆದ 3 ವರ್ಷಗಳಿಂದ ಶಿಕ್ಷಣ ಇಲಾಖೆಯಿಂದ ಕೆ.ಆರ್.ಐ.ಡಿ.ಎಲ್ ಮಂಗಳೂರು ಸಂಸ್ಥೆಗೆ ಯಾವ ಯಾವ ಕಾಮಗಾರಿಗಳನ್ನು ನಿರ್ವಹಿಸಲು ವಹಿಸಲಾಗಿದೆ; ಎಷ್ಟು ಕಾಮಗಾರಿಗಳು ಪೂರ್ಣಗೊಂಡಿವೆ; ಎಷ್ಟು ಬಾಕಿ ಉಳಿದಿರುತ್ತದೆ; (ಯೋಜನೆ, ಅಂದಾಜು ವೆಚ್ಚ, ವರ್ಷವಾರು ಸಂಪೂರ್ಣ ವಿವರ ನೀಡುವುದು)	ಸುಳ್ಯ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕಳೆದ 3 ವರ್ಷಗಳಿಂದ ಶಿಕ್ಷಣ ಇಲಾಖೆಯಿಂದ ಕೆ.ಆರ್.ಐ.ಡಿ.ಎಲ್ ಮಂಗಳೂರು ಸಂಸ್ಥೆಗೆ ಯಾವುದೇ ಕಾಮಗಾರಿಗಳನ್ನು ವಹಿಸಲಾಗಿರುವುದಿಲ್ಲ.
(ಆ)	ಬಾಕಿ ಉಳಿದಿರುವ ಕಾಮಗಾರಿಗಳನ್ನು ಎಷ್ಟು ಸಮಯದಲ್ಲಿ ಪೂರ್ಣಗೊಳಿಸಲಾಗುವುದು?	ಉದ್ಭವಿಸುವುದಿಲ್ಲ.

ಇಡಿ 334 ಯೋಸಕ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2057
ಸದಸ್ಯರ ಹೆಸರು	:	ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ (ಇಂಡಿ)
ಉತ್ತರಿಸಬೇಕಾದ ದಿನಾಂಕ	:	18-12-2018
ಉತ್ತರಿಸುವ ಸಚಿವರು	:	ಮಾನ್ಯ ಮುಖ್ಯಮಂತ್ರಿಗಳು

	ಪ್ರಶ್ನೆ	ಉತ್ತರ
(ಅ)	ವಿದ್ಯಾ ವಿಕಾಸ ಯೋಜನೆಯಡಿ ಶಿಕ್ಷಣ ಇಲಾಖೆಗೆ ಸಮವಸ್ತ್ರ ಪೂರೈಸುತ್ತಿರುವ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು ರಾಜ್ಯದಲ್ಲಿನ ನೇಕಾರರಿಂದ ಬಟ್ಟೆ ಖರೀದಿಸದೇ ಶಿಕ್ಷಣ ಇಲಾಖೆಯ ಷರತ್ತುಗಳನ್ನು ಉಲ್ಲಂಘಿಸಿ ಬೇರೆ ಮೂಲಗಳಿಂದ ಬಟ್ಟೆ ಖರೀದಿಸುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿರುವುದಿಲ್ಲ.
(ಆ)	ಬಂದಿದ್ದಲ್ಲಿ, ಸಮವಸ್ತ್ರ ಪೂರೈಕೆಯಲ್ಲಿ ಷರತ್ತುಗಳನ್ನು ಉಲ್ಲಂಘಿಸಿ ಶಿಕ್ಷಣ ಇಲಾಖೆಗೆ ವಂಚಿಸಿದ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ವಿರುದ್ಧ ಸರ್ಕಾರ ಕ್ರಮ ಕೈಗೊಳ್ಳಲಾಗಿದೆಯೇ(ವಿವರ ನೀಡುವುದು)	ಉದ್ಭವಿಸುವುದಿಲ್ಲ.
(ಇ)	ಈ ಹಿಂದೆ ಶಿಕ್ಷಣ ಇಲಾಖೆಯಿಂದ ಸಮವಸ್ತ್ರ ಪೂರೈಕೆಗಾಗಿ ಕಾರ್ಯಾದೇಶ ಪಡೆದ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು ಬೇಡಿಕೆಯಷ್ಟು ಬಟ್ಟೆ ಪೂರೈಕೆ ಅಸಾಧ್ಯ ಎಂದು ತಿಳಿಸಿದ್ದರೂ, ಇಲಾಖೆ ಮತ್ತೆ ಅಂತಹ ಸಂಸ್ಥೆಗಳಿಗೇ ಬಟ್ಟೆ ಪೂರೈಸುವ ಹೊಣೆ ನೀಡಲು ಕಾರಣವೇನು;	ರಾಜ್ಯದ ಕೈಮಗ್ಗ ನೌಕರರ ಹಿತದೃಷ್ಟಿಯಿಂದ ವಿದ್ಯಾವಿಕಾಸ ಯೋಜನೆಯಡಿ ಶಾಲಾ ಮಕ್ಕಳ ಸಮವಸ್ತ್ರ ಬಟ್ಟೆ ಸರಬರಾಜಿನ ಹೊಣೆಗಾರಿಕೆಯನ್ನು ನೇರವಾಗಿ ಸರ್ಕಾರಿ ಸ್ವಾಮ್ಯದ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ (ಕೆ.ಹೆಚ್.ಡಿ.ಸಿ) ಮತ್ತು ಕರ್ನಾಟಕ ರಾಜ್ಯ ಜವಳಿ ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆ.ಎಸ್.ಟಿ.ಐ.ಡಿ.ಸಿ) ಸಂಸ್ಥೆಗಳಿಗೆ ಅವುಗಳ ಸಾಮರ್ಥ್ಯಕ್ಕನುಗುಣವಾಗಿ ನೀಡಲಾಗುತ್ತಿದೆ.
(ಈ)	ವಿದ್ಯಾವಿಕಾಸ ಯೋಜನೆಯಡಿ ಬಟ್ಟೆ ಖರೀದಿಯಲ್ಲಿ ಪಾರದರ್ಶಕ ಅಧಿನಿಯಮ ಅಳವಡಿಸಿಕೊಂಡು ಸ್ಪರ್ಧಾತ್ಮಕ ಮಾರುಕಟ್ಟೆಯಲ್ಲಿ ಉತ್ತಮ ಬಟ್ಟೆ ಖರೀದಿಸಿ ಶಾಲಾ ಮಕ್ಕಳಿಗೆ ಕಳಪೆ ಸಮವಸ್ತ್ರ ಪೂರೈಕೆ ತಡೆಯುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು (ವಿವರ ನೀಡುವುದು)?	ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ಸಾಮರ್ಥ್ಯಕ್ಕೆ ಅನುಗುಣವಾಗಿ ಸಮವಸ್ತ್ರ ಸರಬರಾಜು ಆದೇಶ ನೀಡಿದ ನಂತರ, ಇನ್ನೂ ಹೆಚ್ಚುವರಿಯಾಗಿ ಅಗತ್ಯವಾದ ಶಾಲಾ ಸಮವಸ್ತ್ರ ಬಟ್ಟೆಯನ್ನು ಸ್ಪರ್ಧಾತ್ಮಕ ದರದಲ್ಲಿ ಕರ್ನಾಟಕ ಪಾರದರ್ಶಕ ಅಧಿನಿಯಮಗಳಡಿ ಇ-ಟೆಂಡರ್ ಮೂಲಕ ಖರೀದಿಸಿ ವಿತರಿಸಲಾಗುತ್ತಿದೆ.

	ಶಾಲಾ ಮಕ್ಕಳಿಗೆ ಗುಣಮಟ್ಟದ ಸಮವಸ್ತ್ರ ಪೂರೈಸುವ ನಿಟ್ಟಿನಲ್ಲಿ ಸಮವಸ್ತ್ರ ಸರಬರಾಜಿನ ಮೊದಲು ಹಾಗೂ ತಾಲ್ಲೂಕು ಹಂತದವರೆಗೆ ಸಮವಸ್ತ್ರಗಳು ಸರಬರಾಜಾದ ನಂತರ ಯಾದೃಚ್ಛಿಕವಾಗಿ (Random) ಸಮವಸ್ತ್ರ ಸ್ಯಾಂಪಲ್‌ಗಳನ್ನು ಆಯ್ದು ಕೇಂದ್ರ ಸರ್ಕಾರದ ಸಂಸ್ಥೆಗಳಾದ CSTRI (Central Silk Technological Research Institute), Ministry of Textiles, Govt of India, Madivala ಹಾಗೂ Textile Committee, Ministry of Textiles, Govt of Indiaಗೆ ಕಳುಹಿಸಿ ಇಲಾಖೆಯು ನಿಗದಿಪಡಿಸಿರುವ ಗುಣಮಟ್ಟ ಇರುವ ಬಗ್ಗೆ ಖಚಿತಪಡಿಸಿಕೊಳ್ಳಲಾಗುತ್ತಿದೆ.

ಇಡಿ 190 ಯೋಯೋಕ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1251
ಸದಸ್ಯರ ಹೆಸರು : ಶ್ರೀ ಅಪ್ಪಚ್ಚು(ರಂಜನ್) ಎಂ.ಪಿ (ಮಡಿಕೇರಿ)
ಉತ್ತರಿಸುವ ದಿನಾಂಕ : 18-12-2018
ಉತ್ತರಿಸುವ ಸಚಿವರು : ಮುಖ್ಯಮಂತ್ರಿಯವರು.

	ಪ್ರಶ್ನೆ	ಉತ್ತರ
ಅ.	ರಾಜ್ಯದಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರ ಸಂಖ್ಯೆ ಎಷ್ಟು; ಇವರಿಗೆ ನೀಡುತ್ತಿರುವ ವೇತನವೆಷ್ಟು; ವೇತನ ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು;	ಅ) ಅತಿಥಿ ಉಪನ್ಯಾಸಕರ ಸಂಖ್ಯೆ: 2756. ಆ) ಮಾಸಿಕ ರೂ.9,000/-(ಒಂಬತ್ತು ಸಾವಿರ) ಗಳ ಗೌರವಧನ ನೀಡಲಾಗುತ್ತಿದೆ. ಇ) ಗೌರವಧನ ಹೆಚ್ಚಿಸುವ ಬಗ್ಗೆ ಸದ್ಯಕ್ಕೆ ಯಾವುದೇ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿ ಇರುವುದಿಲ್ಲ.
ಆ.	ಅತಿಥಿ ಉಪನ್ಯಾಸಕರನ್ನು ಖಾಯಂಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಇದ್ದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು(ಪೂರ್ಣ ವಿವರ ನೀಡುವುದು);	ಇಲ್ಲ. ಮಾನ್ಯ ಸರ್ವೋಚ್ಚ ನ್ಯಾಯಾಲಯದ ಉಮಾದೇವಿ ಪ್ರಕರಣದಲ್ಲಿನ ತೀರ್ಪಿನನ್ವಯ ಅತಿಥಿ ಉಪನ್ಯಾಸಕರನ್ನು ಖಾಯಂಗೊಳಿಸಲು ಅವಕಾಶ ಇರುವುದಿಲ್ಲ.
ಇ.	ರಾಜ್ಯದಲ್ಲಿ ಎಷ್ಟು ಪದವಿ ಪೂರ್ವ ಕಾಲೇಜು ಇವೆ; ಈ ಪೈಕಿ ಎಷ್ಟು ಕಾಲೇಜಿಗೆ ಸ್ವಂತ ಕಟ್ಟಡ ಇದೆ; ಸ್ವಂತ ಕಟ್ಟಡ ಇರದ ಸಂಸ್ಥೆಗೆ ಯಾವಾಗ ಕಟ್ಟಡ ಮಂಜೂರಾತಿ ಮಾಡಲಾಗುವುದು (ಕ್ಷೇತ್ರವಾರು ವಿವರ ನೀಡುವುದು)	(see table below)

ಒಟ್ಟು ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ	ಸ್ವಂತ ಕಟ್ಟಡ ಹೊಂದಿರುವ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ	ಸ್ವಂತ ಕಟ್ಟಡ ಹೊಂದದಿರುವ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ;
1231	1206	25

ಸ್ವಂತ ಕಟ್ಟಡ ಹೊಂದಿರದ ಕೆಲವು ಸರ್ಕಾರಿ ಪದವಿ ಪೂರ್ವ ಕಾಲೇಜುಗಳು 2017-2018 ನೇ ಸಾಲು ಮತ್ತು ಪ್ರಸಕ್ತ ಸಾಲಿನಲ್ಲಿ ಮಂಜೂರಾಗಿರುತ್ತವೆ. ಇವುಗಳಲ್ಲಿ ಕೆಲವು ಕಾಲೇಜುಗಳಿಗೆ ನಿವೇಶನ ಸಮಸ್ಯೆ ಹಾಗೂ ಕೆಲವು ಕಾಲೇಜುಗಳು ದಾಖಲಾತಿ ಕೊರತೆಯಿಂದ ಸ್ಥಳಾಂತರಗೊಂಡ ಕಾಲೇಜುಗಳಾಗಿರುವುದರಿಂದ ಸ್ವಂತ ಕಟ್ಟಡ ಹೊಂದಿರುವದಿಲ್ಲ. ಮುಂದಿನ ದಿನಗಳಲ್ಲಿ ಲಭ್ಯವಾಗುವ ಯೋಜನೆ ಮತ್ತು ಅನುದಾನದಲ್ಲಿ ಸ್ವಂತ ಕಟ್ಟಡವನ್ನು ಒದಗಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಸ್ವಂತ ಕಟ್ಟಡ ಹೊಂದಿರದ 25 ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಕ್ಷೇತ್ರವಾರು ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಿದೆ.

ಈ.	ಹೊಸದಾಗಿ ಪದವಿ ಪೂರ್ವ ಕಾಲೇಜು ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಕೊಡಗು ಜಿಲ್ಲೆ ಮಾದಾಪುರದಲ್ಲಿ ಈ ಹಿಂದೆ ಪದವಿ ಪೂರ್ವ ಕಾಲೇಜಿಗೆ ಪ್ರಸ್ತಾವನೆ ಸಲ್ಲಿಸಿದ್ದರೂ ಈ ವರೆವಿಗೂ ಮಂಜೂರಾಗದಿರಲು ಕಾರಣವೇನು; ಯಾವಾಗ ಮಂಜೂರು ಮಾಡಲಾಗುವುದು. (ಪೂರ್ಣ ವಿವರ ನೀಡುವುದು);	ಇಲ್ಲ. ಆದರೆ, ಪ್ರಥಮ ಹಂತದಲ್ಲಿ ಮೂಲಭೂತ ಸೌಕರ್ಯಗಳಿರುವ 362 ಸರ್ಕಾರಿ ಪ್ರೌಢ ಶಾಲೆಗಳನ್ನು ಪದವಿ ಪೂರ್ವ ಕಾಲೇಜನ್ನಾಗಿ ಉನ್ನತೀಕರಿಸುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತಿದೆ. ಸದರಿ ಕ್ರೋಢೀಕೃತ ಪಟ್ಟಿಯಲ್ಲಿ ಕೊಡಗು ಜಿಲ್ಲೆ ಮಾದಾಪುರದಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರಾರಂಭಿಸುವ ಪ್ರಸ್ತಾವನೆ ಇರುವುದಿಲ್ಲ. ಮಾದಾಪುರದಲ್ಲಿ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸುವ ಅಗತ್ಯತೆ ಹಾಗೂ ಈ ಸಂಬಂಧ ಸರ್ಕಾರಿ ಪ್ರೌಢ ಶಾಲೆಯಲ್ಲಿ ಲಭ್ಯವಿರುವ ಮೂಲಭೂತ ಸೌಕರ್ಯಗಳ ವಿವರಗಳನ್ನು ಒಳಗೊಂಡ ಪ್ರಸ್ತಾವನೆಯನ್ನು ಪಡೆದು ಪರಿಶೀಲಿಸಲಾಗುವುದು.
ಉ.	ಕಳೆದ ಮೂರು ವರ್ಷಗಳಿಂದ ಎಷ್ಟು ಶಾಲೆಗಳು ವಿದ್ಯಾರ್ಥಿಗಳ ಕೊರತೆಯಿಂದ ಮುಚ್ಚಿವೆ (ಕ್ಷೇತ್ರವಾರು ವಿವರ ನೀಡುವುದು) ಸರ್ಕಾರಿ ಶಾಲೆಯ ಉಳಿವಿಗೆ ಸರ್ಕಾರ ತೆಗೆದುಕೊಂಡ ಕ್ರಮವೇನು (ಪೂರ್ಣ ವಿವರ ನೀಡುವುದು)	ರಾಜ್ಯದಲ್ಲಿ ವಿದ್ಯಾರ್ಥಿಗಳ ಕೊರತೆಯಿಂದ ಯಾವುದೇ ಸರ್ಕಾರಿ ಪ್ರಾಥಮಿಕ ಶಾಲೆಗಳನ್ನು ಮುಚ್ಚಿರುವುದಿಲ್ಲ. ಶೂನ್ಯ ದಾಖಲಾತಿ ಹೊಂದಿರುವ 318 ಶಾಲೆಗಳಲ್ಲಿ ತಾತ್ಕಾಲಿಕವಾಗಿ ತರಗತಿಗಳು ನಡೆಯುತ್ತಿರುವುದಿಲ್ಲ. ಈ ಶಾಲೆಗಳಿಗೆ ಮಂಜೂರಾದ ಶಿಕ್ಷಕರನ್ನು ತಾತ್ಕಾಲಿಕವಾಗಿ ಅವಶ್ಯಕತೆ ಇರುವ ಸಮೀಪದ ಶಾಲೆಗಳಿಗೆ ನಿಯೋಜಿಸಲಾಗಿದ್ದು, ಮುಂದಿನ ದಿನಗಳಲ್ಲಿ ಈ ಶಾಲೆಗಳಿಗೆ ಮಕ್ಕಳು ದಾಖಲಾದಲ್ಲಿ ಆ ಶಿಕ್ಷಕರನ್ನು ಈ ಶಾಲೆಗಳಿಗೆ ಮರುನಿಯುಕ್ತಿಗೊಳಿಸಿ ತರಗತಿಗಳನ್ನು ಪುನರಾರಂಭಿಸಲಾಗುವುದು.

ಸಂಖ್ಯೆ: ಇಡಿ 352 ಡಿಜಿಡಬ್ಲ್ಯೂ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ.

ಅನುಬಂಧ-01

ಸ್ವಂತ ಕಟ್ಟಡ ಇಲ್ಲದ ಸ.ಪ.ಪೂ ಕಾಲೇಜುಗಳ ಕ್ಷೇತ್ರವಾರು ವಿವರ

ಕ್ರ.ಸಂ	ಜಿಲ್ಲೆಯ ಹೆಸರು	ವಿಧಾನ ಸಭಾ ಕ್ಷೇತ್ರ	ಸ್ವಂತ ಕಟ್ಟಡ ಇಲ್ಲದ ಸ.ಪ.ಪೂ ಕಾಲೇಜಿನ ವಿಳಾಸ
	ಬೆಂಗಳೂರು ಉತ್ತರ	ಹೆಬ್ಬಾಳ	ಮಠದಹಳ್ಳಿ, ಜೆ.ಸಿ.ನಗರ
2	ಬಳ್ಳಾರಿ	ಬಳ್ಳಾರಿ ನಗರ	ಪಿ.ಡಿ ಹಳ್ಳಿ
3	ಚಿಕ್ಕೋಡಿ	ಕುಡಚಿ	ಹಂದಿಗುಂದ
4	ಬಾಗಲಕೋಟೆ	ಬಾದಮಿ	ಪಟ್ಟದಕಲ್ಲು
5	ವಿಜಯಪುರ	ಇಂಡಿ	ಇಂಡಿ
6	ದಾವಣಗೆರೆ	ಹೊನ್ನಾಳಿ	ಚೀಲೂರು
7		ಹರಪನಹಳ್ಳಿ	ಚಿಗಟೇರಿ
8	ಗದಗ	ಗದಗ	ಚಿಂಚಲಿ
9		ಗದಗ	ಮುಳಗುಂದ
10	ಹಾಸನ	ಹಾಸನ	ಚನ್ನಪಟ್ಟಣ
11	ಕೋಲಾರ	ಶ್ರೀನಿವಾಸಪುರ	ಮುತಕಪಲ್ಲಿ
12	ಮೈಸೂರು	ನರಸಿಂಹರಾಜ	ರಾಜೀವ ನಗರ
13		ನರಸಿಂಹರಾಜ	ಕಲ್ಯಾಣಗಿರಿ
14	ಮಂಡ್ಯ	ಮದ್ದೂರು	ಭಾರತೀನಗರ
15		ಕೆ.ಆರ್.ಪೇಟೆ	ಮಂದಗೆರೆ
16		ಶ್ರೀರಂಗಪಟ್ಟಣ	ಮಹದೇವಪುರ
17	ಉತ್ತರ ಕನ್ನಡ	ಶಿರಿಸಿ -ಸಿದ್ದಾಪುರ	ಮಾರಿಗುಡಿ
18	ರಾಯಚೂರು	ರಾಯಚೂರು ಗ್ರಾಮೀಣ	ಜಹೀರಾಬದ್
19		ರಾಯಚೂರು ಗ್ರಾಮೀಣ	ಪೋಲಿಸ್ ಕಾಲೋನಿ
20		ಮಾನ್ವಿ	ಬ್ಯಾಗವಾಟ
21		ಮಾನ್ವಿ	ಕುರಗುಂದ
22	ದಕ್ಷಿಣ ಕನ್ನಡ	ಮಂಗಳೂರು ದಕ್ಷಿಣ	ಬೊಕ್ಕಪಟ್ಟಣ
23	ಶಿವಮೊಗ್ಗ	ಶಿಕಾರಿಪುರ	ಚಿಕ್ಕಜಂಬೂರು
24	ತುಮಕೂರು	ಚಿಕ್ಕನಾಯಕನಹಳ್ಳಿ	ಹಂದನಕೆರೆ
25		ಮಧುಗಿರಿ	(ಬಾಲಕಿಯರ) ಮಧುಗಿರಿ

ಜಂಟಿ ನಿರ್ದೇಶಕರು
(ಮೂಲಭೂತ ಸೌಲಭ್ಯ)
ಪದವಿ ಪೂರ್ವ ಶಿಕ್ಷಣ ಇಲಾಖೆ